
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಮೇ 28, 2008 ರೂ. 12/-

ಹಂಗ್ ಅಸೆಂಬ್ಲಿಯ ಹಂಗು!



ಯೆಡ್ಡಿ ಸಿಎಂ ಆಗಲ್ಲ!

-ಸೋಮಯಾಜಿ



...ಂಗಾಯತರು ಬಿಜೆಪಿಯ ಗುಲಾಮರಲ್ಲ

-ವೀರಶೈವ ಮಹಾಸಭಾ

ಕ್ಷೇತ್ರ ಸಮೀಕ್ಷೆ

ಹುಬ್ಬಳ್ಳಿ-ಧಾರವಾಡ, ಹಾವೇರಿ, ಗದಗ, ಬೆಳಗಾಂ, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಬೀದರ್

...ವ ಮಾದೇಶನ ರೌದ್ರಾವತಾರ



ಎಲ್ಲಾ ಪಕ್ಷಗಳು ಜನರಿಂದ ಮುಚ್ಚಿಟ್ಟ ಅಸಲಿ ಪ್ರಣಾಳಿಕೆ: MTFP-2008-12

ಚುನಾವಣೆಯ ಸಮಯದಲ್ಲಿ ಎಲ್ಲಾ ಪಕ್ಷಗಳು ಜನರಿಗೆ ವಂಚನೆ ಮಾಡಲು ಪೈಪೋಟಿಯಲ್ಲಿ ತೊಡಗಿರುವಂತೆ ಕಾಣುತ್ತಿದೆ. ಕಳೆದ ಅರವತ್ತು ವರ್ಷಗಳಿಂದ ಈ ಪಕ್ಷಗಳು ಮಾಡಿಕೊಂಡು ಬಂದಿರುವುದೂ ಅದನ್ನೇ ಆದರೂ ಈ ಚುನಾವಣೆಯಲ್ಲಿ ಈ ಬಹಿರಂಗ ವಂಚನೆ ತಾರಕಕ್ಕೆ ಮುಟ್ಟಿದೆ. ಏಕೆಂದರೆ ಈಗ ಜಾಗತೀಕರಣದ ಕಾಲಘಟ್ಟದಲ್ಲಿ ಈ ಪಕ್ಷಗಳ ಸ್ವಹಿತ ಮತ್ತು ಸ್ವಾರ್ಥದ ಜೊತೆಗೆ ಪರಮ ಜನದ್ರೋಹ ಮತ್ತು ದೇಶದ್ರೋಹವೂ ಸೇರಿಕೊಂಡಿದೆ.

ಈ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ನೀಡಿರುವ ಯಾವ ಭರವಸೆಗಳೂ ಈಡೇರಿಸಲು ಸಾಧ್ಯವಾಗದಂತಹದ್ದು ಮಾತ್ರವಲ್ಲ ಇಂಥ ಜನಕಲ್ಯಾಣ ಯೋಜನೆಗಳನ್ನು ಯಾವ ಕಾರಣಕ್ಕೂ ಜಾರಿಗೆ ತರುವುದಿಲ್ಲವೆಂದು ಇದೇ ಪಕ್ಷಗಳೇ ಸರ್ಕಾರದಲ್ಲಿದ್ದಾಗ ವಿಶ್ವಬ್ಯಾಂಕ್ ಮತ್ತು ಐಎಂಎಫ್ ಜೊತೆ ಒಪ್ಪಂದ ಮಾಡಿಕೊಂಡಿವೆ. ಉದಾಹರಣೆಗೆ 2002ರಲ್ಲಿ ವಿಶ್ವಬ್ಯಾಂಕ್‌ನ ಒತ್ತಡದನುಸಾರ ನಮ್ಮ ರಾಜ್ಯ ಸರ್ಕಾರ Fiscal Responsibility Act 2002 ಜಾರಿಗೆ ತಂದಿದೆ. ಅದು ಕಾಯಿದೆಯಾದಾಗ ಆಗಿನ ವಿರೋಧ ಪಕ್ಷಗಳಾಗಿದ್ದ ಜೆಡಿಎಸ್ ಮತ್ತು ಬಜೆಪಿಯಾದಿಯಾಗಿ ಎಲ್ಲಾ ಪಕ್ಷಗಳು ಅದಕ್ಕೆ ಓಟು ಹಾಕಿದವು. ಮತ್ತು ತಾವು ತಲಾ 20 ತಿಂಗಳು ಅಧಿಕಾರ ಸವಿದಾಗ ಚಾಚೂ ತಪ್ಪದೆ ಅನುಷ್ಠಾನಕ್ಕೆ ತಂದಿದ್ದವು.



ಈ ಕಾಯಿದೆಯ ಪ್ರಕಾರ ಸರ್ಕಾರ ತನ್ನ ಖರ್ಚನ್ನೆಲ್ಲಾ ಕಡಿಮೆ ಮಾಡಿಕೊಂಡು ಆದಾಯ ಜಾಸ್ತಿ ಮಾಡಿಕೊಳ್ಳಬೇಕು. ಖರ್ಚನ್ನು ಕಡಿಮೆ ಮಾಡಿಕೊಳ್ಳಲು ಸ್ಪಷ್ಟ ಯೋಜನೆ ಮಾಡಿಕೊಂಡು ಸೆಕ್ಷನ್ 3 ರ ಪ್ರಕಾರ ವರ್ಷ Medium Term Fiscal Policy (MTFP)ಅನ್ನು ಘೋಷಿಸುತ್ತಿರಬೇಕು. ವಾಸ್ತವವಾಗಿ ಇದೇ ಎಲ್ಲಾ ಸರ್ಕಾರಗಳ ಅಸಲಿ ಪ್ರಣಾಳಿಕೆ ಮತ್ತು ಅಸಲಿ ಬಜೆಟ್. ಹೀಗಾಗಿ ಪ್ರಣಾಳಿಕೆಯಲ್ಲಿ ನೀಡಲಾಗಿರುವ ಭರವಸೆಗಳು ಈ MTFPಗೆ ಬದ್ಧವಾಗಿದ್ದರೆ ಮಾತ್ರ ಅವು ಆಚರಣೆಗೆ ಬರುತ್ತವೆ ಇಲ್ಲದಿದ್ದರೆ ಇಲ್ಲ.

ಈ MTFPವಿಧಿಸಿರುವ ಕೆಲವು ಶರತ್ತುಗಳು ಓದುಗರ ಗಮನಕ್ಕೆ :

ಸರ್ಕಾರದ ಖರ್ಚು ಕಡಿಮೆ ಮಾಡಿಕೊಳ್ಳಲು

* reducing budgetary support to public enterprises. This has to be achieved by disinvesting and restructuring public enterprises. While in some cases it may be necessary to introduce voluntary retirement schemes (VRS) to reduce over-employment, government may have to close down or privatise some of the enterprises;

ಅಂದರೆ ಸರ್ಕಾರಿ ಉದ್ಯಮಗಳನ್ನು ಮುಚ್ಚಬೇಕು, ಖಾಸಗೀಕರಿಸಬೇಕು ಮತ್ತು ಉದ್ಯೋಗಿಗಳ ಸಂಖ್ಯೆಯನ್ನು ಇಳಿಸಬೇಕು.

* drastic reduction of implicit and explicit subsidies to electricity and transport sectors through economic pricing, improving productivity in generation, transmission and distribution and metering the consumption of electricity by the agricultural sector and privatisation of distribution;

ಅಂದರೆ ವಿದ್ಯುತ್ತಿಗೆ ಮತ್ತು ಸಾರಿಗೆಗೆ ಸರ್ಕಾರ ಕೊಡುತ್ತಿರುವ ಸಬ್ಸಿಡಿಯನ್ನು ಹಿಂತೆಗೆದುಕೊಂಡು ಕೃಷಿ ಕ್ಷೇತ್ರಕ್ಕೆ ನೀಡಲಾಗುತ್ತಿರುವ ವಿದ್ಯುತ್ತಿಗೆ ಕಡ್ಡಾಯ ಮೀಟರ್ ಹಾಕಿ ವಿದ್ಯುತ್ ವಿತರಣೆ ಮತ್ತು ಉತ್ಪಾದನೆಯನ್ನು ಖಾಸಗೀಕರಿಸಬೇಕು

ಚಾರ್ವಾಕ

ಶಿವಸುಂದರ್

*achieving significant improvement in cost recoveries and reducing implicit subsidies in respect of services, such as drinking water supply, irrigation, higher and technical education, and secondary and tertiary health care, particularly those not directed to the poor;

ಅಂದರೆ ಕುಡಿಯುವ ನೀರು, ನೀರಾವರಿ ಮತ್ತು ಉನ್ನತ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಮತ್ತು ಸುಧಾರಿತ ವೈದ್ಯಕೀಯ ಸೇವೆಯನ್ನು ಇನ್ನು ಮುಂದೆ ಉಚಿತ ಅಥವಾ ರಿಯಾಯಿತಿ ದರದಲ್ಲಿ ಕೊಡದೆ ಅದಕ್ಕಾಗಿ ಎಷ್ಟು ವೆಚ್ಚವಾಗುವುದೋ ಅಷ್ಟು ಹಣ ವಸೂಲಿ ಮಾಡುವುದು. ಅರ್ಥಾತ್ ಎಲ್ಲದರ ಶುಲ್ಕ ಹೆಚ್ಚಿಸುವುದು.

* reducing the quantum of food subsidies by eventually targeting it strictly to persons below the poverty line;

ಆಹಾರಕ್ಕಾಗಿ ನೀಡುತ್ತಿರುವ ಸಬ್ಸಿಡಿಯನ್ನು- ಅಂದರೆ ಪಡಿತರ ವ್ಯವಸ್ಥೆಗೆ ನೀಡುತ್ತಿರುವ ಸಬ್ಸಿಡಿಯನ್ನು- ಕಡ್ಡಾಯವಾಗಿ ಬಡತನದ ರೇಖೆಗಿಂತ ಕೆಳಗಿರುವವರಿಗೆ ಮಾತ್ರ ಸೀಮಿತಗೊಳಿಸುವ ಮೂಲಕ ಅದಕ್ಕೆ ನೀಡುತ್ತಿದ್ದ ಸಬ್ಸಿಡಿಯ ಪ್ರಮಾಣ ತಗ್ಗಿಸುವುದು. ಅರ್ಥಾತ್ ಫಲಾನುಭವಿಗಳ ಪ್ರಮಾಣ ಮತ್ತು ನೀಡುತ್ತಿದ್ದ ಆಹಾರದ ಪ್ರಮಾಣವನ್ನು ತಗ್ಗಿಸುವುದು

ಇವು ಕೆಲವು ಸ್ಯಾಂಪಲ್ಲುಗಳಷ್ಟೆ. ಇವುಗಳನ್ನು ಕಡ್ಡಾಯವಾಗಿ ಹೇಗೆ ಜಾರಿಗೆ ತರಬೇಕೆಂದೂ ಸಹ MTFP-2008-12 ರಲ್ಲಿ ಕೂಲಂಕಷವಾಗಿ ಯೋಜನೆ ಮಾಡಲಾಗಿದೆ. ಅಂದರೆ ಮುಂದಿನ ಐದು ವರ್ಷಗಳ ಬಜೆಟ್ಟನ್ನು ಈಗಾಗಲೇ ವಿಶ್ವಬ್ಯಾಂಕ್ ಈ ಎಲ್ಲಾ ಪಕ್ಷಗಳ ಸಮ್ಮತಿಯೊಂದಿಗೆ ರೂಪಿಸಿಯಾಗಿದೆ. ಹೀಗಾಗಿ ಈ ಪಕ್ಷಗಳು ನೀಡುತ್ತಿರುವ ಭರವಸೆಗಳು MTFP-2008-12 ಕ್ಕೆ ಪೂರಕವಾಗಿ ಇದ್ದರೆ ಮಾತ್ರ ಜಾರಿಗೆ ಬರುತ್ತದೆ, ಇಲ್ಲದಿದ್ದರೆ ಇಲ್ಲ.

ಉದಾಹರಣೆಗೆ ಎಲ್ಲಾ ಪಕ್ಷಗಳು ಪಡಿತರ ಪದ್ಧತಿಯಲ್ಲಿ ಬಡವರಿಗೆ ಮೂರು ರೂಪಾಯಿಗೆ/ಎರಡು ರೂಪಾಯಿಗೆ ರೂಪಾಯಿ ಕೆಜಿ ಅಕ್ಕಿ ಫಲಾನುಭವಿಗಳ ಹೆಚ್ಚಳ, ಮತ್ತು 10 ಹೆಚ್‌ಪಿ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್, ರಿಯಾಯಿತಿ ದರದಲ್ಲಿ ವಸತಿ ನಿರ್ಮಾಣ ಇತ್ಯಾದಿಗಳ ಭರವಸೆ ನೀಡಿವೆ. ಇವೆಲ್ಲವನ್ನು ಜಾರಿಗೆ ತರಬೇಕೆಂದರೆ ಈಗ ಈ ಬಾಬತ್ತುಗಳಿಗೆ ನೀಡುತ್ತಿರುವ ಸಬ್ಸಿಡಿಗಿಂತ ಕನಿಷ್ಠ ಎರಡು ಪಟ್ಟು ಸಬ್ಸಿಡಿ ಕೊಡಬೇಕಾಗುತ್ತದೆ. ಆದರೆ ಬಜೆಪಿ-ಜೆಡಿಎಸ್ ಅಧಿಕಾರದಲ್ಲಿದ್ದಾಗ ವಿರೋಧಿ ಕಾಂಗ್ರೆಸ್ ಒಪ್ಪಿಗೆ ಮೇರೆಗೆ ಚಾಲ್ತಿಯಲ್ಲಿರುವ MTFP-2008-12 ಇದರ ಬಗ್ಗೆ ಹೇಳುವುದೇ ಬೇರೆ. ಅದರ ಪ್ರಕಾರ ಈಗ ಈ ಬಾಬತ್ತುಗಳಿಗೆ 2517 ಕೋಟಿ ರೂ. ವೆಚ್ಚವಾಗುತ್ತಿದ್ದು ಅದನ್ನು ಕ್ರಮೇಣ ಕಡಿಮೆ ಮಾಡುತ್ತ 2012ರ ವೇಳೆಗೆ 1108 ಕೋಟಿ ರೂಪಾಯಿಗಳಿಗೆ ತಗ್ಗಿಸಬೇಕೆಂದು ಆದೇಶಿಸಲಾಗಿದೆ. ಅಂದರೆ ಅರ್ಧಕ್ಕಿಂತ ಹೆಚ್ಚು ಫಲಾನುಭವಿಗಳನ್ನು ಮತ್ತು ಪ್ರಮಾಣವನ್ನು ತಗ್ಗಿಸಬೇಕೆಂದೇ ಇದರರ್ಥ. ಅದೇ ರೀತಿ ವಿದ್ಯುತ್ತಿಗೆ ಈಗ ನೀಡಲಾಗುತ್ತಿರುವ 2370 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು 2012ರ ವೇಳೆಗೆ 1766 ಕೋಟಿಗೆ ಇಳಿಸಬೇಕೆಂದು ಆದೇಶಿಸಿದೆ. ಅದನ್ನು ಎಲ್ಲಾ ಪಕ್ಷಗಳು ಪಾಲಿಸಲೇ ಬೇಕು. ಅಂದರೆ ಅಧಿಕಾರಕ್ಕೆ ಬರುವ ಯಾವುದೇ ಪಕ್ಷ ಆಹಾರ ಸಬ್ಸಿಡಿಯನ್ನು ಅರ್ಧಕ್ಕಿಂತ ಹೆಚ್ಚು ಇಳಿಸಲೇಬೇಕು. ಅಂದರೆ ಅರ್ಧಕ್ಕಿಂತ ಹೆಚ್ಚು ಫಲಾನುಭವಿಗಳನ್ನು ಕಡಿಮೆ ಮಾಡುವುದು ಮತ್ತು ಬಡವರ ತಟ್ಟೆಯಿಂದ ಅರ್ಧಕ್ಕಿಂತ ಹೆಚ್ಚು ಅನ್ನವನ್ನು ಕಸಿಯುವುದು ಶತಃಸಿದ್ಧ.

ಅದೇರೀತಿ ಈಗ ಬಜೆಪಿ ತಾನು ಸಾರಾಯಿ ನಿಷೇಧ ಮಾಡಿ ಜನರ ಉದ್ಧಾರ ಮಾಡಿದ್ದರ ಬಗ್ಗೆ ಉದ್ದುದ್ದ ಮಾತುಗಳನ್ನು ಆಡುತ್ತಿದೆ. ಇದರಿಂದ 2300 ಕೋಟಿಯಷ್ಟು ಆದಾಯ ಕೊರತೆಯಾದರೂ ತಾನು ಜನರ ಪರವಾಗಿ ಗಟ್ಟಿಯಾದ ನಿರ್ಧಾರ ತೆಗೆದುಕೊಂಡಿದ್ದಕ್ಕಾಗಿ ತನಗೆ ಓಟು ಹಾಕಬೇಕೆಂದು ಕೇಳುತ್ತಿದೆ. ಆದರೆ ಅದರ ಬಗ್ಗೆ ಸರ್ಕಾರದ ಮತ್ತು ಪಕ್ಷಗಳ ಅಸಲಿ ಪ್ರಣಾಳಿಕೆಯಾಗಿರುವ MTFP-2008-12 ರಲ್ಲಿ ಏನು ಹೇಳಲಾಗಿದೆ ನೋಡಿ:

State Excise

Major changes were introduced in the State's Excise Policy in the financial year 2007-08 by imposing a ban on country liquor. It was expected that this would lead to substantial revenue loss of around Rs.2000 Cr on account of the foregoing of arrack rentals. However due to increased consumption of IML the revenue gap has been substantially covered and the revised estimates for the financial year 2008-09 for collections from State Excise are expected to be higher than the budget estimates by about Rs.1300 Crores.

ಅಂದರೆ ಸಾರಾಯಿ ನಿಷೇಧದಿಂದ ಬೊಕ್ಕಸಕ್ಕೆ 2000 ಕೋಟಿ ನಷ್ಟವಾಗಬಹುದೆಂದು ನಿರೀಕ್ಷಿಸಲಾಗಿದ್ದರೂ ಜನ ಬೀರು, ಬ್ರಾಂದಿಯಂತ IML ಅನ್ನು ಹೆಚ್ಚೆಚ್ಚು ಕುಡಿಯುತ್ತಿರುವುದರಿಂದ ಅಬ್ಕಾರಿ ಆದಾಯ ನಿರೀಕ್ಷಿತ ಮಟ್ಟಕ್ಕಿಂತ 1300 ಕೋಟಿ ಅಧಿಕ ಸಂಗ್ರಹವಾಗಿದೆ ಎಂದು ಹೇಳಿದೆ. ಅಂದರೆ ಬಜೆಪಿ ಸರ್ಕಾರ ಜನರಿಗೆ ಸಾರಾಯಿ ಬಿಡಿಸಿ ಅದಕ್ಕಿಂತ ಹೆಚ್ಚು ಬೆಲೆಯ ಮತ್ತು ಅಮಲಿನ ಬೀರು ಬ್ರಾಂದಿಗಳನ್ನು ಹೆಚ್ಚಿಗೆ ಅಭ್ಯಾಸ ಮಾಡಿಸಿದೆ. ಇದರಲ್ಲಿ ಏನು ಹೆಗ್ಗಳಿಕೆ ಇದೆ?

ಸಾರಾಯಿ ಬದಲು ಬೀರು ಹೇಗೆ ಪರ್ಯಾಯವಲ್ಲವೋ ಅದೇರೀತಿ ನಮಗಿರುವ ಪಕ್ಷಗಳ ಆಯ್ಕೆಯೂ ಸಹ ಆಗಿಬಿಟ್ಟಿರುವುದು ನಮ್ಮ ದೇಶದ ಪ್ರಜಾತಂತ್ರದ ದುರಂತ! ■


No Comments

"ಈ ನಮ್ಮ ಪ್ರೀತಿಪೂರ್ವಕ ಭೂಮಿ(ಫೆಲೆಸ್ತೀನ್)ಯಲ್ಲಿ ಎರಡು ರೀತಿಯ ಜನರಿದ್ದಾರೆ. ಒಂದು ಕಡೆಯವರು ಸ್ವಾತಂತ್ರ್ಯದ ಸಂಭ್ರಮದಲ್ಲಿದ್ದರೆ ಇನ್ನೊಂದು ಕಡೆಯವರು ತಮ್ಮ ನೋವನ್ನು ಮೆಲುಕು ಹಾಕಿಕೊಳ್ಳುತ್ತಿದ್ದಾರೆ."

-ಮೆಹ್ಮೂದ್ ಅಬ್ಬಾಸ್ (ಫೆಲೆಸ್ತೀನ್ ಪ್ರಾಧಿಕಾರದ ಅಧ್ಯಕ್ಷ)

"ರಾಮಮಂದಿರ ಕಟ್ಟುವುದಾಗಿ ಹೇಳಿ ಬಾಬ್ರಿ ಮಸೀದಿ ಕೆಡವಿದ ಇವರು ರಾಮಮಂದಿರವನ್ನೂ ಏಕೆ ಕಟ್ಟಲಿಲ್ಲ? ಅದಕ್ಕಾಗಿ ಸಂಗ್ರಹಿಸಿದ ಹಣ ಮತ್ತು ಇಟ್ಟಿಗೆ ಎಲ್ಲಿ ಹೋಯಿತು?"

-ಸಿದ್ದರಾಮಯ್ಯ



"ಕಾನೂನಿನಿಂದ ಭಯೋತ್ಪಾದನೆ ತಡೆಗಟ್ಟಲು ಸಾಧ್ಯವಿಲ್ಲ. ಈವರೆಗೆ ಸುಮಾರು 20 ಭಯೋತ್ಪಾದನೆ ತಡೆ ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಇವುಗಳಿಂದ ಭಯೋತ್ಪಾದನೆ ಏನೂ ನಿಂತಿಲ್ಲ"

-ವೀರಪ್ಪ ಮೊಯ್ಲಿ

"ರಾಜ್ಯದಲ್ಲಿ ಒಬ್ಬ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ಕೊಡುವ ಯೋಗ್ಯತೆ ಇಲ್ಲದ ಬಜೆಪಿ ಮುಸ್ಲಿಂ ವ್ಯಕ್ತಿಯನ್ನು ಸಚಿವರನ್ನಾಗಿ ಮಾಡಲು ಸಾಧ್ಯವೇ?"

-ಕೆ.ರೆಹಮಾನ್ ಖಾನ್

"ನಾವು ಹೊಟ್ಟೆ ತುಂಬಾ ತಿನ್ನುವವರಾದರೆ ಅಮೆರಿಕನ್ನರು ರಾಷ್ಟ್ರ ರಾಷ್ಟ್ರಗಳನ್ನೇ ನುಂಗುವವರು."

-ಎಂ.ಬಿ.ನಾಯ್ಕ

ನಂಬಿದ್ರೆನಂಬಿ ಬಿಟ್ರೆಬಿಡಿ



"ಬಣ್ಣದ ಮಾತುಗಳಲ್ಲಿ ಮತ್ತು ದೊಡ್ಡದೊಡ್ಡ ಜಾಹಿರಾತುಗಳಲ್ಲಿ ನನಗೆ ನಂಬಿಕೆ ಇಲ್ಲ. ಮತದಾರ ಬಂಧುಗಳಾದ ತಮ್ಮನ್ನು ಮುಟ್ಟಲು ನನಗೆ ತೋಚಿದ ಏಕೈಕ ಮಾರ್ಗವಿದು. ಅದಕ್ಕಾಗಿ ಈ ನಿವೇದನೆ!"

-ಹೆಚ್.ಡಿ.ಕುಮಾರಸ್ವಾಮಿ, ಪಕ್ಷದಿಂದ ನೀಡಿದ ದೊಡ್ಡ ಜಾಹಿರಾತಿನಲ್ಲಿ

"ಸಂವಿಧಾನ ಅಸೆಂಬ್ಲಿಗಾಗಿ ದೇಶಾದ್ಯಂತ ನಡೆದ ಜನಾಂದೋಲನ ಈವರೆಗೆ ನಡೆದ ಸಶಸ್ತ್ರ ಪ್ರಜಾಯುದ್ಧದ ತಾರ್ಕಿಕ ಪರಿಣಾಮವೇ ಆಗಿದೆ."

-ಆಜಾದ್, ಸಿಪಿಐ(ಮಾವೋವಾದಿ) ಪಕ್ಷದ ವಕ್ತಾರ

"ಕೋಮುವಾದ ಎಂದರೆ ಗಡಿ ಕಾವಲು ಎಂದರ್ಥ. ಹೌದು, ನಮ್ಮ ಬಜೆಪಿ ಪಕ್ಷಾ ದೇಶದ ಮತ್ತು ನಾಡಿನ ಗಡಿ ಕಾವಲು ಮಾಡುತ್ತದೆ. ಆದ್ದರಿಂದ ನಾವು ಕೋಮುವಾದಿಗಳೇ."

-ಪ್ರಮೀಳಾ ನೇಸರ್ಗಿ

"ವಿಶೇಷ ಆರ್ಥಿಕ ವಲಯಕ್ಕೆ ಒತ್ತು ಕೊಡುವುದರಿಂದ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬ ಸೋನಿಯಾ ಹೇಳಿಕೆ ಸುಳ್ಳು. ಕಾಂಗ್ರೆಸ್ ಪ್ರಣಾಳಿಕೆ ಪೊಳ್ಳು."

-ಹೆಚ್.ಡಿ.ದೇವೇಗೌಡ

ವ್ಯವಸ್ಥೆ ಹುಲಿಗಳ ಕೈಯಲ್ಲಿರುವಾಗ...



"ಬೆಕ್ಕಿಗೆ ಗಂಟೆ ಕಟ್ಟಬೇಕಾಗಿಲ್ಲ, ಕಾಡಿಗೆ ಕಾಲಿಂಗ್ ಬೆಲ್ ಕಟ್ಟಬೇಕಾಗಿಲ್ಲ. ವ್ಯವಸ್ಥೆಯನ್ನು ಅದರ ಪಾಡಿಗೆ ಬಿಟ್ಟು ನಾವು ಮಗುವಿನಂತೆ ಕೆಲಸ ಮಾಡಬೇಕು."

-ಕೆ.ಕಲ್ಯಾಣ್

ಅದೆಲ್ಲಾ ಸರಿ, ನಾವು ಕಲಿಯುವುದೇನು?

"ನಮ್ಮ ಪಕ್ಷವು ನೇಪಾಳದ ಚುನಾವಣಾ ಪರಿಣಾಮಗಳನ್ನು ಸಕಾರಾತ್ಮಕವೆಂದೂ ಮತ್ತು ಇಡೀ ದಕ್ಷಿಣ ಏಷಿಯಾ ರಾಜಕೀಯದ ಮೇಲೆ ಪ್ರಭಾವ ಬೀರುವ ಸಂಗತಿಯೆಂದೂ ಪರಿಗಣಿಸುತ್ತದೆ."

-ಆಜಾದ್, ಸಿಪಿಐ (ಮಾವೋವಾದಿ) ಪಕ್ಷದ ವಕ್ತಾರ

ಊರನ್ನು ಸುಟ್ಟ ಬೆಂಕಿ ಮನೆಯನ್ನೂ ಸುಡುತ್ತದೆ-ಎರಡು ಉದಾಹರಣೆಗಳು!

"ಶಕುಂತಲಾ ಶೆಟ್ಟಿಯವರ ಬಂಡಾಯವನ್ನು ಮಟ್ಟ ಹಾಕಲು ಹೊರಟಿರುವ ಬಜೆಪಿಯ ಈ ನಾಯಕರು ಪ್ರಚ್ಛನ್ನ ಹಿಟ್ಲರ್‌ಗಳು."

-ಲಕ್ಷ್ಮೀಶ ತೋಳ್ಪಾಡಿ

"ಪ.ಬಂಗಾಳದಲ್ಲಿ ಪ್ರಜಾಪ್ರಭುತ್ವ ಸತ್ತಿದೆ. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆದರೆ ತಮ್ಮ ಸಮಾಧಿ ಆಗಲಿದೆ ಎಂಬುದು ಸಿಪಿಎಂಗೆ ಗೊತ್ತಾಗಿದೆ. ಆದುದರಿಂದ ಅದು ಅಧಿಕಾರ ಹಿಡಿಯಲು ಭಯೋತ್ಪಾದನೆಯಲ್ಲಿ ನಿರತವಾಗಿದೆ."

-ಬಿಸ್ವನಾಥ್ ಚೌಧರಿ, ಆರ್‌ಎಸ್‌ಪಿ ನಾಯಕ ಮತ್ತು ಸಿಪಿಎಂ ನೇತೃತ್ವದ ಎಡರಂಗ ಸರ್ಕಾರದಲ್ಲಿ ಮಂತ್ರಿ

ಶೇ.33ರ ಮೀಸಲಾತಿ ಇದನ್ನು ಬದಲಿಸಬಹುದೇ?

"ಎರಡನೇ ಹಂತದ ಚುನಾವಣೆಯಲ್ಲಿ ಸ್ಪರ್ಧಿಸಿರುವ 590 ಅಭ್ಯರ್ಥಿಗಳಲ್ಲಿ 25 ಜನ ಮಹಿಳೆಯರು."

-ಪತ್ರಿಕಾ ವರದಿ

ಹಾಗಿದ್ದರೆ ಮಿಕ್ಕದ್ದು ಶ್ರೀಮಂತರಿಗೆ ಅಂತ ತಾನೆ!



"ಕರ್ನಾಟಕದ 56,000 ಕೋಟಿ ಬಜೆಟ್ಟನಲ್ಲಿ ನಾವು ಬಡವರಿಗೆ ಕೊಡುತ್ತೇವೆಂದು ಭರವಸೆ ನೀಡಿರುವುದು ಕೇವಲ 3,000 ಕೋಟಿಗಳು ಮಾತ್ರ."

-ಪ್ರಮೀಳಾ ನೇಸರ್ಗಿ

ಸುಷ್ಮಾ ಸ್ವರಾಜ್ ಎಂಬ ಗಯ್ಯಾಳಿ



ಕಂಡಹಾಗೆ

■ ಗೌರಿ ಲಂಕೇಶ್

ಹಣೆಯ ಮೇಲೆ ದೊಡ್ಡದಾದ ಬಿಂದಿ, ಬೈತಲೆಯಲ್ಲಿ ಸಿಂಧೂರ್, ಮೈಮೇಲೆ ಐದೂವರೆ ಮೀಟರ್‌ನ ಸೀರೆ, ಕೈಗಳಲ್ಲಿ ಬಳೆ.... ಇಂತಹ ವೇಷ ಭೂಷಣಗಳಿಂದಲೇ ಮಾಧ್ಯಮಗಳಿಂದ 'ಹಿಂದೂ ಸ್ತ್ರೀ'ಯ ತದ್ರೂಪಿ ಎಂದು ಬಣ್ಣಿಸಲ್ಪಡುವ ಸುಷ್ಮಾ ಸ್ವರಾಜ್ ಬಗ್ಗೆ ನನ್ನಂಥವರಲ್ಲಿ ಕುತೂಹಲ ಮೂಡಿದರೆ ಅಚ್ಚರಿ ಇಲ್ಲ. ಯಾಕೆಂದರೆ ಈಕೆ ಮಹಿಳೆಯಾಗಿದ್ದರೂ ಸತಿ ಪದ್ಧತಿಯನ್ನು, ಸ್ತ್ರೀ ಶೋಷಣೆಯನ್ನು ಎತ್ತಿ ಹಿಡಿಯುವ ಬಿಜೆಪಿಯಂತಹ ಪಕ್ಷದೊಂದಿಗಿದ್ದಾಳೆ. ಸ್ವತಃ ಲಾಯರ್‌ಗಿರಿ ಮಾಡಿಕೊಂಡಿದ್ದರೂ ಮಹಿಳೆಯರಿಗೆ ಉನ್ನತ ಶಿಕ್ಷಣದ ಅಗತ್ಯವಿಲ್ಲ ಎನ್ನುವ ಸಂಘ ಪರಿವಾರವನ್ನು ಸಮರ್ಥಿಸಿಕೊಳ್ಳುತ್ತಾಳೆ. ತನಗಿಂತಲೂ ಅನರ್ಹ ಪುರುಷರಿಗೆ ಬಿಜೆಪಿ ಮಣೆ ಹಾಕುತ್ತ ತನ್ನನ್ನು ನಿರ್ಲಕ್ಷಿಸುತ್ತಿದ್ದರೂ ಈಕೆ ಆ ಪಕ್ಷದಲ್ಲಿ "ಆರಾಮಾಗಿ ನಿದ್ರಿಸುತ್ತಿದ್ದಾಳೆ."

ಆದರೆ ಬೇರೆ ಪಕ್ಷದವರ ವಿಷಯಕ್ಕೆ ಬಂದರೆ, ಅದರಲ್ಲೂ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಬಗ್ಗೆಯಾದರೆ ಈ ಸುಷ್ಮಾ ಸ್ವರಾಜ್ ಅಪ್ಪಟ ಗಯ್ಯಾಳಿ. ಮೈಕ್ ಸಿಕ್ಕರೆ ಸಾಕು ಎಲ್ಲರ ಕಿವಿಗಳು ಒಡೆದುಹೋಗುವಷ್ಟು ದೊಡ್ಡ ಗಂಟಲಲ್ಲಿ ಈ ಹರಿಯಾಣದ ಬ್ರಾಹ್ಮಣಿ ಹಿಂದಿಯಲ್ಲಿ ಅರಚಲಾರಂಭಿಸುತ್ತಾಳೆ. ಮಾತಿಗೊಂದು ತರ್ಕ, ಪದಗಳಿಗೊಂದು ತೂಕ, ಸಾಲಿಗೊಂದು ಅರ್ಥ ಯಾವುದೂ ಇಲ್ಲದೆ ಒದರಲಾರಂಭಿಸುವ ಈಕೆಯನ್ನು ಅದು ಹೇಗೆ 'ಹಿಂದೂ ಸ್ತ್ರೀ' ಎಂದು ಕರೆಯುತ್ತಾರೊ ಗೊತ್ತಿಲ್ಲ.

ನೆನಪಿದೆಯೇ ಕಳೆದ ಚುನಾವಣೆಗಳ ನಂತರ ಸೋನಿಯಾ ಗಾಂಧಿ ಈ ದೇಶದ ಪ್ರಧಾನಿ ಆಗುವ ಸಂಭವ ಎದುರಾದಾಗ ಇದೇ ಸುಷ್ಮಾ ಸ್ವರಾಜ್ "ಆ ವಿದೇಶಿ ಮಹಿಳೆ ಪ್ರಧಾನಿಯಾದರೆ ನಾನು ನನ್ನ ತಲೆ ಬೋಳಿಸಿಕೊಳ್ಳುತ್ತೇನೆ, ನೆಲದ ಮೇಲೆ ನಿದ್ರಿಸುತ್ತೇನೆ, ಅಕ್ಕಿ-ಬೇಳೆ ಬಿಟ್ಟು ಕಡ್ಡಿ-ಕಾಳು ತಿನ್ನುತ್ತಾ ಜೀವಿಸುತ್ತೇನೆ" ಎಂದೆಲ್ಲಾ ಅರಚಿದ್ದಳು. ಆದರೆ ತಾನು ಪ್ರತಿಪಾದಿಸುವ 'ಹಿಂದೂ ಧರ್ಮ'ದಲ್ಲಿ ಇವತ್ತಿಗೂ ಹೇಗೆ ಲಕ್ಷಾಂತರ ಅಮಾಯಕ ವಿಧವೆಯರನ್ನು ತುಚ್ಛವಾಗಿ ಕಾಣಲಾಗುತ್ತಿದೆ, ಅವರಿಗೆಲ್ಲ ಎಷ್ಟು ಅನ್ಯಾಯವಾಗುತ್ತಿದೆ ಎಂಬುದರ ಕನಿಷ್ಠ ಪ್ರಜ್ಞೆಯೂ ಈ ಗಯ್ಯಾಳಿಯ ಮನಸ್ಸಿನಲ್ಲಿ ಮೂಡಿರಲಿಲ್ಲ. ಅದೆಷ್ಟೋ ಮಹಿಳೆಯರು ತಾವು ಏನು ತಪ್ಪು ಮಾಡಿರದಿದ್ದರೂ ಆಕಸ್ಮಿಕ ಕಾರಣಗಳಿಗೆ ತಮ್ಮ ಗಂಡನನ್ನು ಕಳೆದುಕೊಂಡು ಯಾರಿಗೂ ಬೇಡವಾದ 'ಶಾಪ'ಗಳಂತೆ ಜೀವಿಸುತ್ತಿದ್ದಾರಲ್ಲ, ಅವರೆಲ್ಲರನ್ನು ತಾನು ಅವಹೇಳನ ಮಾಡುತ್ತಿದ್ದೇನೆ ಎಂಬ ಸೂಕ್ಷ್ಮತೆಯೂ ಈ ಹೆಣ್ಣಿಗಿರಲಿಲ್ಲ. ಅಷ್ಟೇ ಅಲ್ಲ ತನ್ನ ಗಂಡನನ್ನು ಕಳೆದುಕೊಂಡು ನಿಜವಾಗಲೂ ವಿಧವೆಯ ಒಬ್ಬಂಟಿ ಜೀವನ ನಡೆಸುತ್ತಿರುವ ಸೋನಿಯಾ ಗಾಂಧಿ ಎಂಬ ಮತ್ತೋರ್ವ ಮಹಿಳೆಗೆ ತಾನು ಮಾಡುತ್ತಿರುವ ಅವಮಾನ ಇದು ಎಂದೂ ಸುಷ್ಮಾ ಸ್ವರಾಜ್‌ಗೆ ಅನ್ನಿಸಿರಲಿಲ್ಲ. ಬದಲಾಗಿ ತಾನು ಕೈಹಿಡಿದ ಗಂಡ ಸ್ವರಾಜ್ ಎಂಬುವವನು ಇನ್ನೂ ಬದುಕಿದ್ದರೂ ಟಿವಿ ಕ್ಯಾಮೆರಾಗಳ ಮುಂದೆ ತಾನಾಗಲೇ ವಿಧವೆಯಾಗಿದ್ದೇನೆ ಎಂಬಂತೆ ಕಣ್ಣೀರಿಟ್ಟಿದ್ದಳು.

ಆಗ ಈ ಸುಷ್ಮಾ ಸ್ವರಾಜ್ ಎಂಬ ವ್ಯಕ್ತಿ ನಿಜವಾಗಲೂ ಓರ್ವ ಹೆಣ್ಣೇ ಎಂಬ ಅನುಮಾನ ಅದೆಷ್ಟೋ ಜನರಲ್ಲಿ ಮೂಡಿತ್ತು.

ಅದೆಲ್ಲ ಇರಲಿ, 1999 ರಲ್ಲಿ ಕರ್ನಾಟಕದ ಬಳ್ಳಾರಿಯಿಂದ ಸೋನಿಯಾ ಗಾಂಧಿ ಸ್ಪರ್ಧಿಸಲು ರೆಡಿ ಆದಾಗ ಆಕೆಯ ವಿರುದ್ಧ ನಿಲ್ಲಲು ಕರ್ನಾಟಕದ ಯಾವ ಚೆಡ್ಡಿ ನಾಯಕನಿಗೂ ಧೈರ್ಯ ಬರಲಿಲ್ಲ. ಆಗ ಬಿಜೆಪಿಯ ದೊಣ್ಣೆ ನಾಯಕರ ಕಣ್ಣಿಗೆ ಬಿದ್ದದ್ದು ಈ ಗಯ್ಯಾಳಿ. ಆಗ ತಾನೆ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋತಿದ್ದು ಸುಷ್ಮಾ ಸ್ವರಾಜ್ ತನ್ನ ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡು ಮನೆ ಸೇರಿದ್ದಳು. ಆಗ "ಅಡ್ಡೇಟಿನ ಮೇಲೊಂದು ಗುದ್ದೇಟು" ಎಂದು ಈಕೆಯನ್ನು ದೆಹಲಿಯಿಂದ ಬಳ್ಳಾರಿಗೆ ಎಕ್ಸ್‌ಪೋರ್ಟ್ ಮಾಡಿದ್ದರು.

ಬಳ್ಳಾರಿಯಲ್ಲಿ ಲ್ಯಾಂಡ್ ಆಗುತ್ತಿದ್ದಂತೆ ಈಕೆ "ಅವಳು ವಿದೇಶಿ, ನಾನು ಸ್ವದೇಶಿ", "ಅವಳು ಸೊಸೆ, ನಾನು ಮನೆ ಮಗಳು" ಎಂದೆಲ್ಲಾ ಟುಸ್, ಪುಸ್ ಅಂದಿದ್ದಳು. ಆದರೆ ಬಳ್ಳಾರಿಯ ಜನ "ನಮ್ಮ ಮನೆ ಸೊಸೆ ನಮಗೆ



ಮುಖ್ಯ" ಎಂದೇ ತೀರ್ಪು ನೀಡಿದ್ದರು. ಸುಷ್ಮಾ ಸ್ವರಾಜ್‌ಳ ಅದೃಷ್ಟ, ಆಕೆ ಅಂದು ತನ್ನ ಠೇವಣಿಯನ್ನೇ ಕಳೆದುಕೊಳ್ಳುವುದರಿಂದ ಸ್ವಲ್ಪದರಲ್ಲೇ ಬಚಾವಾಗಿದ್ದಳು.


ಮೊದಮೊದಲು ರಾಮಕೃಷ್ಣ ಹೆಗಡೆಯ ಬಾಲ ಹಿಡಿದು ರಾಜಕೀಯದ ರಂಗದಲ್ಲಿ ಕಾಣಿಸಿಕೊಂಡ ಸುಷ್ಮಾ ಸ್ವರಾಜ್ ಆನಂತರ ಎಲ್.ಕೆ. ಅಡ್ವಾಣಿಯವರ ಹೆಗಲನ್ನೇರಿದರೂ ಅಲ್ಲಿಂದಲೇ ವಾಜಪೇಯಿ ಸ್ತೋತ್ರ ಪಠಿಸುತ್ತಾ ಕೇಂದ್ರ ಮಂತ್ರಿ, ದೆಹಲಿಯ ಮುಖ್ಯಮಂತ್ರಿ ತರಹದ ಹುದ್ದೆಗಳನ್ನು ಪಡೆದ ಮಹಿಳೆ. ಈಕೆಯ ಬಂಡವಾಳ ಕಾಸಗಲದ ಕುಂಕುಮ ಮತ್ತು ಗಯ್ಯಾಳಿಯ ನಾಲಿಗೆ, ಎರಡೇ.

ಸೋನಿಯಾ ವಿರುದ್ಧ ಬಳ್ಳಾರಿಯ ಜನ ಸುಷ್ಮಾಳಿಗೆ ಮಣ್ಣು ಮುಕ್ಕಿಸಿದ್ದರ ಸೇಡೋ ಏನೋ, ಆಕೆ ಈಗ ಇಡೀ ಕರ್ನಾಟಕದ ಜನರಿಗೆ ಮಣ್ಣು ಮುಕ್ಕಿಸಲು ಸಜ್ಜಾಗಿರುವಂತಿದೆ. ಆ ಘನ ಕಾರ್ಯಕ್ಕೆ ಆಕೆ ಅವಲಂಬಿಸಿರುವುದು ಶ್ರೀರಾಮುಲು ಎಂಬ ಪಕ್ಕಾ ರೌಡಿಯನ್ನು ಮತ್ತು ಜನಾರ್ಧನ್ ಎಂಬ ಗಣಿ ರೆಡ್ಡಿಯನ್ನು.

ಮೊನ್ನೆ ಬಳ್ಳಾರಿಯಲ್ಲಿ ನಡೆದ ಬಿಜೆಪಿಗಳ ಸಭೆಯೊಂದರಲ್ಲಿ ಈಕೆ ಇವರಿಬ್ಬರ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದಳು. ಆ ದೃಶ್ಯ ಹೇಗಿತ್ತೆಂದರೆ ಕೋಲಾರದ ಜಿಲ್ಲೆಯನ್ನೇ ತತ್ತರಿಸುವಂತೆ ಮಾಡಿದ್ದ ನಟೋರಿಯಸ್ ರೌಡಿ ತಂಗಂ ಮತ್ತು ಆತನ ದುಷ್ಟ ಸಹೋದರರ ತಾಯಿ ರೌಡಿ ರಾಣಿ ಸಗಾಯಿ ಮೇರಿಯೇ ತನ್ನ ಪುತ್ರರತ್ನರನ್ನು ಆಶೀರ್ವಾದಿಸಿ ಕಳುಹಿಸುತ್ತಿರುವಂತಿತ್ತು.

ಈ ಶ್ರೀರಾಮುಲು, ರೆಡ್ಡಿಗಳ ಹಣದ ಅಹಂಕಾರ ಎಷ್ಟು ಮಿತಿ ಮೀರಿದೆ ಎಂದರೆ ಅವರು ಇಂದು ಇಡೀ ರಾಜ್ಯವನ್ನೇ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹವಣಿಸುತ್ತಿದ್ದಾರೆ. ಈ ತೆಲುಗು ಬಿಡ್ಡಗಳು ಆಂಧ್ರದ feudal ಸಂಸ್ಕೃತಿಯನ್ನು ಕನ್ನಡ ನಾಡಿಗೆ ಪರಿಚಯಿಸುತ್ತಿದ್ದಾರಲ್ಲದೆ 'ಸಿ' ಗ್ರೇಡ್ ತೆಲುಗು ಸಿನಿಮಾಗಳಲ್ಲಿನ ರೌಡಿಗಳಂತೆ ವರ್ತಿಸುತ್ತಿದ್ದಾರೆ. ಶ್ರೀರಾಮುಲು ಮಾತನಾಡುವ ರೀತಿಯನ್ನು ಒಮ್ಮೆ ಕೇಳಿಸಿಕೊಂಡರೆ ಸಾಕು ಇದು ಸ್ಪಷ್ಟವಾಗುತ್ತದೆ. ಗಣಿ ದಂಧೆಯಿಂದ ಲೂಟಿ ಮಾಡಿರುವ ಹಣ ಇವರ ಧಿಮಾಕನ್ನು ಎಷ್ಟು ಹೆಚ್ಚಿಸಿದೆಯೆಂದರೆ ಹಳೇ ಪಾಳೇಗಾರರಂತೆ ತಮ್ಮ ರೌಡಿ ಪಡೆಯನ್ನು ಕಟ್ಟಿಕೊಂಡು ಇತರೆ ಕ್ಷೇತ್ರಗಳ ಮೇಲೂ ದಂಡೆತ್ತಿ ಹೋಗುತ್ತಿದ್ದಾರೆ, ಅಕ್ರಮವಾಗಿ ಪಡೆದ ಹಣವನ್ನು ಚೆಲ್ಲಿ ಮತಗಳನ್ನು ಖರೀದಿಸುತ್ತಿದ್ದಾರೆ. ಪ್ರಜಾಪ್ರಭುತ್ವ ಎಂದರೆ ಏನೆಂದೇ ಗೊತ್ತಿಲ್ಲದ ರೆಡ್ಡಿಗಳು ಕರ್ನಾಟಕದಲ್ಲೇ ಒಂದು 'ರೆಡ್ಡಿ ಸಾಮ್ರಾಜ್ಯ'ವನ್ನು ಸ್ಥಾಪಿಸಲು ಹೊರಟಿದ್ದಾರೆ. ಇವರ ಇಂತಹ ಎಲ್ಲಾ ಕೃತ್ಯಗಳಿಗೆ ರಕ್ತಪಿಪಾಸು ಸಿದ್ಧಾಂತದ ಸುಷ್ಮಾ ಸ್ವರಾಜ್ ಎಂಬ ಮಹಿಳೆಯ ಬೆಂಬಲವಿದೆ.

ಈಕೆ ಎಂತಹ ಗಯ್ಯಾಳಿ ಎಂದು ಮೊನ್ನೆ ಸುಷ್ಮಾ ಸ್ವರಾಜ್‌ಳನ್ನು ಮುಖಃತಹ ಭೇಟಿ ಆದಾಗ ಗೊತ್ತಾಯಿತು. NDTV ಯವರು ಕರ್ನಾಟಕದ ಚುನಾವಣೆ ಕುರಿತಂತೆ ಒಂದು ಚರ್ಚೆಯನ್ನು ಏರ್ಪಡಿಸಿದ್ದರು. ಅದಕ್ಕೆ ಬಿಜೆಪಿಯಿಂದ ಸುಷ್ಮ ಸ್ವರಾಜ್‌ಳನ್ನು, ಕಾಂಗ್ರೆಸ್‌ನಿಂದ ಮಾರ್ಗರೇಟ್ ಆಳ್ವರನ್ನು ಮತ್ತು ಮೂವರು ಸಂಪಾದಕರನ್ನು ಕರೆದಿದ್ದರು. ಅವರಲ್ಲಿ ನಾನೂ ಒಬ್ಬಳಾಗಿದ್ದೆ.



ಚರ್ಚೆಯ ಉದ್ದಕ್ಕೂ ಸುಷ್ಮಾ ಸ್ವರಾಜ್ ತನ್ನ ಗಯ್ಯಾಳಿ ಶೈಲಿಯಲ್ಲಿ ಬಿಜೆಪಿ ಪಕ್ಷ ಗೆದ್ದೇ ಗೆಲ್ಲುತ್ತದೆ ಎಂದೇ ವಾದಿಸುತ್ತಿದ್ದಳು. ಯಡಿಯೂರಪ್ಪ ಮತ್ತು ಇತರೆ ಬಿಜೆಪಿ ಮಂತ್ರಿಗಳ ಭ್ರಷ್ಟಾಚಾರದ ಬಗ್ಗೆಯಾಗಲಿ, ಬಿಜೆಪಿಯಲ್ಲಿನ ಭಿನ್ನಮತದ ಬಗ್ಗೆಯಾಗಲಿ, ಇನ್ಯಾವುದೇ ಗಮನಾರ್ಹ ವಿಷಯದ ಬಗ್ಗೆ ಯಾಗಲಿ ಸರಿಯಾದ ಉತ್ತರವನ್ನು ನೀಡಲಾಗದೆ, ಆ ದೋಷವನ್ನು ದೊಡ್ಡ ದನಿಯಲ್ಲಿ ಮಾತಾಡುವ ಮೂಲಕ ಮುಚ್ಚಹಾಕಲು ಪ್ರಯತ್ನಿಸುತ್ತಿದ್ದಳು. Anti-incumbency ವಿಷಯಕ್ಕೆ ಬಂದಾಗ "ನಮ್ಮ ಪಕ್ಷ ಒಳ್ಳೆಯ ಆಡಳಿತವನ್ನು ನೀಡಿತ್ತು. ಯಡಿಯೂರಪ್ಪ ಬಹಳ ದಕ್ಷ ಉಪಮುಖ್ಯಮಂತ್ರಿಯಾಗಿದ್ದರು. ಆದ್ದರಿಂದ ಈ anti-incumbency ಯಿಂದಾಗಿ ನಮಗೆ ಯಾವ ತೊಂದರೆಯೂ ಆಗುವುದಿಲ್ಲ" ಎಂದಳು. ಆಗ ನಾನು "ನಿಮ್ಮ ಈ ಥಿಯರಿಯನ್ನು ಒಪ್ಪುವುದಾದರೆ, ವಾಜಪೇಯಿ ಸರ್ಕಾರ ದಕ್ಷ ಆಡಳಿತವನ್ನು ನೀಡಲಿಲ್ಲ, ಆದ್ದರಿಂದ ನೀವು 'ಭಾರತ ಪ್ರಜ್ವಲಿಸುತ್ತಿದೆ' ಎಂದು ಪ್ರಚಾರ ಮಾಡಿದರೂ ವಾಜಪೇಯಿ ಸರ್ಕಾರ ಸೋತಿತು ಎಂದು ಒಪ್ಪಿಕೊಳ್ಳುತ್ತೀರಾ?" ಎಂದು ಪ್ರಶ್ನಿಸಿದೆ. ಆಗ ತನ್ನ ಗಯ್ಯಾಳಿ ಶೈಲಿಯಲ್ಲಿ "ಅವರು ಒಳ್ಳೆ ಆಡಳಿತ ನೀಡಿದ್ದರು" ಎಂದು ಅಬ್ಬರಿಸದಳೇ ಹೊರತು ಪ್ರಶ್ನೆಗೆ ಉತ್ತರ ನೀಡಲಿಲ್ಲ.

ಹಾಗೆಯೇ ಗುಜರಾತ್ ಅಭಿವೃದ್ಧಿ ಮಾದರಿ ಬಗ್ಗೆ ಪ್ರಶ್ನಿಸಿದ ನಾನು "ಇವತ್ತು ಗುಜರಾತಿನಲ್ಲಿ ಸರಾಸರಿ ದಿನದ ಕೂಲಿ ಕೇವಲ 35 ರೂಪಾಯಿಗಳು. ಅಲ್ಲಿ ಕರ್ನಾಟಕಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇತರೆ ಎಲ್ಲಾ ರಾಜ್ಯಗಳಿಗಿಂತಲೂ ಗುಜರಾತ್ ಸರ್ಕಾರ ಇವತ್ತು ಹೆಚ್ಚು ಸಾಲ ಮಾಡಿದೆ. ಆದರೂ ಅಂತಹ ಆಡಳಿತವನ್ನು ಕರ್ನಾಟಕದ ಮೇಲೆ ಹೇರುತ್ತೇವೆಂದು ಹೇಳುವ ಧೈರ್ಯ ತೋರುತ್ತಿದ್ದೀರಲ್ಲಾ?" ಎಂದೆ.

"ಇಲ್ಲ ಅಲ್ಲಿ ತುಂಬಾ ಅಭಿವೃದ್ಧಿಯಾಗಿದೆ" ಎಂದಳಾಕೆ. "35 ರೂಪಾಯಿಯ ದಿನದ ಕೂಲಿಯನ್ನು ಅಭಿವೃದ್ಧಿ ಎನ್ನುತ್ತೀರಾ?" ಎಂದು ಮರುಪ್ರಶ್ನಿಸಿದೆ. ಅದಕ್ಕೂ ಮತ್ತದೇ ಏರಿದ ದನಿಯಲ್ಲಿ ಉದುರಿದ ಅರ್ಥವಿಲ್ಲದ ಪದಗಳು.

ಈ ಸುಷ್ಮಾ ಸ್ವರಾಜ್‌ಳಿಗೂ ಆಕೆಯ ಬಿಜೆಪಿ ಪಕ್ಷಕ್ಕೂ ಅಷ್ಟೇನು ವ್ಯತ್ಯಾಸವಿಲ್ಲ. ಇಬ್ಬರಿಗೂ ಸೂಕ್ಷ್ಮತೆ, ಸಂವೇದನೆ, ಅನುಕಂಪ, ಮಾನವೀಯತೆ, ಮರ್ಯಾದಸ್ಥ ನಡವಳಿಕೆ ಯಾವುದೂ ಇಲ್ಲ. ಬದಲಾಗಿ ನೀಚ ಚಿಂತನೆಗಳು, ದ್ವೇಷದ ಸಿದ್ಧಾಂತ, ತರ್ಕವಿಲ್ಲದ ನಿಲುವುಗಳು, ರಕ್ತದಾಹವೇ ಈಕೆಯಲ್ಲಿ ಮತ್ತು ಆಕೆಯ ಹಿಂಬಾಲಕರಾದ ಚೆಡ್ಡಿ, ರೆಡ್ಡಿ, ಯಡ್ಡಿಗಳಲ್ಲಿ ತುಂಬಿದೆ.

ಈ ಚುನಾವಣೆಗಳಲ್ಲಿ ಕರ್ನಾಟಕದ ಪ್ರಜ್ಞಾವಂತ ಮತದಾರರು ಸುಷ್ಮಾ ಸ್ವರಾಜ್ ಪ್ರತಿನಿಧಿಸುವ ಪಕ್ಷವನ್ನು ಸಾರಾಸಗಟಾಗಿ ತಿರಸ್ಕರಿಸಿ, ರೆಡ್ಡಿಗಳ ಅಟ್ಟಹಾಸಕ್ಕೆ ಕಡಿವಾಣ ಹಾಕುತ್ತಾರೆಂದು ಆಶಿಸೋಣ. ■

ಚುನಾವಣೆ 2008

ಹಂಗ್ ಅಸೆಂಬ್ಲಿಯ ಹಂಗು!

ಈ ಬಾರಿ ಬಿಜೆಪಿಗೆ ಸ್ಪಷ್ಟ, ಸರಳ ಬಹುಮತ ಸಿಗುವುದಿಲ್ಲ. ಅಷ್ಟರಮಟ್ಟಿಗೆ ಇದು ಕರ್ನಾಟಕದ ಪ್ರಬುದ್ಧ ಮತದಾರನ ವಿಜಯ ಎನಿಸಿಕೊಳ್ಳಲಿದೆ.

ಮೊದಲನೆ ಹಾಗೂ ಎರಡನೇ ಹಂತದ 155 ಕ್ಷೇತ್ರಗಳ ಪೈಕಿ ಬಿಜೆಪಿ ಏನೇ ತಿಪ್ಪರಲಾಗ ಹೊಡೆದರೂ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಸ್ಥಾನ ಗೆಲ್ಲಲು ಅಸಾಧ್ಯ. ಆ ಸಂಖ್ಯೆ 50 ರಿಂದ 55 ಎಂದಿಟ್ಟುಕೊಂಡರೂ ಕೂಡಾ 3 ನೇ ಹಂತದಲ್ಲಿ ಇನ್ನುಳಿದ 69 ಕ್ಷೇತ್ರಗಳಲ್ಲಿ ಬಿಜೆಪಿ 58 ರಿಂದ 60 ಸ್ಥಾನ ಗೆದ್ದರೆ ಮಾತ್ರ ಅದಕ್ಕೆ ಸರ್ಕಾರ ರಚಿಸಲು ಸಾಧ್ಯ....

ಇದು ಅಸಾಧ್ಯ.... ಖಂಡಿತ ಅಸಾಧ್ಯ!

ಇನ್ನು ಕಾಂಗ್ರೆಸ್‌ಗೆ ಸ್ವತಂತ್ರವಾಗಿ ಸರ್ಕಾರ ರಚಿಸುವ ಅವಕಾಶ ಸಿಗಬಹುದಾ ಎಂದು ನೋಡಿದರೆ ಅಲ್ಲೂ ಅನುಮಾನಗಳು ಮೂಡುತ್ತಿವೆ. ಒಂದನೇ ಹಾಗೂ ಎರಡನೇ ಹಂತದ ಚುನಾವಣೆಗಳಲ್ಲಿ ಕಾಂಗ್ರೆಸ್ ಉಳಿದ ಪಕ್ಷಗಳಿಗಿಂತ ಹೆಚ್ಚು ಸ್ಥಾನ ಗೆಲ್ಲಬಲ್ಲದಾದರೂ ಆ ಸಂಖ್ಯೆ 63 ರಿಂದ 68 ಕ್ಕೆ ನಿಲ್ಲಬಹುದು. ಅಂದರೆ ಅವರಿಗೆ ಸಿಂಪಲ್ ವರ್ಕಿಂಗ್ ಮೆಜಾರಿಟಿ ಬೇಕೆಂದರೂ ಮೂರನೇ ಹಂತದಲ್ಲಿ 45 ಸೀಟ್ ಗೆಲ್ಲಬೇಕಾಗುತ್ತದೆ.

ಇದೂ ಕಷ್ಟ ಸಾಧ್ಯ!

ಏಕೆಂದರೆ ಮೂರನೇ ಹಂತದಲ್ಲಿ ಬೆಳಗಾಂ, ಹಾವೇರಿ, ಧಾರವಾಡ, ಬಾಗಲಕೋಟೆ, ಬಿಜಾಪುರ, ಬೀದರ್, ಗುಲ್ಬರ್ಗಾಗಳಲ್ಲಿ ಕಾಂಗ್ರೆಸ್‌ಗೆ ಸರಿಸಮವಾಗಿ ಬಿಜೆಪಿ ಸೆಣಸಾಡುತ್ತಿದೆ. ಜೊತೆಗೆ ಬೆಳಗಾಂ, ಗುಲ್ಬರ್ಗಾಗಳಲ್ಲಿ ಕಾಂಗ್ರೆಸ್, ಬಿಜೆಪಿ ಇಬ್ಬರಿಗೂ ಜೆಡಿಎಸ್‌ನ ಸವಾಲು ಎದುರಿಸಬೇಕಾಗಿದೆ. ಇಲ್ಲಿ ಜೆಡಿಎಸ್‌ನ ಪಾಲು ಬಿಟ್ಟುಕೊಡದೆ ಬೇರೆ ದಾರಿಯಿಲ್ಲ. ಆ ಸಂಖ್ಯೆ 8 ರಿಂದ 10 ರ ತನಕ ಏರಬಹುದು. ಇದರ ನಡುವೆ ಬೆಳಗಾಂ, ಹಾವೇರಿ, ಗದಗ, ಬೀದರ್‌ನಲ್ಲಿ ಅನ್ಯಪಕ್ಷಗಳ ಅಥವಾ ಸ್ವತಂತ್ರರು ಮೂರ್ನಾಲ್ಕು ಅಭ್ಯರ್ಥಿಗಳಾದರೂ ಗೆಲ್ಲುವ ಸಂಭವವಿದೆ. ಈ ರೀತಿ ಏನೇ ಅಳೆದು ಸುರಿದರೂ ಮತದಾರ ಪ್ರಭು ಬಿಜೆಪಿಯನ್ನು ಅಧಿಕಾರಕ್ಕೆ ತರಲಾರ, ಕಾಂಗ್ರೆಸ್ ಅನ್ನು ಏಕಾಂಗಿಯಾಗಿ ಬೆಂಬಲಿಸಲಾರ ಎಂಬ ಚಿತ್ರಣ ಸಿಗುತ್ತಿದೆ.

ಇನ್ನು ಜೆಡಿಎಸ್ ಸ್ವತಃ ಸ್ವತಂತ್ರ ಸರ್ಕಾರ ರಚಿಸುವ ಅಥವಾ ಹೆಚ್ಚು ಸ್ಥಾನ ಗಳಿಸುವ ಬಗ್ಗೆ ಮಾತಾಡುತ್ತಿಲ್ಲ. ಈ ಕ್ಷಣದ ಲೆಕ್ಕಾಚಾರಗಳ ಆಧಾರದಲ್ಲಿ ಹೇಳಬೇಕೆಂದರೆ ಯಾವುದೇ ಪಾರ್ಟಿಗೆ ಸರ್ಕಾರ ರಚಿಸಲು ಜೆಡಿಎಸ್‌ನ ಬೆಂಬಲ ಅನಿವಾರ್ಯ ಆಗಲಿದೆ. ಅರ್ಥಾತ್ ಕರ್ನಾಟಕದಲ್ಲಿ ಮತ್ತೆ ಹಂಗ್ ಅಸೆಂಬ್ಲಿ ನಿರ್ಮಾಣವಾಗಲಿದೆ. ಈ ಅತಂತ್ರ ಪರಿಸ್ಥಿತಿ ಪುನಃ ಮೈತ್ರಿ ಸರ್ಕಾರದ ಅಸ್ತಿತ್ವಕ್ಕೆ ದಾರಿ ಮಾಡಿಕೊಡುವಂತೆ ಕಾಣುತ್ತಿದೆ.

ಕಾಂಗ್ರೆಸ್ ಹಾಗೂ ಬಿಜೆಪಿ ಈ ಎರಡೂ ಪಕ್ಷಗಳೂ ಇತರ ರಾಜ್ಯಗಳಲ್ಲಿ ಮೈತ್ರಿ ಸರ್ಕಾರದ ಪಾಲುದಾರರಾಗಿ ಅಧಿಕಾರ ನಡೆಸುತ್ತಿವೆ.

ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ ಇಲ್ಲಿ ಬಿಜೆಪಿ ಏಕಾಂಗಿಯಾಗುಳಿಯುವ ಸಂಭವ ಹೆಚ್ಚಿದೆ. ಕಾಂಗ್ರೆಸ್-ಬಿಜೆಪಿ ಮೈತ್ರಿ ಎಂದಿಗೂ ಸಾಧ್ಯವಿಲ್ಲ. ಅದೇ ರೀತಿ ಜೆಡಿಎಸ್-ಬಿಜೆಪಿ ಮೈತ್ರಿಗೆ ಬಹುಶಃ ಈ ಎರಡೂ ಪಕ್ಷಗಳು ಒಪ್ಪಲಾರವು. ಆಗ ಉಳಿಯುವ ದಾರಿ ಒಂದೇ....

ಅದು

ಕಾಂಗ್ರೆಸ್-ದಳದ ಸಮ್ಮಿಶ್ರ ಸರ್ಕಾರ ಮಾತ್ರ.

ಇದನ್ನು ಹೊರತುಪಡಿಸಿದರೆ ಒಂದು ವೇಳೆ ಕಾಂಗ್ರೆಸ್ ನೂರರ ಹತ್ತಿರ ತಲುಪಿ ಎಸ್.ಪಿ., ಬಿಎಸ್‌ಪಿ, ಬಂಡಾಯ-ಸ್ವತಂತ್ರ ಅಭ್ಯರ್ಥಿಗಳೇನಾದರೂ ಇಪ್ಪತ್ತರ ಹತ್ತಿರ ಬಂದರೆ ಆಗ ಕಾಂಗ್ರೆಸ್ ಖಚಿತವಾಗಿ ಆ ಕಾಂಬಿನೇಷನ್‌ನ ಸರ್ಕಾರ ರಚಿಸಲು ಪ್ರಯತ್ನಿಸಲಿದೆ. ಜೆಡಿಎಸ್‌ನ ಹಂಗಿನಲ್ಲಿ ಸಿಕ್ಕಿಬೀಳುವುದಕ್ಕಿಂತ ಕಾಂಗ್ರೆಸ್‌ಗೆ ಇದೇ ಸರಾಗ ಎನಿಸಬಹುದೇನೊ, ಆದರೆ ಅಂತಿಮ ಸತ್ಯ ಒಂದೇ....


ಕರ್ನಾಟಕದಲ್ಲಿ ಹೊಸ ಸರ್ಕಾರದ ರಚನೆಯಲ್ಲಿ ಜೆಡಿಎಸ್ ಮತ್ತೆ ನಿರ್ಣಾಯಕ ಪಾತ್ರ ವಹಿಸುವ ಸಾಧ್ಯತೆ ಇದೆ.

ಮೂರನೇ ಹಂತದ ಸಮೀಕ್ಷೆ

ಜಿಲ್ಲೆ	ಕ್ಷೇತ್ರ	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರರು
ಬೆಳಗಾಂ	18	7-8	5-6	2-3	1
ಧಾರವಾಡ	7	3	3	1	
ಹಾವೇರಿ	6	3	2-3	-	1
ಗದಗ	4	3	-	1	
ಬಿಜಾಪುರ	8	3-4	3-4	1	
ಬಾಗಲಕೋಟೆ	7	2	4	-	1
ಗುಲ್ಬರ್ಗಾ	13	3-5	3-5	3-5	
ಬೀದರ್	6	3-4	2-3	1	1
ಒಟ್ಟು	69	27-32	22-28	8-10	3-4

ಗೆಲ್ಲಬೇಕಾದವರು

ಗುಲ್ಬರ್ಗಾ: ಎಸ್ .ಕೆ. ಕಾಂತಾ



ಎಸ್.ಕೆ.ಕಾಂತಾ

ಕರ್ನಾಟಕದ ಮಾನವಂತ ರಾಜಕಾರಣಿಗಳ ಪೈಕಿ ಎಸ್.ಕೆ. ಕಾಂತಾ ಸಹ ಒಬ್ಬರು. ಗುಲ್ಬರ್ಗಾ ದಕ್ಷಿಣ ಕ್ಷೇತ್ರದಿಂದ ಜಾತ್ಯತೀತ ಜನತಾದಳ(ಜೆಡಿಎಸ್)ದಿಂದ ಸ್ಪರ್ಧಿಸಿರುವ ಕಾಂತಾ ಸದಾ ಜನರ ಜೊತೆಯೇ ಇರುತ್ತಾ ಅವರ ಕಷ್ಟ ನೋವುಗಳಿಗೆ ಕಿವಿಗೊಡುತ್ತಾ ಬಂದಿದ್ದಾರೆ. ಜೊತೆಗೆ ಕರ್ನಾಟಕದ ಶಾಸನಸಭೆಯ ಮಹತ್ವದ ಪ್ರತಿನಿಧಿಯಾಗುವಷ್ಟು ಬೌದ್ಧಿಕ ತಿಳಿವಳಿಕೆ, ಸಾಮಾಜಿಕ ಕಾಳಜಿಗಳೂ ಕಾಂತಾರಿಗಿವೆ.

ಹೈದರಾಬಾದ್ ಕರ್ನಾಟಕದ ಅನಭಿವೃದ್ಧಿ, ತಾರತಮ್ಯ, ರೈತರ ಕಷ್ಟ, ವಲಸೆಗಳು ರಾಜ್ಯ ವಿಧಾನಸಭೆಯಲ್ಲಿ ಸರಿಯಾಗಿ ಮಂಡನೆಯಾಗಿ ಪರಿಹಾರ ಸಿಗಬೇಕೆಂದರೆ ಕಾಂತ ಗೆಲ್ಲಬೇಕು.

ಗುಲ್ಬರ್ಗಾದ ಮತದಾರ ಎಸ್.ಕೆ. ಕಾಂತಾರನ್ನು ಗೆಲ್ಲಿಸಿ ತನ್ನ ಪ್ರಬುದ್ಧತೆ ತೋರಲಿ.


ಚಿತ್ತಾಪುರ: ಮಲ್ಲಿಕಾರ್ಜುನ ಖರ್ಗೆ



ಕರ್ನಾಟಕದ ಮುಖ್ಯಮಂತ್ರಿ ಅಭ್ಯರ್ಥಿ ಎನಿಸಿಕೊಂಡಿರುವ ಖರ್ಗೆಗೆ ಚಿತ್ತಾಪುರ ಹೊಸ ಕ್ಷೇತ್ರ. ಅಲ್ಲಿಂದ ಖರ್ಗೆ ಗೆಲ್ಲುವ ಬಗ್ಗೆ ಯಾರಿಗೂ ಸಂಶಯವಿಲ್ಲ. ನಾಮಪತ್ರ ಸಲ್ಲಿಸುವ ದಿನ ಖರ್ಗೆ ಅತ್ತಿದ್ದು ನೋಡಿ ವಿರೋಧ ಪಕ್ಷದವರು ಗೇಲಿ ಮಾಡಿದ್ದರು. ಮತದಾರರೇನಾದರೂ ಹೊಸಬರೆಂದು ಸೋಲಿಸಿಬಿಟ್ಟರೆ ಎಂಬ ಡೌಟ್‌ನ ಕಾರಣಕ್ಕೆ ಈ ಖರ್ಗೆಯನ್ನು ದಯವಿಟ್ಟು ಗೆಲ್ಲಿಸಿ ಎಂದು ಮನವಿ ಮಾಡಬೇಕಾಗಿ ಬಂದಿದೆ.

ಖರ್ಗೆ ರಾಜ್ಯ ಕಾಂಗ್ರೆಸ್‌ನ ಅತೀ ಹಿರಿಯ ನಾಯಕರು. ನಾಳೆ ಅಕಸ್ಮಾತ್ ಕಾಂಗ್ರೆಸ್ಸೇ ಸರ್ಕಾರ ರಚಿಸಲು ಹೊರಟರೆ ಖರ್ಗೆ ಸಿದ್ಧರಾಮಯ್ಯ ತರದವರು ಮುಖ್ಯಮಂತ್ರಿಯಾಗಿ ಬರಬೇಕು. ಕಡುಭ್ರಷ್ಟ ಕೃಷ್ಣ ತರದವರಿಗೆ ಹೋಲಿಸಿದರೆ ಇವರು ವಾಸಿ. ಆದರೆ ಖರ್ಗೆ ಸಮಸ್ಯೆ ಏನೆಂದರೆ ಅವರು ಫೈಟರ್ ಅಲ್ಲ. ಚುನಾವಣೆಯಿರಲಿ, ಅಧಿಕಾರವಿರಲಿ ಹೋರಾಡಿ ಗೆಲ್ಲುವ ಛಲ ಅವರಿಗಿಲ್ಲ. ಅವರಿಗೆ ಏನೇ ದಕ್ಕಿದರೂ ಅದನ್ನು ಯಾರಾದರೂ ಎತ್ತಿ ಕೊಡಬೇಕಷ್ಟೆ.

ಆಳಂದ: ಬಿ.ಆರ್. ಪಾಟೀಲ


ಬಿ.ಆರ್.ಪಾಟೀಲ

ಈ ಬಾರಿಯ ಎಲೆಕ್ಷನ್‌ನಲ್ಲಿ ಗೆಲ್ಲಲೇಬೇಕಾದ ಅರ್ಹ ಉಮೇದುವಾರರಲ್ಲಿ ಬಿ.ಆರ್. ಪಾಟೀಲ್ ಒಬ್ಬರು. ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಈಗ ಭಾರಿ ಹೋರಾಟ ನಡೆದಿದೆ. ಕಾಂಗ್ರೆಸ್‌ನ ಪಾಟೀಲರ ವಿರುದ್ಧ ಬಿಜೆಪಿಯಿಂದ ಜವಳಿ ನಿಂತಿದ್ದಾರೆ. ಈತ ಸೇನಾ ವಿಮಾನವನ್ನೇ ಕದ್ದು ಇಂಗ್ಲೆಂಡಿನಲ್ಲಿ ಮಾರಿಕೊಂಡಿರುವ ದೇಶದ್ರೋಹಿ. ಇನ್ನು ಜೆಡಿಎಸ್‌ನ ಸುಭಾಷ್ ಗುತ್ತೇದಾರ ಎಂಥ ಪುಂಡ ಎಂಬುದು ಜನರಿಗೆ ಗೊತ್ತಿದೆ.

ಇವರಿಬ್ಬರಿಗೆ ಹೋಲಿಸಿದರೆ ಬಿ.ಆರ್. ಪಾಟೀಲ್ ಅಪರಂಜಿಯಂಥ ಮನುಷ್ಯ ಎನ್ನಬಹುದು.

ಹುಮನಾಬಾದ್: ಮೆರಾಜುದ್ದೀನ್ ಪಟೇಲ್

ಒಂದು ನಾಡಿನ ರಾಜಕೀಯ ಸ್ವಾರಸ್ಯಕರವಾಗಿರಬೇಕೆಂದರೆ ಮೆರಾಜುದ್ದೀನ್ ಪಟೇಲ್ ತರದವರು ಅಲ್ಲಿರಬೇಕು.



ದೇವೇಗೌಡರು ಈತನನ್ನು ಯಾವ ಪಾತಾಳ ಗರಡಿ ಹಾಕಿ ಹಿಡಿದೆತ್ತಿ ತಂದರೋ ಭಗವಂತನೇ ಬಲ್ಲ. ಆದರೆ ಸಮ್ಮಿಶ್ರ ಸರ್ಕಾರ ಪತನವಾಗುತ್ತಿರುವಾಗ ಮೆರಾಜುದ್ದೀನ್ ನಡೆಸಿದ ಚಟುವಟಿಕೆ, ನೀಡುತ್ತಿದ್ದ ರಂಜಕ ಪತ್ರಿಕಾ ಹೇಳಿಕೆಗಳೆಲ್ಲಾ ಆ ಇಡೀ ಸಂದರ್ಭದ tension ಅನ್ನು ಕಡಿಮೆ ಮಾಡಿದ್ದಂತೂ ನಿಜ.

ಇದೆಲ್ಲಾ ತಮಾಷೆಯ ಮಾತಾಯಿತು ಬಿಡಿ. ಮುಸ್ಲಿಂ ಸಮುದಾಯದ, ರಾಜಕಾರಣ ಬಲ್ಲ ನಾಯಕನೊಬ್ಬ ರಾಜ್ಯದ ಪ್ರಮುಖ ಪಕ್ಷವೊಂದರ ಅಧ್ಯಕ್ಷನಾಗಿರುವುದು ನಾವು ಸಂತೋಷಪಡಬೇಕಾದ ಸಂಗತಿ. ಅಲ್ಲದೆ ಮೆರಾಜುದ್ದೀನ್, ವಿಧಾನಸೌಧಕ್ಕೆ ಬಂದರೆ ಬೇರೇನೂ ಕಡಿದು ಕಟ್ಟೆ ಹಾಕದಿದ್ದರೂ ಸ್ವಾರಸ್ಯಕರ ಮಾತುಗಾರಿಕೆಗೆ ಕೊರತೆ ಇರಲಾರದು.

ತೇರದಾಳ: ಉಮಾಶ್ರೀ .




ಬಾಗಲಕೋಟೆ ಜಿಲ್ಲೆಯ ತೇರದಾಳು ತನಕ ಹೋಗಿ ಕಾಂಗ್ರೆಸ್ ಕ್ಯಾಂಡಿಡೇಟಾಗಿ ಸ್ಪರ್ಧಿಸಿದ್ದಾರೆ ಉಮಾಶ್ರೀ. ಇವರು ಎರಡು ಕಾರಣಗಳಿಗಾಗಿ ಗೆಲ್ಲಬೇಕು.

ಒಂದು, ಸ್ವಭಾವತಃ ಅಂತಃಕರಣ, ಮನುಷ್ಯತ್ವವಿರುವ ಉಮಾಶ್ರೀ ಒಮ್ಮೆ ಎಂಎಲ್‌ಸಿ ಆಗಿದ್ದಾಗಲೂ ಹೆಸರು-ಕೈ ಕೆಡಿಸಿಕೊಂಡಿರಲಿಲ್ಲ. ಇನ್ನೊಂದು ಇಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಸಿದ್ದು ಸವದಿ ಸೋಲಬೇಕಾಗಿರುವುದರಿಂದ ಈತನ ಬದಲಾಗಿ ಕಾಂಗ್ರೆಸ್‌ನ ಉಮಾಶ್ರೀ ಉತ್ತಮ ಆಯ್ಕೆ ಆಗಬಲ್ಲರು.

ಯಾದಗೀರ್: ಡಾ. ಮಲಕರೆಡ್ಡಿ

ಈ ಹಿಂದೆ ಶಾಸಕ, ಸಚಿವರಾಗಿ ಒಳ್ಳೆಯ ಕೆಲಸ ಮಾಡಿರುವ ಡಾ. ಮಲಕರೆಡ್ಡಿಯವರ ಪರವಾಗಿ ಯಾದಗೀರ್‌ನ ಮತದಾರ ನಿಲ್ಲಬೇಕು. ಸಜ್ಜನಿಕೆ ಹಾಗೂ ಸರಳತೆ ಎರಡನ್ನು ಮೈಗೂಡಿಸಿಕೊಂಡಿರುವ ಮಲಕರೆಡ್ಡಿ ಓರ್ವ ಸಭ್ಯ ರಾಜಕಾರಣಿ.


ಗದಗ: ಎಚ್.ಕೆ. ಪಾಟೀಲ್



ಎಚ್.ಕೆ. ಪಾಟೀಲರಿಗೆ ಇದು ಮೊದಲ ನೇರ ಚುನಾವಣೆ. ರಾಜ್ಯ ಕಾಂಗ್ರೆಸ್‌ನ ಪ್ರಮುಖ ನಾಯಕರಲ್ಲಿ ಒಬ್ಬರಾಗಿರುವ ಪಾಟೀಲ್ ಈ ಹಿಂದೆ ಬೃಹತ್ ನೀರಾವರಿ ಸಚಿವರಾಗಿದ್ದಾಗ ಗಮನಾರ್ಹ ಕೆಲಸ ಮಾಡಿದ್ದರು. ಬಹಳ ಮುಖ್ಯವಾಗಿ ಭ್ರಷ್ಟಾಚಾರ ನಿಯಂತ್ರಿಸಲು ಕೆಲ ಪ್ರಾಮಾಣಿಕ ಪ್ರಯತ್ನ ಹಾಕಿದ್ದರು.

ಗದಗದಿಂದ ಎಚ್.ಕೆ. ಪಾಟೀಲರು ಈ ಬಾರಿ ಗೆಲ್ಲಬೇಕಿರುವುದು ಅತೀ ಮುಖ್ಯ. ಏಕೆಂದರೆ ಈಗಾಗಲೇ ಗೊತ್ತಾಗಿರುವ ಚುನಾವಣಾ ಫಲಿತಾಂಶ ಏನೆಂದರೆ ರಾಜ್ಯದಲ್ಲಿ ಮತ್ತೆ ಅತಂತ್ರ ವಿಧಾನಸಭೆ ಏರ್ಪಡಲಿದೆ. ಅಂತ ಸಂದರ್ಭದಲ್ಲಿ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವನ್ನು ರಚಿಸುವ ಸನ್ನಿವೇಶ ಬಂದರೆ ಎಚ್.ಕೆ. ಪಾಟೀಲ್‌ಗೆ ಅದರಲ್ಲಿ ಒಂದು ಪ್ರಮುಖ ಪಾತ್ರವಿರುತ್ತದೆ.

ಸಂತೋಷ್ ಲಾಡ್ ಯಾಕೆ ಗೆಲ್ಲಬೇಕೆಂದರೆ...




ಇಡೀ ರಾಜ್ಯದ ಗಮನ ಸೆಳೆದಿರುವ ಕ್ಷೇತ್ರ ಧಾರವಾಡದ ಕಲಘಟಗಿ. ಇಲ್ಲಿ ಕಾಂಗ್ರೆಸ್‌ನಿಂದ ಸಂತೋಷ್ ಲಾಡ ಸ್ಪರ್ಧಿಸಿದ್ದಾರೆ. ಇವರು ಗಣಿ ವ್ಯವಹಾರದಲ್ಲಿ ಇದ್ದರೂ ಜನಾರ್ಧನ ರೆಡ್ಡಿ ಮತ್ತಿತರರಿಗೆ ಹೋಲಿಸಿದರೆ ಸಂತೋಷ್ ಲಾಡ್ ಪ್ರಬುದ್ಧನೆಂದೇ ಹೇಳಬೇಕು. ದರ್ಪ, ದೌರ್ಜನ್ಯ, ಅಟ್ಟಹಾಸ ಈ ಯಾವ ಅಪವಾದಗಳೂ ಸಂತೋಷ್ ಲಾಡ್‌ಗಿಲ್ಲ. ಕಲಘಟಗಿಯಲ್ಲಿ ಲಾಡ್ ವಿರುದ್ಧ ಬಿಜೆಪಿಯ ಚೆನ್ನಪ್ಪ ಲಿಂಬಣ್ಣನವರ್ ಹಾಗು ಜೆಡಿಎಸ್‌ನ ಈರಪ್ಪ ಗೋಕುಲ ಸೆಣಸಾಡುತ್ತಿದ್ದಾರೆ. ಆದರೆ ಲಾಡ್ ಎಲ್ಲ ರೀತಿಯಲ್ಲೂ ಈಗಾಗಲೇ ಮೇಲುಗೈ ಸಾಧಿಸುತ್ತಿದ್ದಾರೆ.


ಧಾರವಾಡದ ಅತ್ಯಂತ ಹಿಂದುಳಿದ ವಿಧಾನ ಸಭಾ ಕ್ಷೇತ್ರವಾದ ಕಲಘಟಗಿ ಜನರಿಗೆ ಈಗ ಬೇಕಿರುವುದು ಮೂಲಭೂತ ಸೌಕರ್ಯಗಳು ಹಾಗೂ ಅಭಿವೃದ್ಧಿ ಮಾತ್ರ. ಲಾಡ್‌ಗೆ ಇದು ಅರ್ಥವಾಗಿದೆ. ಹಾಗಾಗಿ ತಾನು ಗೆದ್ದಲ್ಲಿ ಕ್ಷೇತ್ರದ ಅಭಿವೃಧಿಗೆ ಶ್ರಮಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಈ ಲಾಡ್ ವಿಶೇಷ ಏನೆಂದರೆ ಅಕಸ್ಮಾತ್ ತಾನು ಸೋತರೂ ಕಲಘಟಗಿಯ ಜನರಿಂದ ದೂರವಾಗದೇ ಆಗಲೂ ಅಭಿವೃದ್ಧಿ ಕಾರ್ಯ ನಡೆಸುವುದಾಗಿಯೂ ಮತ್ತು ಉದ್ಯೋಗ ಸೃಷ್ಟಿಗೆ ಕೈಗಾರಿಕೆಗಳನ್ನು ಸ್ಥಾಪಿಸುವುದಾಗಿಯೂ ಮಾತು ಕೊಟ್ಟಿದ್ದಾರೆ. ಈ ಹಿಂದೆ ಅವರು ಪ್ರತಿನಿಧಿಸಿದ್ದ ಸಂಡೂರಿನಲ್ಲಿಯೂ ಅವರು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರು.

ಬಳ್ಳಾರಿಯ ಗಣಿ ಧಣಿಗಳೆಂದರೆ ಯಾರೂ ಮಾತನಾಡಿಸಲಿಕ್ಕಾಗದ ಕುಬೇರರು ಹಾಗು ಹಣದಿಂದಲೇ ಎಲ್ಲವನ್ನು ಖರೀಧಿಸುತ್ತೇವೆಂಬ ಅಹಂನವರು ಎಂಬ ಭಾವನೆ ಕೆಲ ಜನರಲ್ಲಿದೆ. ಆದರೆ ಲಾಡ್ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಾರೆ. ಕಲಘಟಗಿ ಚಿಕ್ಕ ಕ್ಷೇತ್ರವಾಗಿರಬಹುದು, ಆದರೆ ಕರ್ನಾಟಕದ ಮುಂದಿನ ರಾಜಕಾರಣದಲ್ಲಿ ಸಂತೋಷ್ ಲಾಡ್ ಕೂಡ ಒಂದು ಪ್ರಮುಖ ಪಾತ್ರ ನಿರ್ವಹಿಸುವ ಸಾಧ್ಯತೆಗಳಿರುವುದರಿಂದ ಕ್ಷೇತ್ರದ ಜನ ಅವರನ್ನು ಆರಿಸಿ ಕಳುಹಿಸಿದಲ್ಲಿ ಕಲಘಟಗಿಯ ಮತದಾರ ಹೆಚ್ಚು ಅನುಕೂಲಗಳನ್ನು ಪಡೆಯಬಹುದಾಗಿದೆ. ■

ಜಾರಕಿಹೊಳಿ ಸಹೋದರರ ಕದನ ಅಸಲೀನಾ? ನಕಲೀನಾ?

ಈ ತರಹದ್ದೊಂದು ಅನುಮಾನ ಬೆಳಗಾವಿ ಜನರಿಗೆ ಬಂದು ಬಿಟ್ಟದೆ. ಅದು ಯಾಕೆಂದರೆ ಇದುವರೆಗೂ ಒಟ್ಟಾಗಿದ್ದ ಜಾರಕಿಹೊಳಿ ಫ್ಯಾಮಿಲಿಯ ಐವರು ಸಹೋದರರು ಎರಡು ಗುಂಪುಗಳಾಗಿದ್ದಾರೆ. ಇದೇನೂ ಹಳೆಯ ವಿಚಾರ. ಆದರೀಗ ಐವರಲ್ಲಿ ನಾಲ್ವರು ಸೋದರರು ದಳ-ಕಾಂಗ್ರೆಸ್-ಬಿಜೆಪಿಯಲ್ಲಿ ಹಂಚಿಹೋಗಿದ್ದಾರೆ. ಅಷ್ಟೇ ಅಲ್ಲ, ಗೋಕಾಕ್ ಕ್ಷೇತ್ರದಲ್ಲಿ ರಮೇಶ ಜಾರಕಿಹೊಳಿ ವಿರುದ್ಧ ಸ್ವಂತ ಸೋದರ ಭೀಮಶಿ ಜಾರಕಿಹೊಳಿ ತೊಡೆ ತಟ್ಟಿ ಅಖಾಡಕ್ಕಿಳಿದಿದ್ದಾರೆ. ರಮೇಶ ಕಾಂಗ್ರೆಸ್ ಅಭ್ಯರ್ಥಿಯಾದರೆ ಭೀಮಶಿ ಬಿಜೆಪಿ ಹುರಿಯಾಳು. ಕಳೆದ 20 ವರ್ಷಗಳಿಂದ ಈ ಜಾರಕಿಹೊಳಿ ಬ್ರದರ್ಸ್ ಏಳಿಗೆ ಕಂಡಿರುವವರಿಗೆಲ್ಲ ಅರ್ಥವಾಗದ ಒಂದು ಸಂಗತಿ ಏನೆಂದರೆ ಇವರು ಎಲ್ಲೇ ಇರಲಿ ಏನೇ ಮಾಡಲಿ ಅಂತಿಮವಾಗಿ ಅದು ಇಡೀ ಜಾರಕಿಹೊಳಿ ಫ್ಯಾಮಿಲಿಯ ಹಿತರಕ್ಷಣೆ ಮಾಡುವಲ್ಲಿ ಕೊನೆಯಾಗುವಂತಿರುತ್ತಿತ್ತು. ಶುಗರ್ ಫ್ಯಾಕ್ಟರಿ, ಲಿಕ್ಕರ್ ಬ್ಯುಸಿನೆಸ್, ಪತ್ರಿಕೆ ವ್ಯವಹಾರ, ಮಿಲ್ಕ್, ಗೋಕಾಕ್ ಮಿಲ್... ಹೀಗೆ ಒಂದು ಸಾವಿರ ಕೋಟಿ ರೂ. ಮೀರುವ ಇವರ ಒಟ್ಟಾರೆ ವ್ಯವಹಾರಗಳ ಮುಖ್ಯಸ್ಥರಾಗಿ ಬೇರೆ ಬೇರೆ ಜಾರಕಿಹೊಳಿಗಳಿರುತ್ತಿದ್ದರಾದರೂ ಎಂದೂ ಪರಸ್ಪರ ಬಡಿದಾಡಿಕೊಳ್ಳುತ್ತಿರಲಿಲ್ಲ. ಆದರೀಗ ಪರಿಸ್ಥಿತಿ ಬೇರೆ ರೀತಿ ಕಾಣುತ್ತಿದೆ.







ಜೆಡಿಎಸ್‌ನ ಬಾಲಚಂದ್ರ ಹಾಗೂ ಬಿಜೆಪಿಯ ಭೀಮಶಿ ಹಾಗೂ ಕೊನೆಯ ಸೋದರ ಲಖನ್ ಒಂದು ಗುಂಪಾಗಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್‌ನ ಸತೀಶ ಹಾಗೂ ರಮೇಶ ಜಾರಕಿಹೊಳಿಗಳು ಬೇರೆ ಗುಂಪಾಗಿ ಮುಂದುವರೆಯುತ್ತಿದ್ದಾರೆ.

ಇವರ ಜಗಳದ ಮೂಲ ಖಂಡಿತವಾಗಿ ಯಾರಿಗೂ ಹೇಳಲಿಕ್ಕಾಗದೇ ಹೋದರೂ ಪರಸ್ಪರರ ವಿರುದ್ಧ ಹಲ್ಲು ಕಡಿಯುತ್ತ ಕೈಲಾದಷ್ಟು ಡ್ಯಾಮೇಜ್ ಮಾಡಿರುವುದಕ್ಕಂತೂ ಸಾಕ್ಷಿಗಳಿವೆ. ಮೂಲತಃ ಲಿಕ್ಕರ್ ದಂಧೆಯಿಂದ ಬೆಳೆದು ಬಂದ ಜಾರಕಿಹೊಳಿಗಳು ಈಗ ಹಲವು ಹತ್ತು ವ್ಯವಹಾರಗಳಿಗೆ ಶಿಫ್ಟ್ ಆಗಿದ್ದಾರೆ. ರಾಜಕೀಯವೂ ಅದರಲ್ಲೊಂದು. ಇವರ ಕೊನೆಯ ಸೋದರ ಲಕ್ಕಪ್ಪ ಯಾನೆ ಲಖನ್ ಜಾರಕಿಹೊಳಿ ಮಾತ್ರ ಈಗಲೂ ಹಳೆಯ ಲಿಕ್ಕರ್ ವ್ಯವಹಾರ ನಡೆಸಿಕೊಂಡಿದ್ದಾನೆ. ಸತೀಶ ಜಾರಕಿಹೊಳಿ ಕಳೆದ ಬಾರಿ ಮಂತ್ರಿಯಾಗಿದ್ದಾಗ ತಮ್ಮನ ಮೇಲಿನ ದ್ವೇಷದಿಂದ ತನ್ನ ಅಧಿಕಾರಬಲ ಬಳಸಿ ಲಖನ್‌ನ ಅಕ್ರಮ ಲಿಕ್ಕರ್ ದಂಧೆ ಮೇಲೆ ರೇಡು ಮಾಡಿಸಿದ್ದ ಸಂಗತಿ ಜನರಿಗೆ ಗೊತ್ತು. ಹಾಗಾಗಿ ಸತೀಶ ವಿರುದ್ಧ ಸೆಟೆದುಕೊಂಡ ಲಖನ್ ಈಗ ಬಾಲಚಂದ್ರ, ಭೀಮಶಿ ಗುಂಪು ಸೇರಿಕೊಂಡಿದ್ದಾನೆ.

ಸೋಲಬೇಕಾದವರು



ಬಿಜಾಪುರ: ಅಪ್ಪುಪಟ್ಟಣಶೆಟ್ಟಿ

ಬಿಜೆಪಿಯ ಲಿಂಗಾಯತರು ಮುಖವಾಡಗಳ ಪೈಕಿ ಈ ಅಪ್ಪು ಪಟ್ಟಣಶೆಟ್ಟಿ ಕೂಡಾ ಒಬ್ಬ. ಸಮ್ಮಿಶ್ರ ಸರ್ಕಾರವಿದ್ದಾಗ ಈ ಅಪ್ಪು ಇನ್ನೇನು ಮಿನಿಸ್ಟರ್ ಆಗೇ ಹೋದ ಎಂಬಂತ ಹವಾ ಕ್ರಿಯೇಟ್ ಆಗಿಹೋಗಿತ್ತು. ಯಡ್ಡಿ ಬಳಗದ ಬಂಟ ಎನಿಸಿಕೊಂಡಿದ್ದ ಈತ ಭ್ರಷ್ಟಾಚಾರ, ಕಮಿಷನ್ ದಂಧೆಗಳಲಲ್ಲಾ ಚೆನ್ನಾಗಿ ಮೇಯ್ದು ದುಂಡಗಾಗಿದ್ದಾನೆ. ಮುಖ್ಯವಾಗಿ ಹಿಂದೂ ಕೋಮುವಾದಿ ಬಿಜೆಪಿಗಳಿಂದ ಲಿಂಗಾಯತರು ದೂರ ನಿಲ್ಲಬೇಕಾಗಿರುವ ಇವತ್ತಿನ ಸನ್ನಿವೇಶದಲ್ಲಿ ಅಪ್ಪು ಪಟ್ಟಣಶೆಟ್ಟಿ ತರದವರು ಸೋತರೆ ಉತ್ತಮ.



ಬಾಗಲಕೋಟೆ: ಚರಂತಿಮಠ

ಕೋಮುವಾದಿಗಳ ಡೇಂಜರಸ್ ನಾಯಕರುಗಳ ಪೈಕಿ ಒಬ್ಬನಾದ ಚರಂತಿಮಠ ಈ ಬಾರಿ ಸೋತರೆ ಬಾಗಲಕೋಟೆಯ ಜನರಿಗೇ ನೆಮ್ಮದಿ. ಕನಿಷ್ಠ ಆಗಲಾದರು ನಿರಾಶ್ರಿತರ ಪುನರ್ ವಸತಿ, ಪರಿಹಾರ ಸೌಲಭ್ಯ ಮುಂತಾದ ವಿಚಾರಗಳು ಚರ್ಚೆಗೆ ಬರಬಹುದು. ಇಲ್ಲದಿದ್ದರೆ ಚರಂತಿಮಠನಂಥ ಕೋಮುವಾದಿಗಳು ಬರೀ ಹಿಂದೂ-ಮುಸ್ಲಿಂ ವಿಚಾರ, ಗೋಮಾಂಸ, ಮತಾಂತರದಂತಹ ಚಿಲ್ಲರೆ ವಿಚಾರಗಳಲ್ಲೇ ದಿನ ಕಳೆಯುತ್ತಾ ಜನರನ್ನು ಸತಾಯಿಸುತ್ತಾ ಹೋಗುತ್ತಾರೆ.

ಬಾಗಲಕೋಟೆ ಜನರಿಗೆ ನೆಮ್ಮದಿ ಬೇಕೆಂದಿದ್ದರೆ ಈ ಚಡ್ಡಿ ಚರಂತಿಮಠನನ್ನು ತಿರಸ್ಕರಿಸಬೇಕಿದೆ.



ಬೀಳಗಿ: ಮುರುಗೇಶ ನಿರಾಣಿ

ಕಳೆದ ಬಾರಿ ಬಿಜೆಪಿಯಿಂದ ಗೆದ್ದು ಬಂದಿದ್ದ ನಿರಾಣಿ ಬೆಂಗಳೂರಿನಲ್ಲಿ ಏನೇನು ಸಾಂಸ್ಕೃತಿಕ ಕೆಲಸ ಮಾಡುತ್ತಿದ್ದ ಎಂಬುದಷ್ಟೇ ಕ್ಷೇತ್ರದ ಜನಕ್ಕೆ ಗೊತ್ತಾದರೂ ಸಾಕು, ಮತದಾರ ಇವನ ಠೇವಣಿ ಉಳಿಸಲಾರ.

ಅಂಥ ಭ್ರಷ್ಟ, ಸ್ತ್ರೀಲೋಲ ಈ ನಿರಾಣಿ.

ಬೆಂಗಳೂರಿನ ಹೈಗ್ರೌಂಡ್ಸ್ ಏರಿಯಾದಲ್ಲಿರುವ ಇವನ ಸಿಮೆಂಟ್ ಕಂಪನಿಯ ಕಾರ್ಪೊರೇಟ್ ಕಚೇರಿಯೇ ನಿತ್ಯ ರಾತ್ರಿಯ ರಂಗೀಲಾ ಅಡ್ಡೆಯೂ ಆಗಿರುತ್ತಿತ್ತು. ಜೊತೆಗೆ ತನ್ನ ಕ್ಷೇತ್ರದ ಕಾಮಗಾರಿಗಳಿಗೆ ತನ್ನದೇ ಕಳಪೇ ಬ್ರಾಂಡಿನ ಸಿಮೆಂಟ್ ಸಪ್ಲೈ ಮಾಡಿಯೇ ಇವನು ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ವಂಚಿಸಿ ತಿಂದಿದ್ದಾನೆ. ನಿರಾಣಿ ಅಯೋಗ್ಯ, ಬೀಳಗಿ ಮತದಾರರ ಪ್ರತಿನಿಧಿಯಾಗಲು ನಾಲಾಯಕ್ಕು. ■

ರಾಜಕೀಯಕ್ಕೂ ಬಂದ ದ್ವೇಷ

ಈ ಬಾರಿಯ ಎಲೆಕ್ಷನ್‌ನಲ್ಲಿ ಬಾಲಚಂದ್ರ ... ಅರಭಾವಿ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ... ಸ್ಪರ್ಧಿಸಿದ್ದಾರೆ.

ಕಾಂಗ್ರೆಸ್‌ನ ಕೌಜಲಗಿ ಇಲ್ಲಿ ಪ್ರತಿಸ್ಪರ್ಧಿ. ... ಆಶ್ಚರ್ಯದ ಸಂಗತಿ ಏನೆಂದರೆ ಬಾಲಚಂದ್ರನ ... ವಿರೋಧಿಯಾದ ಸತೀಶ ಅಥವಾ ರಮೇಶ ಸ್ವತಃ ... ಕಾಂಗ್ರೆಸ್‌ನವರಾಗಿದ್ದರೂ ಇಲ್ಲಿ ದಳದ ಬಾಲಚಂದ್ರ ... ಸೋಲಿಸಲು ಕೌಜಲಗಿಗೆ ಯಾರೂ ನೆರವು ... ನೀಡುತ್ತಿಲ್ಲ... ಆದರೆ ಅತ್ತ ಗೋಕಾಕ್ ... ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರಮೇಶ್ ... ಜಾರಕಿಹೊಳಿ ವಿರುದ್ಧ ಬಿಜೆಪಿಯಿಂದ ... ಭೀಮಶಿ ಜಾರಕಿಹೊಳಿ ... ನಿಂತಿದ್ದಾರೆ.

ಈ ಭೀಮಶಿ , ... ಬಾಲಚಂದ್ರನ ಗುಂಪಿನ ... ಸೋದರ ಸದಸ್ಯ ಮತ್ತು ... ರಮೇಶನನ್ನು ಗೋಕಾಕ್‌ನಲ್ಲಿ ... ಸೋಲಿಸಲೇಬೇಕೆಂದು ... ನಿಜವಾಗಲೂ ಓಡಾಡುತ್ತಿದ್ದಾನೆ.

ಬಾಲಚಂದ್ರನ ಬೆಂಬಲವೂ ... ಭೀಮಶಿಗಿದೆ ಮತ್ತು ಒಂದು ವಿಚಿತ್ರ ... ಯಾವುದೆಂದರೆ ಸತೀಶ ಜಾರಕಿಹೊಳಿ ... ಯಮಕನಮರಡಿ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ... ಪರ ಸ್ಪರ್ಧಿಸಿದ್ದರೆ ಅಲ್ಲಿ ಬೇರಿನ್ಯಾವ ವಿರೋಧಿಯೂ ... ಜಾರಕಿಹೊಳಿಗೆ ಕಾಣುತ್ತಿಲ್ಲ, ಅಲ್ಲಿ ಸತೀಶ ... ಗೆಲ್ಲುವುದು ಬಹುತೇಕ ಖಚಿತ.

ಅಂದರೆ ಅರಭಾವಿಯಲ್ಲಿ ದಳದಿಂದ ... ಬಾಲಚಂದ್ರ, ಯಮಕನಮರಡಿಯಲ್ಲಿ ... ಕಾಂಗ್ರೆಸ್‌ನಿಂದ ಸತೀಶ ಗೆಲ್ಲಲು ಯಾವುದೇ ... ಅಡೆತಡೆ ಬಾರದಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ... ಆದರೆ ಗೋಕಾಕ್‌ನಲ್ಲಿ ಮಾತ್ರ ರಮೇಶ ಅಂಡ್ ... ಭೀಮಶಿ ಪರಸ್ಪರರ ಕಾಲೆಳೆಯುತ್ತಾ ... ಬಡಿದಾಡುತ್ತಿದ್ದಾರೆ. ಒಂದು ಹಂತದಲ್ಲಿ ಜಿಲ್ಲೆಯ ... ಜನ ಇದೂ ಒಂದು ನಾಟಕ ಎಂದೇ ನಂಬಿದ್ದರು ನಿಜ. ಅಂದರೆ ಭೀಮಶಿ ಬೇಕಂತಲೇ ಬಿಜೆಪಿ ಟಿಕೆಟು ಪಡೆದು ಆಮೇಲೆ ಅಣ್ಣ ರಮೇಶ ಕಾಂಗ್ರೆಸ್‌ನಿಂದ ಆರಾಮವಾಗಿ ಗೆಲ್ಲುವಂತೆ ಒಳಗಿಂದೊಳಗೆ ಅನುಕೂಲ ಮಾಡಿಕೊಡಲಿದ್ದಾನೆ ಎಂದು ಭಾವಿಸಲಾಗಿತ್ತು. ಹಾಗೇ ಮಾಡಿದ್ದಿದ್ದರೆ ಬಿಜೆಪಿ ಅಭ್ಯರ್ಥಿ ಭೀಮಶಿ ಇಲ್ಲಿ ಕೇವಲ ಡಮ್ಮಿ ಕ್ಯಾಂಡಿಡೇಟ್ ಅನ್ನಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಅದು ಆಗುತ್ತಿಲ್ಲ. ಭೀಮಶಿ ಸೀರಿಯಸ್ಸಾಗಿದ್ದಾನೆ.

ಕರ್ನಾಟಕ ರಾಜಕೀಯದಲ್ಲಿ ಸೋದರರ ಸವಾಲ್ ಹೊಸದೇನಲ್ಲ. ಬಳ್ಳಾರಿಯ ತ್ರಿವಳಿ ಗೂಂಡಾ ರೆಡ್ಡಿಗಳು ಬಿಜೆಪಿಯಲ್ಲಿದ್ದಾರೆ. ಆದರೆ ಪರಸ್ಪರ ಬಡಿದಾಡಿಕೊಂಡಿಲ್ಲ. ಆದರೆ ಬೆಂಗಳೂರಿನಲ್ಲಿ ಇದೇ ಬಿಜೆಪಿಯ ಅಭ್ಯರ್ಥಿಗಳಾಗಿರುವ ಎಂ. ಶ್ರೀನಿವಾಸ್-ಎಂ ಕೃಷ್ಣಪ್ಪರೆಂಬ ಭೂಗಳ್ಳರು ಆಗಾಗ್ಗೆ ಕಿತ್ತಾಡಿಕೊಳ್ಳುತ್ತಿರುತ್ತಾರೆ. ಇನ್ನು ಆರ್. ಅಶೋಕ್ ಮತ್ತವನ ತಮ್ಮ ರವಿ ಸೋದರರು ಕೂಡಾ ಈ ಬಾರಿ ಬಿಜೆಪಿ ಟಿಕೆಟ್ ಮೇಲೆ ಸ್ಪರ್ಧಿಸಿದ್ದಾರೆ. ಇವರಿಬ್ಬರು ಒರಿಜನಲ್ ಖದೀಮರೇ ಆದ ಕಾರಣ ಪಬ್ಲಿಕ್ ಆಗಿ ಜಗಳ ಆಡಿಲ್ಲ. ಇನ್ನು ಗುಲ್ಬರ್ಗಾದ ಗುತ್ತೇದಾರ ಫ್ಯಾಮಿಲಿ ಬ್ರದರ್ಸ್ ಕೂಡಾ ಪರಸ್ಪರರನ್ನು ಮುಗಿಸುವ ರಾಜಕೀಯ ಮಾಡುತ್ತಿಲ್ಲ.

ಆದರೆ ಬೇರೆಲ್ಲೂ ಕಾಣದ ಈ ಸೋದರ ಕಲಹ ಮಾತ್ರ ಬೆಳಗಾವಿಯ 'ಜಾರಕಿಹೊಳಿ ಬ್ರದರ್ಸ್'ಗಳಲ್ಲಿ ಬೆಳೆಯುತ್ತಿದೆ.


ಇವರ ಜಗಳ ಈಗ ಎಲೆಕ್ಷನ್ ಮಟ್ಟಿಗೆ ಸೀಮಿತವಾದಂತಿದೆ. ನಾಳೆ ಬೀದಿಗೆ ಬಂತೋ, ಆಗ ಹತಾರಗಳೂ ಆಚೆ ಬರುತ್ತವೆ. ಅಂತಾ ಫ್ಯೂಡಲ್ ರಾಜಕಾರಣ ಬೆಳಗಾಂನದ್ದು, ಜಾರಕಿಹೊಳಿ ಬ್ರದರ್ಸ್‌ಗಳೇ ಅದರ ಕಿರೀಟ. ■

ಚುನಾವಣೆ 2008

ಎಲೆಕ್ಷನ್ ಎಡವಟ್ಟುಗಳು

ಬಳ್ಳಾರಿ ಗಣಿ ರೆಡ್ಡಿಗಳ ವಾಚ್‌ಮನ್ ಶ್ರೀರಾಮುಲು ಎಷ್ಟನೇ ಕ್ಲಾಸ್ ಪಾಸು ಮಾಡಿದ್ದಾನೋ ಏನೋ ನಮಗೆ ಗೊತ್ತಿಲ್ಲ. ಒಮ್ಮೆ ಶಾಸಕ ಹಾಗೂ ಮಂತ್ರಿಯಾಗಿದ್ದ ಈ ರಾಮುಲು ಬಾಯಿ ಬಿಟ್ಟರೆ ಮಾತ್ರ ಬಣ್ಣಗೇಡು.

ಮೊನ್ನೆ ಏನಾಯಿತು ಗೊತ್ತಾ? ಬಳ್ಳಾರಿಯಲ್ಲೊಂದು ಚುನಾವಣಾ ಸಭೆ. ಬಿಜೆಪಿಯ ಅನೇಕ ಲೀಡರುಗಳು ವೇದಿಕೆ ಮೇಲಿದ್ದಾರೆ. ಡ್ರೈ ಬಾಟಾದ ಹಣಕ್ಕಾಗಿ ಬಂದಿದ್ದ ನೂರಾರು ಜನ ಸೇರಿದ್ದಾರೆ.



ಆಗ ರಾಮುಲು ಭಾಷಣ ಹೀಗೆ ಶುರುವಾಯಿತು:

"ಮಹಾಜನಗಳೇ. ನಮ್ಮ ಭಾರತೀಯ ಜನತಾ ಪಾರ್ಟಿ ಗೆದ್ದು ಬಂದರೆ ನಿಮಗೆಲ್ಲಾ ಒಳ್ಳೇದು ಮಾಡ್ತದೆ. ಆದರೆ ಕಾಂಗ್ರೆಸ್‌ಗೆ ಓಟು ಹಾಕಿದರೆ ಏನೂ ಬದಲಾವಣೆ ಬರಲ್ಲ. ಯಾಕೆಂದ್ರೆ ಆವಾಗ ಬಡವ್ರು ಬಡವ್ರಾಗೇ ಇರ್ತಾರೆ. ಅಕ್ಕತಂಗೀರು ಅಕ್ಕತಂಗೀರಾಗೇ ಇರ್ತಾರೆ...!"

ಎಲಾ ಇವ್ನ...!

ಕಾಂಗ್ರೆಸ್ ಗೆದ್ದರೆ ಬಡವರು ಬಡವರಾಗೇ ಇರ್ತಾರೆಂಬ ಮಾತು ನಿಜ ಇರಬಹುದು. ಬಿಜೆಪಿ ಬಂದರಂತೂ ಬಡವರು ಬಡವರಾಗೂ ಬದುಕಲು ಬಿಡದೆ ಬೆಂಕಿ ಹಚ್ಚಿ ಸಾಯಿಸ್ತಾರೆಂಬುದು ಬೇರೆ ಮಾತು. ಆದರೆ "ಕಾಂಗ್ರೆಸ್ ಗೆದ್ದರೆ ಅಕ್ಕತಂಗೀರು ಅಕ್ಕ ತಂಗೀರಾಗೇ ಇರಬೇಕಾಗುತ್ತದೆ" ಅಂದರೆ ಏನರ್ಥ?

ಅವರೇನು ಅಣ್ಣತಮ್ಮ ಆಗಿ ಬದಲಾಗಬೇಕಾ? ಇಲ್ಲಾ ಅತ್ತೆ ಸೊಸೆ ಅಥವಾ ಬೇರೇನೊ ಆಗಲು ಸಾಧ್ಯನಾ?


ಇದು ರಾಮುಲು ಮಾತಿನ ವರಸೆ.

ಭಾಷಣ ಮಾಡುವಾಗ ಒಂದೇ ಒಂದು ಸರಳ ಕನ್ನಡ ವಾಕ್ಯ ಮಾತಾಡಲಿಕ್ಕೂ ಬರದ ಇಂಥ ಅಯೋಗ್ಯರೂ ಕೂಡ ಈಗ ಶಾಸನಸಭೆಗೆ ಹೋಗಲು ಆಸೆ ಪಡುತ್ತಿದ್ದಾರೆ.

ನರ್ಸ್ ರೇಣುಕಾ ಕಣ್ಣೀರು!

ಈ ರಾಜಕಾರಣಿಗಳು ಮಾಡಿಕೊಳ್ಳುವ ಎಡವಟ್ಟುಗಳು ಕೆಲವೊಮ್ಮೆ ಜೀವನಪೂರ್ತಿ ಕಾಟ ಕೊಡುತ್ತಿರುತ್ತವೆ.

ಮಾಜಿ ಶಾಸಕ ರೇಣುಕನ ಕತೆಯೂ ಅದೇನೆ. ನರ್ಸ್ ಜಯಲಕ್ಷ್ಮಿ ಈ ರೇಣುಕಾಚಾರಿ ಮಾನಮರ್ಯಾದೆ ಕಳೆದು ಓಡಿಸಿದ್ದಳಲ್ಲ, ಅದಂತೂ ಒಳ್ಳೇ ಮಸಾಲಾ ಕಾಮಿಡಿ ಟಿವಿ ಸೀರಿಯಲ್ ತರಾ ಇತ್ತು. ರೇಣುಕನ ಪರದಾಟ ಮಂಗಾಟಗಳನ್ನೆಲ್ಲ ನೋಡಿ ಜನ ಬಿದ್ದು ಬಿದ್ದು ನಕ್ಕಿದ್ದರು.



ಅದೇ ರೇಣುಕಾ ಮತ್ತೆ ಈ ಬಾರಿ ಹೊನ್ನಾಳಿಯಿಂದ ಎಲೆಕ್ಷನ್‌ಗೆ ನಿಂತಿದ್ದಾನೆ. ಬಿಜೆಪಿ ನಾಯಕರುಗಳಿಗೆ ಸೆಕ್ಸ್ ಹಗರಣಗಳು ಹೊಸದೇನಲ್ಲ, ಆದ್ದರಿಂದ ರೇಣುಕನಿಗೆ ಬಿಜೆಪಿ ಟಿಕೆಟ್ಟೂ ಕೊಟ್ಟಿದ್ದಾರೆ. ಕಾಂಗ್ರೆಸ್‌ನ ಶಾಂತನಗೌಡ ಇಲ್ಲಿ ರೇಣುಕನ ಪ್ರತಿಸ್ಪರ್ಧಿ.

ಚುನಾವಣಾ ಪ್ರಚಾರದ ವೇಳೆ ಏನಾಯಿತೆಂದರೆ ಈ ನರ್ಸ್ ರೇಣುಕಾ ಮನೆಮನೆಗೂ ಹೋಗಿ ಓಟು ಕೇಳುತ್ತಿದ್ದನಂತೆ.

ಇತ್ತ ಅವನ ವಿರೋಧಿಗಳು ಹಿಂಬಾಲಿಸಿಕೊಂಡು ಹೋಗುತ್ತಾ ರೇಣುಕಾ ಹೋಗಿ ಬಂದ ಮನೆಗಳಿಗೇ ಹೋಗಿ ಒಂದೊಂದು ಫೋಟೊ ಕೊಟ್ಟು ಹೋಗುತ್ತಿದ್ದರಂತೆ.


ಆ ಫೋಟೊದಲ್ಲಿ... ರೇಣುಕನ ಹುಬ್ಬಲ್ಲುಗಳು ನರ್ಸ್ ಜಯಲಕ್ಷ್ಮಿಗೆ ಕಿಸ್ ಕೊಡುತ್ತಿದ್ದ ಸೀನ್‌ಗಳಿರುತ್ತಿದ್ದವು. ಜನ ಈ ಫೋಟೊ ನೋಡಿದ ಕೂಡಲೇ ಉರುಳಾಡಿಕೊಂಡು ನಗುತ್ತಿದ್ದರಂತೆ. ತನ್ನ ವಿರೋಧಿಗಳು ಕೊಡುತ್ತಿದ್ದ ಕಾಟ ಸಹಿಸಲಾಗದೆ ರೇಣುಕ ಚುನಾವಣಾಧಿಕಾರಿಗೆ ದೂರು ಕೊಟ್ಟು ಈ ನರ್ಸ್ ಪದ ಬಳಸಿ ಅಪಪ್ರಚಾರ ಮಾಡೋದನ್ನ ನಿಲ್ಲಿಸುವಂತೆ ಕೇಳಿದ. ಅದು ಕೂಡಲೇ ಟಿವಿ ಚಾನಲ್ಲುಗಳಲ್ಲೂ ಬಂತು.

'ನರ್ಸ್ ರೇಣುಕಾ ದೂರು'

'ನರ್ಸ್ ರೇಣುಕಾ ಆಕ್ರೋಶ'

ಹೀಗೆ.. ಈ ರೇಣುಕ ಯಾವುದನ್ನು ನಿಲ್ಲಿಸಬೇಕೆಂದು ಶತಪ್ರಯತ್ನ ಮಾಡಿದನೋ ಅದೇ ನರ್ಸ್ ಪದ ಆತನ ಹೆಸರಿನೊಂದಿಗೆ ಸೇರಿಕೊಂಡು ಬೇರೆ ಬೇರೆ ರೀತಿ ಮತ್ತೆ ಚಲಾವಣೆಗೆ ಬರುತ್ತಲೇ ಹೋಯಿತು.

ಬಹುಶ ರೇಣುಕಾ ಬದುಕಿರುವರೆಗೂ ಈ ನರ್ಸ್ ಪದ ಅವನನ್ನು ಬಿಟ್ಟು ಹೋಗಲಾಗದು.



ಪ್ರಮೀಳಮ್ಮನ ಬಾರ್ಡರು

ಇದು ಸೀರೆ ಬಾರ್ಡರ್ ವಿಚಾರ ಅಲ್ಲ, ಬಿಜೆಪಿ ಅಧಿನಾಯಕಿ ಪ್ರಮೀಳಾ ನೇಸರ್ಗಿಯ ಇಂಗ್ಲಿಷ್ ಜ್ಞಾನದ್ದು. ಮೊನ್ನೆ ಟಿವಿ ಚರ್ಚೆ ಒಂದರಲ್ಲಿ ಕೂತಿದ್ದ ಪ್ರಮೀಳಾರಿಗೆ ಇನ್ನೊಬ್ಬ ಚರ್ಚಾಪಟು 'ನಿಮ್ಮದು ಕಮ್ಯೂನಲ್ (Communal) ಪಾರ್ಟಿ' ಅಂದ.

'ಅದಕ್ಕೆ ಪ್ರತಿಯಾಗಿ ನೇಸರ್ಗಿ 'ಹೌದು, ನಾವು ಕಮ್ಯೂನಲ್ಲೆ... ಅಂಗಂದ್ರೆ ಗಡಿ ಅಂತಾ. ನಾವು ದೇಶದ ಗಡಿ, ರಾಜ್ಯದ ಗಡಿ ಕಾಯ್ತೀವ್ರೀೀ.......' ಅಂದು ಬಿಡಬೇಕೆ! ■

ಬೆಳಗಾಂ : ಕಾಂಗ್ರೆಸ್‌ಗೆ ಮುನ್ನಡೆ
ಬಿಜೆಪಿ ಬುಟ್ಟಿಗೆ ಕೈಹಾಕಲಿರುವ ಜೆಡಿಎಸ್!

ಚುನಾವಣೆ 2008


18 ದಿನಗಳ ಕುರುಕ್ಷೇತ್ರದಂತೆ 18 ಕ್ಷೇತ್ರಗಳನ್ನು ಹೊಂದಿರುವ ಬೆಳಗಾವಿ ಜಿಲ್ಲೆಯ ಚುನಾವಣಾ ಅಖಾಡವೀಗ ಅಕ್ಷರಶಃ ಕುರುಕ್ಷೇತ್ರದ ಚಕ್ರವ್ಯೂಹವಾಗಿದೆ. ಈ ಸಲದ ಚುನಾವಣೆಯಲ್ಲಿ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿಯೂ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆಗಳಿವೆ.

ಕಾಂಗ್ರೆಸ್	8-10
ಬಿಜೆಪಿ	8
ಜೆಡಿಎಸ್	3-4
ಕಾಂಗ್ರೆಸ್ ಬಂಡಾಯ	1

ಮಧುಬಾಲಾ


ಹುಕ್ಕೇರಿ


ಶಶಿಕಾಂತ ನಾಯಕ


ಎ.ಬಿ. ಪಾಟೀಲ್

ಹುಕ್ಕೇರಿ ಕ್ಷೇತ್ರ ಮೂರು ಮಾಜಿ ಸಚಿವರುಗಳ ಪ್ರತಿಷ್ಠೆಯ ಕಣವಾಗಿದೆ. ಕಾಂಗ್ರೆಸ್‌ನಿಂದ ಎ.ಬಿ.ಪಾಟೀಲ, ಬಿಜೆಪಿಯಿಂದ ಶಶಿಕಾಂತ ನಾಯಕ್, ಜೆಡಿಎಸ್‌ನಿಂದ ಉಮೇಶ ಕತ್ತಿ ಸ್ಪರ್ಧೆಯಲ್ಲಿದ್ದಾರೆ. ಉಮೇಶ ಕತ್ತಿ ಸಚಿವರಾಗಿದ್ದಾಗ ಜನರತ್ತ ನೋಡಿದ್ದು ಬಟ್ಟರೆ ಈಚೆಗೆ ಸಚಿವರಾಗಿದ್ದ ಶಶಿಕಾಂತ ನಾಯಕ ಅಧಿಕಾರದ ಕುದುರೆ ಏರಿದನಂತರ ತನಗೆ ಮತ ಹಾಕಿದ್ದ ಜನರನ್ನೇ ಮರೆತು ಕುಳಿತಿದ್ದರು. ಎ.ಬಿ. ಪಾಟೀಲ ಈ ಮೊದಲು ಸಂಕೇಶ್ವರ ಕ್ಷೇತ್ರದಿಂದ ಶಾಸಕರಾಗಿದ್ದರು. ಆದರೆ ಇವರ ಕ್ಷೇತ್ರವೇ ಈಗ ಮಾಯವಾಗಿದ್ದು ಇವರು ಹುಕ್ಕೇರಿಗೆ ಬಂದಿದ್ದಾರೆ. ಈ ಕ್ಷೇತ್ರಕ್ಕೆ ಇವರು ಹೊಸಬರು. ಈ ಎಲ್ಲ ಕಾರಣಗಳಿಂದಾಗಿ ಈ ಬಾರಿ ಇಲ್ಲಿನ ಮತದಾರ ಉಮೇಶ ಕತ್ತಿ ಅವರಿಗೆ ಒಲಿಯ ಬಹುದು ಎಂದು ಅಂದಾಜಿದೆ.


ಚಿಕ್ಕೋಡಿ


ಹುಕ್ಕೇರಿ



ಜಿಗಜಿಣಗಿ

ನಾಯಕತ್ವದಲ್ಲಿ ತನ್ನದೇ ಆದ ವರ್ಚಸ್ಸು ಹೊಂದಿರುವ ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ ತಮ್ಮ ಸ್ವಂತ ಕ್ಷೇತ್ರವಾದ ಸದಲಗಾವನ್ನು ಕಳೆದುಕೊಂಡು ಚಿಕ್ಕೋಡಿಗೆ ಬಂದರೂ ಸಹ ಗೆಲುವು ಖಚಿತವೆನ್ನಲಾಗುತ್ತಿದೆ. ಯಾಕೆಂದರೆ ಅವರ ಮೊದಲಿನ ಕ್ಷೇತ್ರ ಸದಲಗಾವ ಮತಗಳೆಲ್ಲ ಈ ಕ್ಷೇತ್ರದಲ್ಲಿ ವಿಲೀನಗೊಂಡಿವೆ. ಬಿಜೆಪಿಯ ಹಾಲಿ ಸಂಸದ ರಮೇಶ ಜಿಗಜಿಣಗಿ ಇಲ್ಲಿ ಹುಕ್ಕೇರಿ ಅವರಿಗೆ ತೀವ್ರ ಸ್ಪರ್ಧೆ ಒಡ್ಡಬಹುದಾಗಿದ್ದರೂ ಜಿಗಜಿಣಗಿ ಸಂಸದರಾಗಿ ಮಾಡಿದ್ದು ಅಷ್ಟೇ ಇದೆ. ಇನ್ನು ಜೆಡಿಎಸ್‌ನ ಕಿರಣ ಕೋರೆ ಮತದಾರನ ಮನಸು ಸೆಳೆಯುವಲ್ಲಿ ವಿಫಲರಾಗಿದ್ದಾರೆ.


ಬೆಳಗಾವಿ ದಕ್ಷಿಣ


ಸಾಂಬಾಜಿ ಪಾಟೀಲ

ಈ ಕ್ಷೇತ್ರದಿಂದ ಮಾಜಿ ಶಾಸಕ ಅಭಯ ಪಾಟೀಲ ತಾನು ಗೆದ್ದೇ ಗೆಲ್ಲುತ್ತೇನೆ ಎಂಬ ಅಹಂನಿಂದ ರಾತ್ರಿ ಕಂಡ ಬಾವಿಗೆ ಹಗಲು ಹೊತ್ತಿನಲ್ಲಿ ಮುಳುಗುತ್ತಿದ್ದಾರೆ. ಮಹಾನಗರ ಪಾಲಿಕೆಯಲ್ಲಿ ಎಂಇಎಸ್ ಹಣೆದು ಕನ್ನಡತಿ ಮೇಯರ್ ಆಗಲು ಶ್ರಮಿಸಿ ಕಿಂಗ್ ಮೇಕರ್ ಪಟ್ಟವೇರಿರುವ ಕಾಂಗ್ರೆಸ್‌ನ ಮಾಜಿ ಮೇಯರ್ ಸಂಭಾಜಿ ಪಾಟೀಲ ಇಲ್ಲಿ ಅಭಯ ಪಾಟೀಲಗೆ ನೇರ ಪ್ರತಿಸ್ಪರ್ಧಿ. ಅಲ್ಲದೇ ಪಕ್ಷೇತರವಾಗಿ ಜೈನ ಸಮುದಾಯದ ರಾಜನ ಹುಲಬತ್ತಿ ಕಣದಲ್ಲಿದ್ದು, ಜೈನ ಮತಗಳನ್ನು ನಂಬಿ ಕುಳಿತಿರುವ ಅದೇ ಜೈನ ಸಮುದಾಯದ ಅಭಯ ಪಾಟೀಲ ಮಣ್ಣು ಮುಕ್ಕುವುದು ನಿಶ್ಚಲ. ಉಳಿದಂತೆ ಜೆಡಿಎಸ್‌ನಿಂದ ಪ್ರಮೋದ ಪಾಟೀಲ, ಎಂಇಎಸ್‌ನ ನಗರಸೇವಕ ಕಿರಣ ಸಾಯಿನಾಯಕ ಕಣದಲ್ಲಿದ್ದರೂ ಅವರಿಬ್ಬರು ಪ್ರಬಲ ಸ್ಪರ್ಧೆ ಒಡ್ಡಲಾರರು. ಅಲ್ಲದೇ ವಡಗಾವಿಯ ವಡ್ಡರಭಾವಣೆಯ ಮತಗಳು ಈ ಕ್ಷೇತ್ರದಲ್ಲಿ ನಿರ್ಣಾಯಕವಾಗಿದ್ದು ಈ ಭಾವಣೆಯ ಜನರು ಸಂಭಾಜಿಗೆ ನಿಷ್ಠೆವುಳ್ಳವರಾಗಿದ್ದರಿಂದ ಸಂಭಾಜಿ ಗೆಲವು ಖಚಿತ.


ಅಭಯ ಪಾಟೀಲ


ಬೆಳಗಾವಿ ಉತ್ತರ


ರಮೇಶ್ ... ಚಿ

ಈ ಕ್ಷೇತ್ರದಲ್ಲಿ ಮುಸ್ಲಿಂ ಹಾಗೂ ಲಿಂಗಾಯತ ಮತಗಳು ನಿರ್ಣಾಯಕವಾಗಲಿವೆ. ಇಲ್ಲಿ ಫಿರೋಜ ಶೇಠನಂತಹ ಕೋಟ್ಯಾಧಿಪತಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರಾದರೂ ಅವರು ಗೆಲ್ಲುವುದು ಕಷ್ಟ. ಯಾಕೆಂದರೆ ಕ್ಷೇತ್ರದಲ್ಲಿ ಹೆಚ್ಚಿರುವ ಮುಸ್ಲಿಂ ಮತಗಳನ್ನು ಮಾಜಿ ಶಾಸಕ ಜೆಡಿಎಸ್‌ನ ರಮೇಶ ಕುಡಚಿ ಒಡೆಯಲಿದ್ದಾರೆ. ಉಳಿದಂತೆ ಮರಾಠಿ ಮತಗಳು ಸಹ ಎಂಇಎಸ್‌ನ ಮಾಜಿ ಮಹಾಪೌರ ವಿಜಯ ಮೋರೆ, ಎಂಇಎಸ್ ಇನ್ನೊಂದು ಬಣದ ರಮೇಶ ಪಾವಲೆ ಹಾಗೂ ರಾಷ್ಟ್ರೀಯ ಹಿಂದೂಸ್ತಾನ ಸೇನಾದ ವಿಲಾಸ ಚವಾರೆ ಅವರುಗಳ ಮಧ್ಯೆ ಹಂಚಿಹೋಗಲಿವೆ. ಇಷ್ಟೆಲ್ಲಾ ಆದ ಬಳಿಕ ಇಲ್ಲಿ ನಿರ್ಣಾಯಕವಾಗಿರುವುದು ಲಿಂಗಾಯತ ಮತಗಳು. ಅವೆಲ್ಲಾ ಲಿಂಗಾಯತರೇ ಆದ ಬಿಜೆಪಿ ಶಂಕರಗೌಡ ಪಾಟೀಲರ ಪಾಲಾಗಿ ಅವರಿಗೆ ಜಯ ತಂದು ಕೊಡುವ ಅಪಾಯವಿದೆ.


ಶಂಕರಗೌಡ

ಬೆಳಗಾವಿ ಗ್ರಾಮೀಣ


ಸಂಜಯ ಪಾಟೀಲ

ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಸಂಜಯ ಪಾಟೀಲ, ಜೆಡಿಎಸ್‌ನಿಂದ ರುಕ್ಮಿಣಿ ಗಂಗನಗೌಡ, ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎಸ್.ಸಿ.ಮಾಳಗಿ, ಎಂಇಎಸ್‌ನಿಂದ ಮಾಜಿ ಶಾಸಕ ಮನೋಹರ ಕಿಣೇಕರ ಸ್ಪರ್ಧೆಯಲಿದ್ದು ವಿಜಯಲಕ್ಷ್ಮಿ ಎಸ್.ಸಿ. ಮಾಳಗಿಗೆ ಒಲಿಯುವ ಲಕ್ಷಣಗಳಿವೆ. ಕಾರಣ ಬಿಜೆಪಿಯ ಸಂಜಯ ಪಾಟೀಲಗೆ ನಾಯಕತ್ವದ ಗುಣವಿಲ್ಲ, ಜೆಡಿಎಸ್‌ನ ರುಕ್ಮಿಣಿ ಗಂಗನಗೌಡ ತಮ್ಮ ಪರಿಚಯ ಮಾಡಿಕೊಳ್ಳುವುದರಲ್ಲಿಯೇ ಚುನಾವಣೆ ಮುಗಿದಿರುತ್ತೆ. ಹಾಗಾಗಿ ಅವರು ಮತದಾರರನ್ನು ಸೆಳೆಯುವುದು ದೂರದ ಮಾತು. ಎಂಇಎಸ್‌ನಿಂದ ಮಾಜಿ ಶಾಸಕ ಮನೋಹರ ಕಿಣೇಕರ ಸ್ಪರ್ಧೆಯಲ್ಲಿದ್ದರೂ ಎಂಇಎಸ್‌ನ ಇನ್ನೊಂದು ಬಣದ ಮಾಜಿ ಮೇಯರ್ ಶಿವಾಜಿ ಸುಂಠಕರ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಮರಾಠಿ ಮತಗಳು ಹಂಚಿಹೋಗಲಿವೆ. ಅಲ್ಲದೇ ಎರಡು ಬಾರಿ ಶಾಸಕನಾಗಿರುವ ಎಸ್.ಸಿ. ಮಾಳಗಿ ಇಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು ಅವೆಲ್ಲಾ ಈಗ ಇವರ ಕೈ ಹಿಡಿಯಲಿವೆ.

ಗೋಕಾಕ





ಈ ಕ್ಷೇತ್ರದಲ್ಲಿ ಅಕ್ಷರಶಃ ತ್ರಿಕೋನ ಸ್ಪರ್ಧೆ ಇದೆ. ಕಾಂಗ್ರೆಸ್‌ನಿಂದ ಮಾಜಿ ಶಾಸಕ ರಮೇಶ ಜಾರಕಿಹೊಳಿ ಕಣದಲ್ಲಿದ್ದರೆ ಇವರ ವಿರುದ್ಧ ಬಿಜೆಪಿಯಿಂದ ಡಾ. ಭೀಮಶಿ ಜಾರಕಿಹೊಳಿ ಸ್ಪರ್ಧೆಯಲ್ಲಿದ್ದಾರೆ. ಇಲ್ಲಿ ಸಹೋದರರ ಮಧ್ಯೆ ಲಿಂಗಾಯತ ಸಮುದಾಯದ ಅಶೋಕ ಪೂಜಾರಿ ಜೆಡಿಎಸ್‌ನಿಂದ ಬಂದು ತೂರಿಕೊಂಡಿದ್ದಾರೆ. ಲಿಂಗಾಯತ ಮತಗಳು ಇಲ್ಲಿ ಹೆಚ್ಚಾಗಿರುವುದರಿಂದ ಇದೆಲ್ಲದರ ಮಧ್ಯೆ ರಮೇಶ ಜಾರಕಿಹೊಳಿ ಬಹುಮತ ಪಡೆದರೆ ಅದು ಪವಾಡವೇ ಸರಿ.


ಅರಭಾವಿ





ಈ ಕ್ಷೇತ್ರದಲ್ಲಿ ಮಾಜಿ ಮಂತ್ರಿ ಕಾಂಗ್ರೆಸ್‌ನ ವಿ.ಎಸ್.ಕೌಜಲಗಿ ಗೆಲ್ಲುವ ನಿರೀಕ್ಷೆಯಲ್ಲಿದ್ದಾರಾದರೂ ಅದಕ್ಕೆ ಇನ್ನೋರ್ವ ಮಾಜಿ ಸಚಿವ ಜೆಡಿಎಸ್‌ನ ಬಾಲಚಂದ್ರ ಜಾರಕಿಹೊಳಿ ಪ್ರಬಲವಾಗಿ ಅಡ್ಡಗಾಲು ಹಾಕುತ್ತಿರುವುದು ಸತ್ಯ. ಏಕೆಂದರೆ ಆರು ಸಾರಿ ಶಾಸಕನಾಗಿ ಕೌಜಲಗಿ ಮಾಡದ ಕೆಲಸಗಳನ್ನು ಬಾಲಚಂದ್ರ ಜಾರಕಿಹೊಳಿ ಒಂದೇ ಅವಧಿಯಲ್ಲಿ ಮಾಡಿ ಮುಗಿಸಿರುವುದರಿಂದ ಬಾಲಚಂದ್ರ ಇಲ್ಲಿನ ಮತದಾರರಲ್ಲಿ ಅಚ್ಚೊತ್ತಿದ್ದಾನೆ. ಈ ಎರಡು ಮದಗಜಗಳ ಲಡಾಯಿಯ ಮಧ್ಯೆ ಬಿಜೆಪಿಯ ವಿವೇಕರಾವ ಪಾಟೀಲ ಅಪ್ಪಚ್ಚಿಯಾಗಲಿದ್ದಾನೆ.

ಯಮಕನಕರಡಿ


ಮುತ್ತಣ್ಣವರ


ಸತೀಶ ...

ಜಾರಕಿಹೊಳಿ ಕುಟುಂಬದ ಕಿಂಗ್‌ಮೇಕರ್ ಎಂದೇ ಹೇಳಲಾಗುವ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಮೀಸಲು ಕ್ಷೇತ್ರವಾಗಿರುವ ಯಮಕನ ಮರಡಿಯಲ್ಲಿ ಕಣಕ್ಕಿಳಿದಿದ್ದಾರೆ. ಈ ಕುಟುಂಬದಲ್ಲಿ ರಾಜಕೀಯ ಲೆಕ್ಕಾಚಾರಗಳ ಬ್ರಹ್ಮ ಎಂದು ಹೇಳಲಾಗುವ ಸತೀಶ ಗೆಲುವಿನ ಭವಿಷ್ಯ ಇಟ್ಟುಕೊಂಡೇ ಯಮಕನಮರಡಿಗೆ ಇಳಿದಿದ್ದಾರೆ. ಏಕೆಂದರೆ ಬಿಜೆಪಿಯಿಂದ ಮಾಜಿ ಶಾಸಕ ಎಂ.ಎಲ್ ಮುತ್ತೆಣ್ಣವರ ಹಾಗೂ ಜೆಡಿಎಸ್‌ನಿಂದ ಬಾಳಗೌಡ ಪಾಟೀಲ ಕಣದಲ್ಲಿದ್ದರೂ ಸಹ ಹಣ ನಾಯಕತ್ವದಲ್ಲಿ ಮೇಲ್ಪಂಕ್ತಿಯಲ್ಲಿರುವ ಸತೀಶ ಅವರ ಪರ ಜನ ಒಲವು ಜಾಸ್ತಿ ಇದೆ.


ಖಾನಾಪುರ


ರಫೀಕ ಖಾನಾಪುರ್


ನಾಸೀರ

ಇಲ್ಲಂತೂ ಸ್ಪರ್ಧಾ ಕಣದಲ್ಲಿ ದೊಡ್ಡ ಹಿಂಡೇ ಇದೆ. ಒಟ್ಟು ಇಲ್ಲಿ 23 ಜನ ಅಭ್ಯರ್ಥಿಗಳಿದ್ದಾರೆ. ಕಾಂಗ್ರೆಸ್‌ನ ಕೆಪಿಸಿಸಿ ಸದಸ್ಯ ರಫೀಕ ಖಾನಾಪುರ್ ಗೆಲ್ಲಬಹುದು ಎನ್ನಲಾಗುತ್ತಿದ್ದು, ಜೆಡಿಎಸ್‌ನ ನಾಸೀರ ಬಾಗವಾನ ಮುಸ್ಲಿಂ ಮತಗಳನ್ನು ಒಡೆಯುವ ಸಾಧ್ಯತೆಯಿದೆ. ಪಟ್ಟಣ ಪಂಚಾಯ್ತಿ ಅಧ್ಯಕ್ಷನಾಗಿ ರಫೀಕ ಮಾಡಿರುವ ಕೆಲಸಗಳು ಇಲ್ಲಿ ಅವರ ಕೈ ಹಿಡಿಯಲಿವೆ. ಉಳಿದಂತೆ ಬಿಜೆಪಿಯಿಂದ ಪ್ರಲ್ಹಾದ ರೇಮಾಣಗಂತೂ ಬಿಜೆಪಿ ವಲಯದಲ್ಲಿಯೇ ವಿರೋಧವಿದೆ. ಎಂಇಎಸ್ ಅಂತೂ ಒಡೆದ ಮನೆಯಾಗಿದೆ.

ರಾಮದುರ್ಗ



ಇಲ್ಲಿ ಕಾಂಗ್ರೆಸ್‌ನಿಂದ ಅಶೋಕ ಪಟ್ಟಣ, ಜೆಡಿಎಸ್‌ನಿಂದ ಬಸವರಾಜ ಹಿರೇರೆಡ್ಡಿ, ಬಿಜೆಪಿಯಿಂದ ಹಾಲಿ ಶಾಸಕ ಮಹಾದೇವಪ್ಪ ಯಾದವಾಡ ಸ್ಪರ್ಧಿಸಿದ್ದಾರೆ. ಇಲ್ಲಿ ಮತ್ತೆ ಯಾದವಾಡ ಆರಿಸಿ ಬರಬಹುದು.

ಸವದತ್ತಿ



ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸುಭಾಷ ಕೌಜಲಗಿ, ಬಿಜೆಪಿಯಿಂದ ವಿಶ್ವನಾಥ ಮಾಮನಿ, ಜೆಡಿಎಸ್‌ನಿಂದ ಪಂಚನಗೌಡ ದ್ಯಾಮನಗೌಡ ಸ್ಪರ್ಧಿಸಿದ್ದಾರೆ. ವಿಶ್ವನಾಥ ಮಾಮನಿ ಅವರ ಮನೆತನದ ಹಿನ್ನಲೆ ಹಾಗೂ ವಿಶ್ವನಾಥರ ಜನಪರ ನಾಯಕತ್ವ ಇಲ್ಲಿ ಅವರಿಗೆ ವಿಜಯ ದೊರಕಿಸಿ ಕೊಡಲಿದೆ.

ಕುಡಚಿ


ಸರಿಕರ

ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಮಹೇಶ ತಮ್ಮಣ್ಣವರ, ಕಾಂಗ್ರೆಸ್‌ನಿಂದ ಮಾಜಿ ಶಾಸಕ ಶ್ಯಾಮ ಘಾಟಗೆ ಸ್ಪರ್ಧಿಸಿದ್ದಾರೆ. ಮತ್ತೆ ಇಲ್ಲಿ ಜೆಡಿಎಸ್ ಮಾಜಿ ಶಾಸಕ ಬಿ.ಸಿ.ಸರಿಕರ ಗೆಲುವು ಶತಸಿದ್ಧ.

ಬೈಲಹೊಂಗಲ



ಇಲ್ಲಿ ಕಾಂಗ್ರೆಸ್‌ನಿಂದ ಮಾಜಿ ಶಾಸಕ ಮಹಾಂತೇಶ ಕೌಜಲಗಿ, ಜೆಡಿಎಸ್‌ನಿಂದ ಚಂದ್ರಶೇಖರ ಸಾಧುನವರ ಹಾಗೂ ಬಿಜೆಪಿಯಿಂದ ಹಾಲಿ ಶಾಸಕ ಜಗದೀಶ ಮೆಟಗುಡ್ ಸ್ಪರ್ಧಿಸಿದ್ದಾರೆ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ನೇರ ಸ್ಪರ್ಧೆ ನಡೆದು ಮೆಟಗುಡ್ ಸೋಲುನ್ನುವ ಸಾಧ್ಯತೆಗಳು ಹೆಚ್ಚಿವೆ.

ಕಿತ್ತೂರು


ಇನಾಂದಾರ್

ಈ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ವೀರನಗೌಡ ಪಾಟೀಲ, ಕಾಂಗ್ರೆಸ್‌ನಿಂದ ಮಾಜಿ ಮಂತ್ರಿ ಡಿ.ಬಿ.ಇನಾಮದಾರ, ಬಿಜೆಪಿಯಿಂದ ಹಾಲಿ ಶಾಸಕ ಸುರೇಶ ಮಾರಿಹಾಳ ಸ್ಪರ್ಧೆಯಲ್ಲಿದ್ದಾರೆ. ಒಂದು ಬಾರಿ ಶಾಸಕರಾಗಿದ್ದರೂ ಸಹ ಸುರೇಶ ಮಾರಿಹಾಳ ಜನರೊಂದಿಗಿದ್ದುದು ಬಹಳ ಕಡಿಮೆ. ಭೂಧನಿಯೂ ಆಗಿರುವ ಇನಾಮದಾರ ತನ್ನ ಸ್ವಕ್ಷೇತ್ರಕ್ಕಿಂತ ಜಾಸ್ತಿಯಾಗಿ ವಿದೇಶಗಳಲ್ಲಿ ಸುತ್ತಾಡಿದ್ದೇ ಹೆಚ್ಚು. ಇವರೆಲ್ಲರ ಮಧ್ಯೆ ಕಾಂಗ್ರೇಸ್‌ನ ಬಂಡಾಯ ಅಭ್ಯರ್ಥಿ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಎಸ್.ಎಫ್. ದೊಡ್ಡಗೌಡರ ಆರಿಸಿ ಬರಬಹುದು. ಏಕೆಂದರೆ ಮೂಲತಃ ಇವರು ನೇಸರಗಿ ಗ್ರಾಮದವರು. ಈ ಹೋಬಳಿಯ ಹಳ್ಳಿಗಳೀಗ ಕಿತ್ತೂರಿಗೆ ಸೇರಿದ್ದು ಅವೆಲ್ಲಾ ದೊಡ್ಡಗೌಡರ ವೋಟ್ ಬ್ಯಾಂಕ್ ಆಗಿ ಪರಿವರ್ತನೆಗೊಳ್ಳಲಿವೆ.

ಅಥಣಿ


ಲಕ್ಷ್ಮಣ ಸವದಿ

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಕಿರಣಕುಮಾರ ಪಾಟೀಲ, ಜೆಡಿಎಸ್‌ನಿಂದ ಸದಾಶಿವ ಬುಟಾಳಿ ಸ್ಪರ್ಧೆಯಲ್ಲಿದ್ದರೂ ಸಹ ಇವರನ್ನೆಲ್ಲಾ ಮಣಿಸಿ ಬಿಜೆಪಿಯಿಂದ ಲಕ್ಷ್ಮಣ ಸವದಿ ಮತ್ತೆ ಅಧಿಕಾರದ ಗಾದಿ ಏರುವ ನಿರೀಕ್ಷೆಯಿದೆ.

ಕಾಗವಾಡ


ಕಾಗೆ

ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಹಾಲಿ ಶಾಸಕ ರಾಜು ಕಾಗೆ, ಜೆಡಿಎಸ್‌ನಿಂದ ಶ್ರೀಮಂತ ಪಾಟೀಲ, ಕಾಂಗ್ರೆಸ್‌ನಿಂದ ದಿಗ್ವಿಜಯ ಪವಾರ ಸ್ಪರ್ಧಿಸಿದ್ದಾರೆ. ಎದುರಾಳಿಗಳು ಪ್ರಬಲರಲ್ಲದ ಕಾರಣ ಇಲ್ಲಿ ರಾಜು ಕಾಗೆ ಮತ್ತೆ ವಿಧಾನಸಭೆ ಪ್ರವೇಶಿಸುವ ಲಕ್ಷಣಗಳಿವೆ.

ನಿಪ್ಪಾಣಿ



ಇಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕ ಕಾಕಾಸಾಹೇಬ ಪಾಟೀಲ ಮತ್ತು ಜೆಡಿಎಸ್‌ನ ಸುಭಾಷ ಜೋಶಿ ಮಧ್ಯೆ ನೇರ ಸ್ಪರ್ಧೆ ಏರ್ಪಡಲಿದೆ. ಇವರಿಬ್ಬರ ಹಣಾಹಣಿ ಮಧ್ಯೆ ಬಿಜೆಪಿಯ ಶಶಿಕಲಾ ಜೊಲ್ಲೆಗೆ ಒದ್ದಾಡಬೇಕಿದೆ. ಆದರೆ ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ಮಾಯವಾಗುತ್ತಿದ್ದ ಕ್ಷೇತ್ರವನ್ನು ಉಳಿಸಿಕೊಳ್ಳಲು ಆಯೋಗದ ಅಧ್ಯಕ್ಷರ ಮುಂದೆ ಕಣ್ಣೀರನ್ನೂ ಸಹ ಹಾಕಿದವರು ಈ ಕಾಕಾಸಾಹೇಬ ಪಾಟೀಲ. ಹಾಗಾಗಿ ಜನರ ಒಲವು ಇವರತ್ತ ಇದ್ದು ಮತ್ತೆ ವಿಧಾನಸಭೆ ಪ್ರವೇಶಿಸುವ ಲಕ್ಷಣಗಳಿವೆ.

ರಾಯಭಾಗ


ಐಹೊಳೆ


ಇಲ್ಲಿ ಕಾಂಗ್ರೇಸ್‌ನ ಓಂ ಪ್ರಕಾಶ್ ಕಣಗಲಿ ಹಾಗೂ ಬಿಜೆಪಿಯ ಡಿ.ಎಂ. ಐಹೊಳೆ ಮಧ್ಯೆ ತೀವ್ರ ಸ್ಪರ್ಧೆ ಏರ್ಪಡುವ ಸಾಧ್ಯತೆಯಿದೆ. ಜೆಡಿಎಸ್‌ನ ಬಾಳಾಸಾಹೇಬ ವಡ್ಡರ ಕೂಡ ಸ್ಪರ್ಧೆಯಲ್ಲಿದ್ದಾರಾದರೂ ಗೆಲ್ಲುವುದು ಸಾಧ್ಯವಿಲ್ಲ. ಇಲ್ಲಿನ ಪ್ರಬಲ ನಾಯಕ ವಿ.ಎಲ್. ಪಾಟೀಲ ಐಹೊಳೆಯ ಬೆನ್ನಹಿಂದೆ ಇರುವುದರಿಂದ ಇಲ್ಲಿನ ಅಖಾಡದಲ್ಲಿ ನೇರ ಹಣಾ-ಹಣಿ ಏರ್ಪಡಲಿದೆ. ಒಟ್ಟಿನಲ್ಲಿ ಬೆಳಗಾವಿ ಎಂಬ ಕುರುಕ್ಷೇತ್ರದ ಚಕ್ರವ್ಯೂಹದಲ್ಲಿ ಇದೇ ಪಕ್ಷ ಬಹುಮತ ಪಡೆಯಲಿದೆ ಎಂದು ಹೇಳುವುದು ತುಂಬಾ ಕಠಿಣವಾದರೂ ಕಳೆದ ಬಾರಿ 8 ಕ್ಷೇತ್ರಗಳಲ್ಲಿ ಗೆಲುವು ಕಂಡಿದ್ದ ಬಿಜೆಪಿ ಈಗ ಅವನ್ನೇ ಉಳಿಸಿಕೊಳ್ಳಲು ಹೆಣಗಾಡಬೇಕಿದೆ. ಇನ್ನು ಕೇವಲ ಒಂದು ಕ್ಷೇತ್ರದಲ್ಲಿ ಮಾತ್ರವಿದ್ದ ಜೆಡಿಎಸ್ 4 ಸ್ಥಾನಗಳನ್ನು ಹಾಗೂ ಕಾಂಗ್ರೆಸ್ 8 ರಿಂದ 10 ಸ್ಥಾನಗಳನ್ನು ಪಡೆಯುವ ನಿರೀಕ್ಷೆಯಿದೆ.

■

ಮುಖ್ಯವಾಹಿನಿಯಿಂದ ಮುಖ ತಿರುಗಿಸಿದ್ದ ಅವ್ವ!

ಸಮಾಜದ ಮುಖ್ಯ ವಾಹಿನಿಯತ್ತ ಹೆಜ್ಜೆ ಇಟ್ಟಿದ್ದ ಹಳೆ ನಗರ ಪಾಲಿಕೆ ಸದಸ್ಯ ಕಮ್ ರೌಡಿ ಅವ್ವ ಮಾದೇಶ್ ಮತ್ತೆ ಲಾಂಗ್ ಝಳಪಿಸಿ ಆತಂಕ ಸೃಷ್ಟಿಸಿದ್ದಾನೆ. ತನ್ನನ್ನು ಮುಗಿಸಲು ಸ್ಕೆಚ್ ಹಾಕಿದ್ದ ಭೂ ಮಾಫಿಯಾ ಗ್ಯಾಂಗಿಗೆ ತಾನೇ ಮೃತ್ಯು ರೂಪಿಯಾಗಿ ಸೇಡು ತೀರಿಸಿಕೊಳ್ಳುವ ಮೂಲಕ ತನ್ನ ಹಳೇ ವೃತ್ತಿ ಮರೆತಿಲ್ಲ ಎಂಬ ಎಚ್ಚರಿಕೆಯ ಸಂದೇಶವನ್ನು ಭೂಗತ ಜಗತ್ತಿಗೆ ರವಾನಿಸಿದ್ದಾನೆ. ಒಂದು ಕಾಲಕ್ಕೆ ಮೈಸೂರಿನ ಭೂಗತ ಜಗತ್ತಿನಲ್ಲಿ ತನ್ನದೇ ಕುಖ್ಯಾತಿಯನ್ನು ಛಾಪಿಸಿದ್ದ ಎಸ್. ಮಹದೇಶ್ ಆಪ್ತ ವಲಯದಲ್ಲಿ ಅವ್ವ ಮಾದೇಶ್ ಎಂತಲೇ ಪರಿಚಿತ. ನಗರದಲ್ಲಿ ನಡೆಯುವ ರೌಡಿ ಕೃತ್ಯಗಳಿಗೆ ಈತನ ಹೆಸರು ಧಾರಾಳವಾಗಿ ಬಳಕೆಯಾಗುತ್ತಿತ್ತು, ಮಂಡ್ಯ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಕೃತ್ಯಗಳಲ್ಲೂ ಈತನ ಹೆಸರು ತಳುಕುಹಾಕಿಕೊಂಡಿದೆ. ಅಪರಾಧ ಕೃತ್ಯ ನಡೆಸಿ ಹೊರಗಿನಿಂದ ಬಂದು ತಲೆ ಮರೆಸಿಕೊಳ್ಳುವವರಿಗೆ 'ಆಶ್ರಯದಾತ' ಎಂಬ ಆರೋಪವು ಈತನ ಮೇಲಿದೆ. ಈ ಎಲ್ಲ ಆರೋಪಗಳ ನಡುವೆಯೂ ಮುಖ್ಯ ವಾಹಿನಿಯತ್ತ ಹೆಜ್ಜೆ ಇಟ್ಟಿದ್ದ ಮಾದೇಶ್‌ನನ್ನು ಅಂದಿನ ಡಿಸಿಪಿ ಬಾಲಕೃಷ್ಣರವರು ತಿದ್ದಿ ಮತ್ತಷ್ಟು ಸುಧಾರಣೆ ಕಾಣುವಂತೆ ಮಾಡಿದ್ದರು.


ಮಾಜಿ ಸಚಿವ ಜಿ.ಟಿ ದೇವೇಗೌಡರವರನ್ನು ಬೆಂಬಲಿಸಿ ಅವರ ಬಲಗೈ ಭಂಟನಂತೆ ರಾಜಕೀಯಕ್ಕೆ ಇಳಿದ ಮಾದೇಶ್ ನಗರ ಪಾಲಿಕೆ ಇಲಾಖೆಯಲ್ಲಿ ಜಾತ್ಯತೀತ ಜನತಾದಳದಿಂದ ಟಿಕೆಟು ಪಡೆದು ಭಾರಿ ಅಂತರದಿಂದ ಗೆದ್ದು ನಗರಪಾಲಿಕೆ ಪ್ರವೇಶಿಸಿದ್ದ. ನಂತರದ ರಾಜಕೀಯ ವಿದ್ಯಮಾನ ಬದಲಾವಣೆಯಾಗಿ ಜಿ.ಟಿ ದೇವೇಗೌಡ ಬಿಜೆಪಿ ಸೇರಿದಾಗ ಅವರನ್ನು ಅನುಸರಿಸಲು ಮುಂದಾಗಿದ್ದನಾದರೂ ಪಕ್ಷಾಂತರ ನಿಷೇಧ ಕಾಯ್ದೆ ಭಯದಿಂದಾಗಿ ಜೆಡಿಎಸ್‌ನಲ್ಲಿಯೇ ಉಳಿದಿದ್ದ.




ಹಳೆಯ ಚಾಳಿ

ಮಾದೇಶ್ ಪಾಲಿಕೆ ಸದಸ್ಯನಾಗಿದ್ದರೂ ತನ್ನ ರೌಡಿಸಂ ಪ್ರವೃತ್ತಿಯನ್ನು ಬಿಟ್ಟಿರಲಿಲ್ಲ. ಆಯ್ಕೆಯಾದ ಕೆಲ ದಿನದಲ್ಲಿಯೇ ನಗರ ಪಾಲಿಕೆ ಸ್ವಚ್ಛತೆ ವಾಹನ ಚಾಲಕ ರಮೇಶ್ ತನ್ನ ಮಾತಿಗೆ ಮನ್ನಣೆ ನೀಡಲಿಲ್ಲ ಎಂದು ಕಪಾಳಮೋಕ್ಷ ಮಾಡಿ ಆಗತಾನೇ ಪಾಲಿಕೆ ಆಯುಕ್ತರಾಗಿ ಬಂದಿದ್ದ ಪಿ. ಮಣಿವಣ್ಣನ್ ದಕ್ಷತೆಗೆ ಹೆದರಿ ವಾರ ಕಾಲ ತಲೆ ಮರೆಸಿಕೊಂಡಿದ್ದ. ನಂತರ ನಿರೀಕ್ಷಣಾ ಜಾಮೀನು ಪಡೆದು ಪೊಲೀಸ್ ಬಂಧನದಿಂದ ತಪ್ಪಿಸಿಕೊಂಡಿದ್ದ. ಮೇ 10 ರಂದು ನಡೆದ ವಿಧಾನಸಭೆ ಚುನಾವಣೆ ಸಮಯದಲ್ಲಿ ಮುಂಜಾಗ್ರತಾ ಕ್ರಮವಾಗಿ ಬಂಧಿಸಿ ಬಿಡುಗಡೆಯಾದ ರೌಡಿಗಳಲ್ಲಿ ಮಾದೇಶ ಕೂಡ ಒಬ್ಬನಾಗಿದ್ದ.

ಮೈಸೂರಲ್ಲಿ ಮತ್ತೆ ಅವ್ವ ಮಾದೇಶನ ರೌದ್ರಾವತಾರ






ಅವ್ವ ಮಾದೇಶ ಎಂಬ ರೌಡಿ ಮತ್ತೆ ತನ್ನ ರೌದ್ರಾವತಾರವನ್ನು ಮೆರೆದಿದ್ದಾನೆ. ಮೈಸೂರಿನಲ್ಲಿ ತಲೆ ಎತ್ತಿರುವ ಭೂಮಾಫಿಯಾ ಇಬ್ಬರನ್ನು ಬಲಿ ತೆಗೆದುಕೊಂಡಿದೆ. ಹುಣಸೂರು ಹೊರವಲಯದ ತೋಟದ ಮನೆಯೊಂದರಲ್ಲಿ ಮೊನ್ನೆ ಬುಧವಾರ ರಾತ್ರಿ ಇಬ್ಬರನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಮೈಸೂರಿನ ಪಡುವಾರಹಳ್ಳಿ 4ನೇ ಮೇನ್, 2ನೇ ಕ್ರಾಸ್ ನಿವಾಸಿ ಪುರುಷೋತ್ತಮ್ ಅವರ ಮಗ ಪಿ. ರಾಜೇಶ್ ಅಲಿಯಾಸ್ ಗಾಂಧಿ (21) ಹಾಗೂ 8ನೇ ಮೇನ್ ನಿವಾಸಿ ಹೊಂಬಯ್ಯ ಅವರ ಮಗ ರಾಮು (26) ಹತ್ಯೆಗೀಡಾಗಿದ್ದು, ಹಲ್ಲೆಯಿಂದ ಸುನಿಲ್ ಮತ್ತು ದೇವು ತೀವ್ರವಾಗಿ ಗಾಯಗೊಂಡಿದ್ದಾರೆ. ಬುಧವಾರ 11.30 ರ ಸುಮಾರಿಗೆ, ಮೈಸೂರು ನಗರಪಾಲಿಕೆ ಸದಸ್ಯ ಒಂಟಿಕೊಪ್ಪಲಿನ ಮಹದೇಶ (ಅವ್ವ ಮಾದೇಶ್) ಆತನ ಸಹೋದರ ಮಂಜು, ಅಕ್ಕನ ಮಕ್ಕಳಾದ ಅಂಬಿ, ಕೆಕೆ. ಪಾಲಹಳ್ಳಿ ಸತೀಶ್, ಒಂಟಿಕೊಪ್ಪಲಿನ ದಬ್ಬೆ ರವಿ, ಶಿವಕುಮಾರ್ ಅಲಿಯಾಸ್ ಕಾಳ, ಚಂದ್ರು ಸೇರಿಕೊಂಡು ಹುಣಸೂರು ಬಳಿ ತೋಟದ ಮನೆಯಲ್ಲಿದ್ದ ರಾಜೇಶ್, ರಾಮು, ಅಶೋಕ, ಶ್ರೀನಿವಾಸ್, ದೇವು, ಸುನಿಲ್‌ರವರುಗಳ ಮೇಲೆ ಮಚ್ಚು, ಲಾಂಗ್‌ಗಳಿಂದ ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಇದರಿಂದ ರಾಜೇಶ್ ಮತ್ತು ರಾಮು ಸ್ಥಳದಲ್ಲೇ ರಕ್ತದ ಮಡುವಿನಲ್ಲಿ ಕೊನೆಯುಸಿರೆಳೆದರೆ ಸುನಿಲ್ ಮತ್ತು ದೇವು ಅಲಿಯಾಸ್ ದೇವೇಂದ್ರ ಗಾಯಗೊಂಡು ಸರಿರಾತ್ರಿಯಲ್ಲಿ ಆಸ್ಪತ್ರೆ ಸೇರಿದ್ದಾರೆ. ಅಶೋಕ ಮತ್ತು ಶ್ರೀನಿವಾಸ ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ.

ತೋಟದ ವಾಚ್‌ಮೆನ್ ಶಿವಣ್ಣ ಮೇ 12 ರಂದೇ ಧರ್ಮಸ್ಥಳಕ್ಕೆ ತೆರಳಿದ್ದು ಈತನ ಬದಲಿಗೆ ಸಿದ್ದಯ್ಯನ ಮಗ ಕುಮಾರನನ್ನು ಕಾವಲಿಗೆ ಇರಿಸಲಾಗಿತ್ತು. ಈತನಿಗೂ ಕಾಲಿಗೆ ಲಾಂಗ್ ಏಟು ಬಿದ್ದಿದ್ದು ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಅಲ್ಲದೇ ಮತ್ತೊಬ್ಬ ಕಾವಲುಗಾರ ಬೋರಯ್ಯನ ಮಗ ಕಾಳ ನಾಪತ್ತೆಯಾಗಿದ್ದು ಅನುಮಾನಕ್ಕೆ ಆಸ್ಪದ ನೀಡಿದೆ.

ಮಚ್ಚಿಗೆ ಮಚ್ಚು!

ಮಚ್ಚು ಬೀಸಿದವರನ್ನು ಕೊನೆಗೆ ಮಚ್ಚಿನಿಂದಲೇ ಕೊಚ್ಚಿ ಪ್ರತೀಕಾರ ತೀರಿಸಿಕೊಂಡ ದಾರುಣ ಘಟನೆ ಇದು. ಮೈಸೂರಿನ ವಿಜಯನಗರ ಬಡಾವಣೆಯ ನಿವೇಶನ ಒಂದಕ್ಕೆ ಸಂಬಂಧಿಸಿದಂತೆ ಅವ್ವ ಮಾದೇಶ ಹಾಗೂ ಉಮೇಶ್ ನಡುವೆ ಭಿನ್ನಾಭಿಪ್ರಾಯವಿದ್ದು ಈ ಪ್ರಕರಣ ನ್ಯಾಯಾಲಯದಲ್ಲಿ ಇದೆ. ಈ ನಡುವೆ ಅವ್ವ ಮಾದೇಶನ ವಿರುದ್ಧ ರಾಜೇಶ್ ಅಲಿಯಾಸ್ ಗಾಂಧಿಯನ್ನು ಉಮೇಶ ಎತ್ತಿಕಟ್ಟಿದ್ದ.



ರಾಜೇಶ್ ಗಾಂಧಿ

'ಭಾರಿ ಮೊತ್ತದ ನಿವೇಶನ ಖರೀದಿ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಹಾರ ಕೈತಪ್ಪಿದ ಕಾರಣ ಪದೇ ಪದೇ ನಮ್ಮ ವ್ಯವಹಾರದಲ್ಲಿ ಅವ್ವ ಮಾದೇಶ ಕೈ ಹಾಕುತ್ತಿದ್ದಾನೆ, ಇದರಿಂದ ನಮ್ಮ ವ್ಯವಹಾರಕ್ಕೆ ತೊಂದರೆಯಾಗುತ್ತಿದೆ' ಎಂದು ರಾಜೇಶ್ ತಂಡ ಅವ್ವ ಮಾದೇಶನನ್ನೇ ಮುಗಿಸಲು ಸಂಚು ರೂಪಿಸಿತ್ತು, ರಾಜೇಶ್‌ನ ಸಹಚರ ರಾಮು ಕಳೆದ ಒಂದು ತಿಂಗಳ ಹಿಂದೆಯಷ್ಟೆ ಮೈಸೂರಿನ ವಿಜಯಶ್ರೀಪುರದಲ್ಲಿ ಅವ್ವ ಮಾದೇಶನ ಮೇಲೆ ದಾಳಿ ನಡೆಸಿ ಮಚ್ಚು ಬೀಸಿ ಮಾದೇಶ್ ಹತ್ಯೆಗೆ ವಿಫಲ ಪ್ರಯತ್ನ ನಡೆಸಿದ್ದ.

ಅದೃಷ್ಟವಶಾತ್ ತಪ್ಪಿಸಿಕೊಂಡಿದ್ದ ಮಾದೇಶ್ ಅಂದೇ ರಾಮು ಮತ್ತು ರಾಜೇಶ್‌ನನ್ನು ಮುಗಿಸಲು ತೀರ್ಮಾನಿಸಿಬಿಟ್ಟಿದ್ದ. ಈ ಕಾರ್ಯಕ್ಕೆ ಬೆಂಗಳೂರಿನ ಚಕ್ರವರ್ತಿ ಅಲಿಯಾಸ್ ಚಿಕ್ರೇ ಎಂಬ ಡಿಎಂಕೆ ನಟೋರಿಯಸ್ ಡಾನ್‌ಗೆ ಸುಪಾರಿ ನೀಡಿ 11 ಮಂದಿ ರೌಡಿಗಳನ್ನು ಕರೆಸಿ ಮೈಸೂರಿನ ಹೊರವಲಯದ ಮನೆಯಲ್ಲಿ ಇಟ್ಟಿದ್ದ. ರಾಮು ತಂಡದವರೆಲ್ಲ ತಲೆ ಮರೆಸಿಕೊಂಡಿದ್ದರಿಂದ ಅವರಷ್ಟು ಸುಳಿವು ಸಿಗದ ಕಾರಣ ತಕ್ಷಣಕ್ಕೆ ಮಟ್ಯಾಷ್ ಮುಹೂರ್ತ ವಿಳಂಬವಾಗಿತ್ತು.

ಫ್ರೆಶ್ ಸ್ಕೆಚ್

ಅವ್ವ ಮಾದೇಶ್ ತನ್ನನ್ನು ಮುಗಿಸುವ ಸ್ಕೆಚ್ ಹಾಕುತ್ತಿದ್ದುದು ಗಾಂಧಿಗೆ ಗೊತ್ತಿತ್ತು, ಮಾದೇಶ್‌ನ ಅಟ್ಯಾಕ್‌ನಿಂದ ತಪ್ಪಿಸಿಕೊಳ್ಳಲು ಗಾಂಧಿ ತನ್ನ ಸಹಚರರಾದ ಸುನಿಲ್, ಅಶೋಕ್, ರಾಮು, ಶ್ರೀನಿವಾಸ, ದೇವು ಜೊತೆಗೂಡಿಗೆ ಮೇ 12 ರಂದು ಟಾಟಾ ಸುಮೋದಲ್ಲಿ (ಕೆಎ01 ಪಿ 1449) ಸೀದಾ ಹುಣಸೂರಿನ ಕಲ್ಪತರು ಹೋಟೆಲ್ ಮುಂದಿರುವ ಗಣೇಶ್ ಲಾಡ್ಜ್ ಸೇರಿಕೊಂಡುಬಿಟ್ಟಿದ್ದ. ಅವರನ್ನು ಡ್ರೈವರ್ ದಿನೇಶ್ ಹಾಗು ಜಯಲಕ್ಷ್ಮಿಪುರಂನ ಶಿವು ಕರೆತಂದಿದ್ದರು.

ಇದು ಅವ್ವ ಮಾದೇಶ್ ಕಿವಿಗೂ ಬಿದ್ದು ಡ್ರೈವರ್ ದಿನೇಶ್‌ನನ್ನು ಅಟಕಾಯಿಸಿಕೊಂಡು ಬಾಯಿಬಿಡಿಸಿದ್ದಾನೆ. ದಿನೇಶ್ ಜೀವಭಯದಿಂದ ಅವನನ್ನು ಹುಣಸೂರಿಗೂ ಕರೆತಂದು ಅವರಿದ್ದ ಜಾಗವನ್ನು ತೋರಿಸಿಬಿಟ್ಟ. ಆದರೆ, ಅಲ್ಲಿಂದಾಗಲೇ ಗಾಂಧಿ ಕಾಲ್ಕಿತ್ತಿದಾಗಿತ್ತು.

ತೋಟದ ಮನೆಗೆ ಶಿಫ್ಟ್

ಹುಣಸೂರಿನ ಗಣೇಶ್ ಲಾಡ್ಜ್‌ನಲ್ಲಿದ್ದ ರಾಜೇಶ್ ತಂಡ ಮೈಸೂರಿನ ಜಿಮ್ ಕೋಚ್‌ಗಳಾದ ಮಹೇಶ್ ಮತ್ತು ಸ್ಯಾಂಡಿರವರನ್ನು ಸೂಕ್ತ ಸ್ಥಳಕ್ಕಾಗಿ ಕೇಳಿಕೊಂಡಿತ್ತು, ಈ ಕೋಚ್‌ಗಳಿಬ್ಬರೂ ತಮ್ಮ ಸ್ನೇಹಿತ ಹುಣಸೂರಿನ ಶಯನ ಅಲಿಯಾಸ್ ಪೂವಯ್ಯ ಎಂಬುವವರ ತೋಟದಲ್ಲಿ ನೀವು ಸುರಕ್ಷಿತವಾಗಿ ಇರಬಹುದೆಂದು ಹೇಳಿ ರಾಜೇಶ್ ತಂಡವನ್ನು ಹುಣಸೂರಿಗೆ ಕರೆದುಕೊಂಡು ಬಂದಿದ್ದಾರೆ. ಅಲ್ಲಿಂದ ಎಪಿಎಂಸಿ ಹಿಂಭಾಗ ಇರುವ ಶಯನರವರ ತೋಟಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಇರಿಸಿ ಊಟ ತಿಂಡಿ ವ್ಯವಸ್ಥೆ ಮಾಡಿ ಬಂದಿದ್ದಾರೆ. ವಾಸ್ತವದಲ್ಲಿ ಇದೇ ಅವರಿಗೆ ಮೃತ್ಯುಕೂಪವಾಗಿ ಪರಿಣಮಿಸಿತು.



ರಾಮು


ಹುಣಸೂರಿನಿಂದ ಗಾಂಧಿ ತನ್ನ ಡ್ರೈವರ್ ದಿನೇಶನಿಗೆ ಫೋನ್ ಮಾಡಿ 'ಹಣ ಖಾಲಿಯಾಗಿದೆ, ಖರ್ಚಿಗೆ ಹಣಬೇಕು ತೆಗೆದುಕೊಂಡು ಬಾ' ಎಂದು ಹೇಳಿ ತಾವು ಉಳಿದುಕೊಂಡಿದ್ದ ತೋಟದ ಮನೆ ವಿಳಾಸ ತಿಳಿಸಿದ್ದಾನೆ. ಅವರು ತೋಟದ ಮನೆಯಲ್ಲಿದ್ದಾರೆಂಬ ವಿಚಾರ ದಿನೇಶ್‌ಗೆ ಗೊತ್ತಾದ ಮೇಲೆ ಇನ್ನು ಮಾದೇಶ್‌ಗೆ ಗೊತ್ತಾಗುವುದು ಎಷ್ಟು ಹೊತ್ತು?

ಮಾದೇಶ ಮೇ 14 ರ ರಾತ್ರಿ ಸುಮಾರು 11.30 ರ ಸುಮಾರಿಗೆ ತಮ್ಮ ಮಂಜು, ಅಕ್ಕನ ಮಕ್ಕಳಾದ ಅಂಭಿ, ಕೆಕೆ, ಪಾಲಹಳ್ಳಿ ಸತೀಶ್, ಒಂಟಿ ಕೊಪ್ಪಲಿನ ದಬ್ಬೆ ರವಿ, ಪಡುವಾರಹಳ್ಳಿ ಶಿವಕುಮಾರ್ ಅಲಿಯಾಸ್ ಕಾಳ ಸೇರಿಕೊಂಡು ಲಾಂಗ್, ಮಚ್ಚು, ದೊಣ್ಣೆಗಳೊಂದಿಗೆ ತೋಟದ ಮನೆಯಲ್ಲಿ ಅಡಗಿದ್ದವರ ಮೇಲೆ ಅಟ್ಯಾಕ್ ಮಾಡಿದ್ದಾನೆ; ಕಣ್ಣಿಗೆ ಕಾರದ ಪುಡಿ ಎರಚಿ ಮಚ್ಚು ಲಾಂಗುಗಳಿಂದ ಮನಸೋ ಇಚ್ಛೆ ಕೊಚ್ಚಿಹಾಕಿದ್ದಾರೆ. ಅವ್ವ ಮಾದೇಶನ ತಂಡ ರಾಜೇಶ್ ಮತ್ತು ರಾಮುನನ್ನು ಓಡಾಡಿಸಿಕೊಂಡು ಲಾಂಗಿನಿಂದ ತಲೆ, ತೋಳು, ಹೊಟ್ಟೆಗೆ ಮನಸೋ ಇಚ್ಛೆ ಹಲ್ಲೆ ನಡೆಸಿ ಸ್ಥಳದಲ್ಲಿಯೇ ಕೊಂದುಹಾಕಿದೆ. ಪೆಟ್ಟು ತಿಂದ ದೇವು ಅಲಿಯಾಸ್ ದೇವೇಂದ್ರ ಆ ಕತ್ತಲೆಯಲ್ಲಿ ಹೇಗೋ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ಇತ್ತ ಸುನಿಲ್ ಮುಖ್ಯ ರಸ್ತೆಗೆ ಬಂದು ಆಟೋ ಹಿಡಿದು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಬಂದು ಸೇರಿ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾನೆ. ಕಾರ್ಯಪ್ರವೃತ್ತರಾದ ಪೊಲೀಸರು ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ಮಾದೇಶ್ ತಂಡ ಎಸ್ಕೇಪ್ ಆಗಿದೆ.

ಈ ಅಟ್ಯಾಕ್‌ನಲ್ಲಿ ಮೃತಪಟ್ಟ ರಾಜೇಶ್ ಮತ್ತು ರಾಮು ಹಾಗೂ ಬಚಾವ್ ಆಗಿರುವ ದೇವು ಸುನಿಲ್ ಈ ಹಿಂದೆ ಮೈಸೂರಿನ ಕಾಳಿದಾಸ ರಸ್ತೆಯ ಬ್ಯಾರಲ್ ಹೌಸ್‌ನಲ್ಲಿ ಕೊಡಗಿನ ಲೇವಾದೇವಿದಾರರೊಬ್ಬರ ಹತ್ಯೆ ಹಾಗೂ ಪಡುವಾರಹಳ್ಳಿಯಲ್ಲಿ ನಡೆದ ಟಿಮುಲ್ ನೌಕರನ ಕೊಲೆ ಪ್ರಕರಣಗಳಲ್ಲಿ ಭಾಗಿಗಳಾಗಿದ್ದವರು.

■ ಕೆ. ಕೃಷ್ಣ

48 ಗಂಟೆಗಳಲ್ಲಿ ಹಂತಕರ ಬಂಧನ



ಡಂಬಳ ಮುದ್ದುರಾಜ್ ಸುಂದರ್‌ರಾಜ್

ರಾಜೇಶ್ ಅಲಿಯಾಸ್ ಗಾಂಧಿ ಹಾಗೂ ರಾಮು ಅವರನ್ನು ಕಗ್ಗೊಲೆ ನಡೆಸಿದ ಅವ್ವ ಮಾದೇಶ್ ಗ್ಯಾಂಗನ್ನು ಕೊಲೆ ಮಾಡಿದ 48 ಗಂಟೆಗಳಲ್ಲಿ ಬಂಧಿಸುವಲ್ಲಿ ಹುಣಸೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ಕೊಲೆ ನಡೆದ ದಿನದಿಂದಲೇ ಅಪರಾಧಿಗಳ ಬಂಧನಕ್ಕೆ ವ್ಯಾಪಕ ಬಲೆ ಬೀಸಿ ಕಾರ್ಯಾಚರಣೆಗಿಳಿದಿದ್ದ ಡಿವೈಎಸ್‌ಪಿ ವಿಜಯ್ ಡಂಬಳ ನೇತೃತ್ವದ ಪೊಲೀಸ್ ತಂಡ ರಕ್ತದ ವಾಸನೆ ಹಿಡಿದು ಮೊನ್ನೆ 17ನೇ ತಾರೀಖಿನಂದು ಬೆಳಗಿನ ಜಾವ 4.30ರ ಸುಮಾರಿಗೆ ಪಡುವಾರ ಹಳ್ಳಿಯಲ್ಲಿ ನಿರ್ಮಾಣ ಹಂತದಲ್ಲಿರುವ ಅವ್ವ ಮಾದೇಶನ ಮನೆಯಲ್ಲಿ ಮಾದೇಶನನ್ನೂ ಒಳಗೊಂಡಂತೆ ಎಲ್ಲಾ ಎಂಟು ಹಂತಕರನ್ನು ಬಂಧಿಸಿ ಠಾಣೆಗೆ ಎಳೆದೊಯ್ದಿದೆ.

ವಾಸ್ತವದಲ್ಲಿ ಕೊಲೆ ನಡೆದ ಮಾರನೇ ದಿನವೇ ಅಲ್ಲಿಗೆ ಬಂದಿದ್ದ ದಕ್ಷಿಣ ವಲಯ ಪೊಲೀಸ್ ಮಹಾನಿರ್ದೇಶಕ ಜೀವನ್ ಕುಮಾರ್ ಗಾಂವಕರ್ ಸ್ಥಳ ಪರಿಶೀಲನೆ ನಡೆಸಿ ಅವ್ವ ಮಾದೇಶ್ ಸಹಚರ, ಸಂಬಂಧಿಗಳೆಲ್ಲರ ಫೋನ್ ನಂಬರ್‌ಗಳನ್ನು ಪತ್ತೆ ಹಚ್ಚಿ ಅವುಗಳನ್ನು ಟ್ಯಾಪ್ ಮಾಡಿ ಕಾರ್ಯಾಚರಣೆ ನಡೆಸುವಂತೆ ಗೈಡ್ ಮಾಡಿ ಹೋಗಿದ್ದರು.


ಅವರ ನಿರ್ದೇಶನದಂತೆ ವಿಜಯ್ ಡಂಬಳ, ಸರ್ಕಲ್ ಇನ್ಸ್‌ಪೆಕ್ಟರ್ ಸುಂದರ್‌ರಾಜ್, ಎಸ್ಸೈಗಳಾದ ಪ್ರದೀಪ್ ಕುಮಾರ್, ಮುದ್ದುರಾಜ್ ಮುಂತಾದವರನ್ನೊಳಗೊಂಡ ತಂಡ ಮೊಬೈಲ್ ವಾಸನೆ ಹಿಡಿದು ಮಾದೇಶ್ ತಂಡ ಅವಿತು ಕುಳಿತಿದ್ದ ಮನೆಯನ್ನು ಸುತ್ತುವರೆದು ಬಂಧಿಸಿದ್ದಾರೆ.

ಪೊಲೀಸರು ಪರೋಪ್ಲೇನ್ ಹತ್ತಿಸಿದ ಮೇಲೆ ಉಳಿದ ವಿಚಾರಗಳು ಬಯಲಿಗೆ ಬರಲಿವೆ!



'ಯಡ್ಡಿ ಸಿಎಂ ಆಗಲ್ಲ'

-ಸೋಮಯಾಜಿ


ಎಂದು ಸೋಮಯಾಜಿ ವಿವರಿಸಿದರು.
ಸ್ಪಷ್ಟನೆ
'ಯಡಿಯೂರಪ್ಪ ಅವರು ನನ್ನನ್ನು ಇತ್ತೀಚೆಗೆ ಭೇಟಿ ಮಾಡಿದ್ದು ಸತ್ಯ. ಅವರಿಗೆ ಶುಭ ಯೋಗವಿದೆ ಎಂದು ಹೇಳಿದ್ದು ನಿಜ. ಯಡಿಯೂರಪ್ಪ ಅವರೇ ಮುಂದಿನ ಸಿಎಂ ಎಂದು ನಾನು ಎಲ್ಲೂ ಹೇಳಿಲ್ಲ. ಮಾಧ್ಯಮಗಳಲ್ಲಿ ಈ ಸಂಬಂಧ ತಪ್ಪಾಗಿ ವರದಿಯಾಗಿದೆ ಎಂದು ಸೋಮಯಾಜಿ ಅವರು ಸ್ಪಷ್ಟನೆ ನೀಡಿದ್ದಾರೆ.

ನೀವು ಜ್ಯೋತಿಷ್ಯ ನಂಬುತ್ತೀರೊ ಇಲ್ಲವೊ, ಆದರೆ ಬಿಜೆಪಿಯ ಯಡಿಯೂರಪ್ಪ ಇದನ್ನು ಗ್ಯಾರಂಟಿ ನಂಬುತ್ತಾರಾದ್ದರಿಂದ, ಜನಸಾಮಾನ್ಯರಿಗೂ ಈ ಬಗ್ಗೆ ಅರ್ಧ ಕುತೂಹಲ ಇನ್ನರ್ಧ ಅನುಮಾನವಂತೂ ಇದ್ದೇ ಇದೆಯಾದ್ದರಿಂದ ಈ ಭವಿಷ್ಯವಾಣಿಯ ಬಗ್ಗೆ ಇಲ್ಲಿ ಬರೆಯಬೇಕಾಗಿ ಬಂದಿದೆ. ಅದು ದೈವಜ್ಞ ಬಿರುದಾಂಕಿತ ಸೋಮಯಾಜಿ ಹೇಳಿಕೆ.

"ಯಡಿಯೂರಪ್ಪ ಮುಂದಿನ ಮುಖ್ಯಮಂತ್ರಿ ಎಂದು ನಾನು ಎಲ್ಲೂ ಹೇಳಿಲ್ಲ."

-ಎಂದು ಈ ಜ್ಯೋತಿಷಿ ಬಹಿರಂಗ ಹೇಳಿಕೆ ನೀಡಿದ್ದಾನೆ. ಈತ ಈ ಹೇಳಿಕೆ ಕೊಟ್ಟಿದ್ದಾಕೆ ಗೊತ್ತೆ?

"ನಾನೆ ಮುಂದಿನ ಸಿಎಂ ಎಂದು ಸೋಮಾಯಾಜಿ ಹೇಳಿದ್ದಾರೆ" ಅಂತ ಯಡಿಯೂರಪ್ಪ ಪತ್ರಿಕೆಗಳಿಗೆ ಹೇಳಿಕೊಂಡಿದ್ದರು. ಇದರಿಂದ ಕಕ್ಕಾಬಿಕ್ಕಿಯಾಗ ಸೋಮಯಾಜಿ ಅರ್ಜೆಂಟಾಗಿ ತನ್ನದೊಂದು ಸಪರೇಟ್ ಹೇಳಿಕೆ ಬಿಡುಗಡೆ ಮಾಡಿ ಈ ಮೇಲಿನಂತೆ ಸ್ಪಷ್ಟನೆ ಕೊಟ್ಟಿದ್ದಾನೆ.

ಅಂದಹಾಗೆ ಇವೆಲ್ಲಾ ಪ್ರಕಟವಾಗಿದ್ದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ.

ಯಡಿಯೂರಪ್ಪನಿಗೆ ತಾನೇ ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಆಗಬೇಕೆಂಬ ಮಹದಾಸೆಯೇನೊ ಇದೆ. ಆದರೆ ಅದು ಅಸಾಧ್ಯ ಎಂದು ಎರಡು ಹಂತದ ಚುನಾವಣಾ ಸಮೀಕ್ಷೆಗಳು ಖಚಿತಪಡಿಸಿವೆ. ಇನ್ನು ಬಾಕಿ ಉಳಿದಿರುವ ಮೂರನೇ ಹಂತದ 69 ಕ್ಷೇತ್ರಗಳಲ್ಲಿ ಕನಿಷ್ಠ 60 ಕ್ಷೇತ್ರದಲ್ಲಿ ಬಿಜೆಪಿ ಗೆದ್ದರೆ ಮಾತ್ರ ಯಡ್ಡಿಗೆ ಸಿಎಂಗಿರಿ ಯೋಗ ಬರಬಹುದು. ಆದರೆ ಅಲ್ಲಿ ಕಾಂಗ್ರೆಸ್ ಹಾಗೂ ದಳದವರು ಬಿಜೆಪಿಯ ಚಿಡ್ಡಿ ಉದುರಿಸಲು ಕಾದು ನಿಂತಿದ್ದಾರೆ. ಬಿಜೆಪಿ ಅಲ್ಲಿ 25 ಸೀಟ್ ಗೆದ್ದರೆ ಅದೇ ಮಹಾಸಾಧನೆ ಬಿಡಿ. ಹೀಗಿರುವಾಗ ಕನಿಷ್ಠ ಸೋಮಯಾಜಿ ಬಾಯಲ್ಲಾದರೂ 'ತಾನೇ ಮುಂದಿನ ಸಿಎಂ' ಎಂಬ ಮಾತು ಹೇಳಿಸಿಬಿಟ್ಟರೆ ಜನ ಅದನ್ನು ನಂಬಿ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿಗೆ ಓಟು ಹಾಕಿ ಗೆಲ್ಲಿಸುತ್ತಾರೆಂಬ ಹುಂಬ ನಂಬಿಕೆ ಯಡ್ಡಿಗಿತ್ತು. ಅದರಂತೆ ಸೋಮಯಾಜಿ ಹತ್ತಿರ ಹೋದ ಯಡ್ಡಿ ತನ್ನ ಹಣೆಬರಹ ಏನಂತ ಕೇಳಿದ್ದಾರೆ.


ಈ ಸೋಮಯಾಜಿ ಮಹಾ ಕಿಲಾಡಿ. ಈಗಿನ ಚುನಾವಣೆಯಲ್ಲಿ ಬಿಜೆಪಿ ಗತಿ ಏನಾಗಬಹುದೆಂದು


ಕಳ್ಳ ಜ್ಯೋತಿಷಿಯ ಕಪಟ ನಾಟಕ

ಯಾವ ಕೇಡುಗಾಲಕ್ಕೋ ಏನೋ; ಹರಕಲು ಜ್ಯೋತಿಷಿಯೊಬ್ಬನ ಕವಡೆ ಶಾಸ್ತ್ರ ಕೇಳಿಕೊಂಡು ಕನ್ನಡಿಗರು ತಮ್ಮ ಮುಖ್ಯಮಂತ್ರಿಯನ್ನು ನಿರ್ಧರಿಸಬೇಕಂತೆ!

ತಲೆ ಕೆಟ್ಟಿದ್ದು ವಿ.ಕ.ದ ಪತ್ರಕರ್ತರಿಗೋ ಅಥವಾ ಅವರು ಕೆರೆದಿದ್ದನ್ನೆಲ್ಲಾ ಪ್ರಸಾದವೆಂಬಂತೆ ಪ್ರಕಟಿಸುತ್ತಿರುವ ಟೈಮ್ಸ್‌ನ ಮಾರ್ವಾಡಿಗಳಿಗೋ ಗೊತ್ತಾಗುತ್ತಿಲ್ಲ. ಬಹುಶಃ ಚುನಾವಣಾ ಆಯೋಗವೇನಾದರೂ ಯಾಮಾರಿ ಬಿಟ್ಟಿದ್ದರೇ ಈ ಹೊತ್ತಿಗಾಗಲೇ ದೈವಜ್ಞ ಸೋಮಯಾಜಿ ಎಂಬ ವಂಚಕ ಜ್ಯೋತಿಷಿಯೊಬ್ಬನ ಕವಡೆ ಭವಿಷ್ಯವನ್ನು ವಿಕ ಪ್ರಕಟಿಸಿ ಬಿಡುತ್ತಿತ್ತು. ಅಲ್ಲಿಗೆ ಯಡ್ಡಿಯೇ ಮುಂದಿನ ಮುಖ್ಯಮಂತ್ರಿ ಎಂಬ ಸೋಮಯಾಜಿಯ ಗಿಣಿಶಾಸ್ತ್ರವನ್ನೇ ಅಧಿಕೃತ ದೈವೇಚ್ಛೆಯನ್ನಾಗಿ ಬಿಂಬಿಸುವ ಖದೀಮ ಪತ್ರಕರ್ತರ ಷಡ್ಯಂತ್ರವೊಂದು ವ್ಯವಸ್ಥಿತವಾಗಿ ನೇರವೇರುತ್ತಿತ್ತು!

ಸದ್ಯ ಚುನಾವಣಾ ಆಯೋಗ ನೋಟೀಸ್ ಕೊಟ್ಟು ಸೋಮಯಾಜಿಯ ಬಾಯಿ ಮುಚ್ಚಿಸಿದೆ. ಹಾಗಿದ್ದೂ ಮೇ 22 ರ ಸಂಜೆ ಐದು ಗಂಟೆಗೆ ಅಂದರೆ ಕೊನೇ ಹಂತದ ಮತದಾನ ಮುಗಿದ ಮರುಗಳಿಗೆಯಲ್ಲೇ ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆಂದು ಖದೀಮ ಸೋಮಯಾಜಿ ಘೋಷಿಸುತ್ತಾನೆಂದರೆ ಮೇಲುನೋಟಕ್ಕಿದು ವಂಚಕ ಜ್ಯೋತಿಷಿಯೊಬ್ಬನ ಪುಂಡಾಟಿಕೆಯಂತೆ, ಚಡ್ಡಿ ಪತ್ರಕರ್ತರ ದುಷ್ಟಕೂಟದ ಅಧಿಕಪ್ರಸಂಗಿತನದಂತೆ ಕಾಣುತ್ತದೆ ನಿಜ, ಆದರೆ ಆಳದಲ್ಲಿ ಇದು ಕನ್ನಡಿಗರ ಭವಿಷ್ಯದ ಮೇಲೆ ಬೀರುವ ದುಷ್ಪರಿಣಾಮವಿದೆಯಲ್ಲ; ಅದು ಅಕ್ಷಮ್ಯ.






ಹೊಟ್ಟೆಗೆ ಅನ್ನ ತಿನ್ನುವ ಯಾವುದೇ ಪತ್ರಕರ್ತನೊಬ್ಬನಿಗೆ ಯಾರ ಮಾತಿಗೆ ಎಷ್ಟು ಮಹತ್ವ ಕೊಡಬೇಕೆಂಬ ಕನಿಷ್ಠ ಜ್ಞಾನವಾದರೂ ಇರಬೇಕು. ಕಪಟ ಜ್ಯೋತಿಷಿಯೊಬ್ಬ ಕರ್ನಾಟಕದ ಮುಖ್ಯಮಂತ್ರಿಯನ್ನು ನಿರ್ಧರಿಸಬಹುದಾದರೆ ಅದಕ್ಕೆ ಎಲೆಕ್ಷನ್ನು, ಮತದಾನ, ಪ್ರಚಾರ, ಇಷ್ಟೆಲ್ಲ ಖರ್ಚು ವೆಚ್ಚ ತಾನೇ ಏಕೆ ಬೇಕು? ಕಳ್ಳ ಜ್ಯೋತಿಷಿಯೊಬ್ಬನ ಮಾತು ನಂಬಿ ಇಂಥವನೇ ಮುಂದಿನ ಮುಖ್ಯಮಂತ್ರಿ ಅಂತ ಯಾರಾದರೂ ಘೋಷಿಸುತ್ತಾರೆಂದರೆ ಒಂದೋ ಆತನಿಗೆ ಪ್ರಜಾಪ್ರಭುತ್ವದ ಅರ್ಥ-ಗಂಧ ಗೊತ್ತಿಲ್ಲ ಅಥವಾ ಅದು ಪ್ರಜಾಸತ್ತೆಗೆ ಬಗೆಯುವ ದ್ರೋಖಾ?

> ಕಪಟ ಜ್ಯೋತಿಷಿಯೊಬ್ಬ ಕರ್ನಾಟಕದ ಮುಖ್ಯಮಂತ್ರಿಯನ್ನು ನಿರ್ಧರಿಸಬಹುದಾದರೆ ಅದಕ್ಕೆ ಎಲೆಕ್ಷನ್ನು, ಮತದಾನ, ಪ್ರಚಾರ, ಇಷ್ಟೆಲ್ಲ ಖರ್ಚು ವೆಚ್ಚ ತಾನೇ ಏಕೆ ಬೇಕು? ಕಳ್ಳ ಜ್ಯೋತಿಷಿಯೊಬ್ಬನ ಮಾತು ನಂಬಿ ಇಂಥವನೇ ಮುಂದಿನ ಮುಖ್ಯಮಂತ್ರಿ ಅಂತ ಯಾರಾದರೂ ಘೋಷಿಸುತ್ತಾರೆಂದರೆ ಒಂದೋ ಆತನಿಗೆ ಪ್ರಜಾಪ್ರಭುತ್ವದ ಅರ್ಥ-ಗಂಧ ಗೊತ್ತಿಲ್ಲ ಅಥವಾ ಅದು ಪ್ರಜಾಸತ್ತೆಗೆ ಬಗೆಯುವ ದ್ರೋಖಾ?

ಸೋಮಯಾಜಿಯ ಇತಿಹಾಸ ಕೆದಕಿದರೆ ಈ ಎರಡನೇಯದೆ ಹೆಚ್ಚಿರುವಂತಿದೆ. ಇಲ್ಲಿಗೆ ಮೂರು ತಿಂಗಳ ಹಿಂದಷ್ಟೇ ಇದೇ ಸೋಮಯಾಜಿ ಯಡಿಯೂರಪ್ಪ ಈ ಜೀವಮಾನವಿಡೀ ಮುಖ್ಯಮಂತ್ರಿ ಆಗೋದೇ ಇಲ್ಲ ಎಂದಿದ್ದ. ಇನ್ನೂ ಐದು ವರ್ಷ ಕಾಲ ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿರುತ್ತಾರೆ, ಆನಂತರ ಅವರೇ ದೇಶದ ಪ್ರಧಾನಿಯಾಗುತ್ತಾರೆ ಎಂದು ಬುಳಂಗು ಬಿಟ್ಟಿದ್ದ. ತಮಾಷೆಯೆಂದರೆ ಹೀಗೆ ಸೋಮಯಾಜಿ ರೈಲು ಬಿಟ್ಟ ಹತ್ತೇ ದಿನಕ್ಕೆ ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಜ್ಯೋತಿಷ್ಯ ನಂಬಿದ ಕುಮಾರಸ್ವಾಮಿ ಒಂದೇ ವಾರಕ್ಕೆ ಮುಖ್ಯಮಂತ್ರಿಗಿರಿ ಕಳಕೊಂಡು ಬೀದಿಗೆ ಬಿದ್ದರು. ಬಹುಶಃ ಸೋಮಯಾಜಿಯ ಮಾತಿಗೆ ಯಾವ ಬೆಲೆ ಕೊಡಬೇಕೆಂಬುದು ಗೊತ್ತಾಗಬೇಕಿತ್ತು.

ಇದೇ ಸೋಮಯಾಜಿಯ ಬುರುಡೆ ಜ್ಯೋತಿಷ್ಯವನ್ನು ನಂಬಿ ಡಬ್ಲಿಂಗ್ ದಂಧೆಗೆ ಕೈಯಿಟ್ಟ ವಿನಿವಿಂಕ್ ಶಾಸ್ತ್ರಿ ಇವತ್ತು ಜೈಲಲ್ಲಿ ಮುದ್ದೆ ಮುರಿಯುತ್ತಿದ್ದಾನೆ. ಮತ್ತೊಬ್ಬ ಮನಿ ಡೀಲರ್ ಇನ್‌ವೆಸ್ಟೆಕ್ ಕೃಷ್ಣಮೂರ್ತಿ ಕೂಡ ಸೋಮಯಾಜಿಯ ಜ್ಯೋತಿಷ್ಯ ನಂಬಿ ಇವತ್ತಿಗೂ ಕಂಬಿ ಎಣಿಸುತ್ತಿದ್ದಾನೆ. ಅಸಲಿಗೆ ಈತ ಜ್ಯೋತಿಷಿಯೇ ಅಲ್ಲ, ಹುಟ್ಟಾ ವಂಚಕ. ಶೃಂಗೇರಿ ಸಮೀಪದ ಗುಡ್ಡಹಳ್ಳಿಯವನಾದ ಸೋಮಯಾಜಿ ಪ್ರಾರಂಭದಲ್ಲಿ ಶೃಂಗೇರಿ ಮಠದ ಆಡಳಿತಾಧಿಕಾರಿ ಗೌರಿಶಂಕರನಿಗೆ ಚಮಚಾಗಿರಿ ಮಾಡಿಕೊಂಡಿದ್ದ. ಒಂದಷ್ಟು ದಿನಗಳ ಕಾಲ ತಾನೇ ಶೃಂಗೇರಿ ಮಠದ ಸ್ವಯಂಘೋಷಿತ ಧರ್ಮಾಧಿಕಾರಿ ಎಂದುಕೊಂಡು ಓಡಾಡಿಕೊಂಡಿದ್ದ. ಈತನ ಅತೀ ವಿನಯ ಕಂಡ ಸ್ವಾಮೀಜಿ ಬೆಂಗಳೂರಿನ ಶಂಕಪುರದ ಶಾಖಾ ಮಠದ ಗ್ರಂಥಾಲಯದ ಉಸ್ತುವಾರಿ ವಹಿಸಿಕೊಟ್ಟರು. ಮುಂದೆ ಅದೇ ಸೋಮಯಾಜಿಯ ವಂಚಕ ಪ್ರವೃತ್ತಿಗೆ ಬಂಡವಾಳವಾಯಿತು.


ರಾಮಚಂದ್ರಗೌಡ

ಬೆಂಗಳೂರಿನಲ್ಲಿ ಕಾಲೂರಲು ಜಾಗ ಸಿಕ್ಕಿದ್ದೇ ತಡ; ಪಾರ್ಟ್‌ಟೈಂ ಜ್ಯೋತಿಷ್ಯದ ಕಾಯಕ ಶುರು ಹಚ್ಚಿಕೊಂಡ ಸೋಮಯಾಜಿ ಕ್ರಮೇಣ

ಅಘೋರ ಹೋಮ ಮತ್ತು ಕರಂದ್ಲಾಜೆಯ ದೋಖಾ

ನಿನ್ನೆಮೊನ್ನೆಯ ತನಕ ದಗಲುಬಾಜಿ ಚುಂಬಟ್ಟನನ್ನು ಮೆರೆಸುತ್ತಿದ್ದ ಇದೇ ವಿಕದ ಪತ್ರಕರ್ತ ಮಹಾಶಯರಿಗೆ ಏಕಾಏಕಿ ಸೋಮಯಾಜಿ ದೇವರಾಗಿ ಕಾಡಿದ್ದೇಕೆ?

ಈ ಪ್ರಶ್ನೆಗೆ ಉತ್ತರ ಕೊಡುವವನು ವಿಜಯನಗರದ ಜ್ಯೋತಿಷಿ ನರೋತ್ತಮ ಶರ್ಮ. ಈತ ಕೂಡ ಬಿಜೆಪಿ ಕೂಟದ ಜ್ಯೋತಿಷಿಯೆ. ಒಂದೇ ವಾರಕ್ಕೆ ಯಡಿಯೂರಪ್ಪನ ಮುಖ್ಯಮಂತ್ರಿಗಿರಿ ಮುಗುಚಿ ಬಿದ್ದಿದ್ದೇ ವಿಲಕ್ಷಣ ಊಹಾಪ್ರೋಹವೊಂದು ಯಡ್ಡಿ ಪಾಳಯದಲ್ಲಿ ಹೊಗೆಯಾಡಿದೆ. ಆ ಪ್ರಕಾರ ದೇವೇಗೌಡ ಮತ್ತು ಅನಂತ್‌ಕುಮಾರ್‌ಗೆ ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದು ಇಷ್ಟವಿಲ್ಲ. ಅವರಿಬ್ಬರೂ ಮಾಟ ಮಾಡಿಸಿದ್ದರಿಂದಲೇ ಯಡ್ಡಿಗೆ ಸಿಎಂ ಗಾದಿ ಕೈ ತಪ್ಪಿದೆ!

ಅದಕ್ಕೆಂದು ಶೋಭಾ ಕರಂದ್ಲಾಜೆ ಮತ್ತು ರಾಮಚಂದ್ರಗೌಡ ಸೇರಿಕೊಂಡು ಪ್ರತಿತಂತ್ರ ಮಾಡಲು ಸಂಪರ್ಕಿಸಿದ್ದು ಇದೇ ವಿಜಯನಗರದ ಜ್ಯೋತಿಷಿ ನರೋತ್ತಮ ಶರ್ಮರನ್ನು. ತಿರುಗು ಮಾಟ ಮಾಡಲು ಒಪ್ಪಿದ ಜ್ಯೋತಿಷಿ ಶರ್ಮ ಕಂಟಕ ನಿವಾರಣೆ ಬೇಕಾದರೆ ಮಾಡಿಕೊಡಬಲ್ಲೆ ಎಂದಿದ್ದಾನೆ. ಅದು ಅಘೋರ ಹೋಮವಂತೆ. ಆಂಧ್ರದಿಂದ ಎಂಟು ಮಂದಿ ಋತ್ವಿಜರೂ, ಇಬ್ಬರು ಮಾಂತ್ರಿಕರೂ ಮತ್ತು ಕೇರಳದಿಂದ ವಿಶೇಷ ತಾಂತ್ರಿಕರನ್ನು ಕರೆಸಿ ಒಟ್ಟು 15 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮೊದಲು ಸರ್ವರಕ್ಷಾ ಹೋಮ, ಆನಂತರ ಶತ್ರು ನಿಗ್ರಹ ಸರ್ವಶಾಂತಿ ಹೋಮಗಳನ್ನು ತ್ಯಾಗರಾಜನಗರದ ದೇವಸ್ಥಾನವೊಂದರಲ್ಲಿ ನೆರವೇರಿಸಿದ್ದಾನೆ ನರೋತ್ತಮ ಶರ್ಮ. ತಾನೇ ಪೂಜೆಗೆ ಕೂತ ಶೋಭಾ ಕರಂದ್ಲಾಜೆಯೇ ಮಂತ್ರಪೂರ್ವಕ ಸಂಕಲ್ಪವನ್ನೂ ನೆರವೇರಿಸಿದ್ದಾರೆ. ಇದಾದನಂತರವೇ 48 ದಿನಗಳ ಅಘೋರ ಹೋಮ ಶುರುವಾಗಿದೆ. ಎರಡನೇ ಕಂತಿನ ಹೋಮವೂ ಪಾವತಿಯಾಗಿದೆ. ಇತ್ತ ನಲವತ್ತೊಂಬತ್ತನೇ ದಿನಕ್ಕೆ ಹೋಮದ ಬೂದಿಯನ್ನು ವಿಸರ್ಜಿಸಲೆಂದು ಶೃಂಗೇರಿಗೆ ಹೋಗಿದ್ದ ನರೋತ್ತಮ ಶರ್ಮನಿಗೆ ಕರಂದ್ಲಾಜೆಯೇ ಫೋನ್ ಮಾಡಿ ನೀವಿನ್ನು ಹೋಮ ಮುಂದುವರೆಸುವ ಅಗತ್ಯವಿಲ್ಲ ಎಂದಿದ್ದಾಳೆ.

ಹೇಗೂ ಹೋಮ ಮುಗಿದಿತ್ತಲ್ಲ; ಉಳಿಕೆ ದುಡ್ಡು ಪಾವತಿ ಮಾಡಿ ಎಂದಿದ್ದಾನೆ ನರೋತ್ತಮ ಶರ್ಮ. ಆದರೆ ಕರಂದ್ಲಾಜೆ ದುಡ್ಡು ಬಿಚ್ಚಬೇಕಲ್ಲ? ಕೊಡಬೇಕಾಗಿದ್ದಲ್ಲ ಕೊಟ್ಟಾಯ್ತಲ್ಲ ಎಂದು ಕೈ ಎತ್ತಿದ್ದಾಳೆ. ಋತ್ವಿಜರ ಸಂಭಾವನೆಯೇ ಐದೂ ಮುಕ್ಕಾಲು ಲಕ್ಷ ಬಾಕಿಯಿದೆ. ಅದನ್ನಾದರೂ ಕೊಡಿ ಎಂದು ಕರಂದ್ಲಾಜೆಯ ಮನೆ ಮುಂದೆ ರೊಳ್ಳೆ ತೆಗೆದ ನರೋತ್ತಮ ಶರ್ಮನನ್ನು ಬಿಜೆಪಿ ಕಾರ್ಯಕರ್ತರೇ ಹೊರದಬ್ಬಿದ್ದಾರೆ. ಈ ಬಗ್ಗೆ ನ್ಯಾಯ ಕೊಡಿಸುವಂತೆ ನರೋತ್ತಮ ಶರ್ಮ ಅನೇಕ ಪತ್ರಕರ್ತರಿಗೂ ಮೊರೆ ಹೋಕ್ಕಿದ್ದಾನೆ.


ಬಹುಶಃ ಈ ಹಂತದಲ್ಲೇ ದೈವಜ್ಞ ಸೋಮಯಾಜಿ


ನರೋತ್ತಮ ಶರ್ಮ

ಎಂಟ್ರಿಯಾಗಿರಬೇಕು. ಅಘೋರ ಹೋಮ ಕೆಲವೊಮ್ಮೆ ಮಾಡಿಸಿದವರಿಗೇ ಉಲ್ಟಾ ಹೊಡೆಯುತ್ತದೆಯಾದ್ದರಿಂದ ಅದನ್ನು ಅರ್ಧಕ್ಕೇ ನಿಲ್ಲಿಸುವಂತೆ ಸೋಮಯಾಜಿ ಕಿವಿ ಕಚ್ಚಿದ್ದಾನೆ. ಆ ಕಾರಣಕ್ಕೇ ಕರಂದ್ಲಾಜೆ ದುಡ್ಡು ಕೊಡದೇ ಕೈ ಎತ್ತಿದ್ದಾಳೆ. ಇದೇ ವೇಳೆಗೆ ಸೋಮಯಾಜಿ ಯಡ್ಡಿ ಪರ ಸರ್ಪ ದೋಷಯಾಗ ಶುರು ಹಚ್ಚಿಕೊಂಡಿದ್ದಾನೆ. ಸರ್ಪ ದೋಷ ನಿವಾರಿಸಿದ್ದೂ ಅಲ್ಲದೇ ಯಡ್ಡಿಯೇ ಮುಂದಿನ ಮುಖ್ಯಮಂತ್ರಿ ಎಂಬ ಘೋಷಣೆ ಹೊರಡಿಸಲು ಮೂರು ಕೋಟಿಯ ಪ್ಯಾಕೇಜೂ ಗೊತ್ತಾಗಿದೆ. ಈ ಮೂರು ಕೋಟಿಯಲ್ಲಿ ವಿ.ಕ.ದ ಪತ್ರಕರ್ತನ ಕಮೀಷನ್ನೇ ಮೂವತ್ತು ಲಕ್ಷವಂತೆ!

ದುಡ್ಡು ತಿಂದ ತಪ್ಪಿಗಾದರೂ ಸೋಮಯಾಜಿಯ ಭವಿಷ್ಯಕ್ಕೆ ಪ್ರಚಾರ ಕೊಡಬೇಕಲ್ಲ. ವಿಕ ಪತ್ರಕರ್ತರ ಕರ್ಮ ಮತ್ತು ಅವರ ಓದುಗರ ಕರ್ಮ. ವಂಚಕ ಜ್ಯೋತಿಷಿಗಳ ಸುತ್ತ ಗಿರಕಿ ಹೊಡೆಯುವ ಇಂಥ ಜನಪ್ರತಿನಿಧಿಗಳನ್ನು ಪಡೆದ ಕನ್ನಡಿಗರ ಕರ್ಮವೂ ಹೌದು.

ಅಷ್ಟೊತ್ತಿಗೆ ಊಹಿಸಿದ್ದ, ಹಾಗಾಗಿ ನಿಮಗೆ ಶುಭ ಯೋಗವಿದೆ ಅಂತ ಮಾತ್ರ ಹೇಳಿ ಕಳಿಸಿದ್ದನಂತೆ. (ಬಹುಶಃ ಅದರರ್ಥ ಶೋಭಾ ಯೋಗವಿದೆ ಎಂತಲೂ ಇರಬಹುದು) ಆದರೆ ಸೋಮಯಾಜಿ ಮನೆಯಿಂದ ಹೊರಬಂದ ಯಡ್ಡಿ ಯುದ್ಧ ಗೆದ್ದು ಬಂದ ಧೀರನಂತೆ 'ನಾನೇ ಸಿಎಂ ಅಂತ ಸೋಮಯಾಜಿ ಹೇಳಿದರು' ಎಂದು ಸುಳ್ಳು ಸುಳ್ಳೇ ಪ್ರಕಟಿಸಿಬಿಟ್ಟರು.



ಆದರೆ ಹುಷಾರದ ಸೋಮಯಾಜಿ ಈಗ ಇದನ್ನು ಅಲ್ಲಗಳೆದಿದ್ದಾನೆ. ಪಾಪ ಇದರಲ್ಲಿ ಆತನದ್ದೇನೂ ತಪ್ಪಿಲ್ಲ ಬಿಡಿ. ಏಕೆಂದರೆ ಬಿಜೆಪಿಗೆ ಮೆಜಾರಿಟಿ ಸಿಗಲ್ಲ, ಯಡ್ಡಿ ಸಿಎಂ ಆಗಲ್ಲ ಎಂದು ಇಡೀ ರಾಜ್ಯದ ಜನತೆ ಮಾತಾಡುತ್ತಿರುವಾಗ ಈ ಸೋಮಯಾಜಿ ಯಾಕೆ ಅಪದ್ಧ ಮಾತಾಡಿ, ಟ್ರೆಂಡ್‌ಗೆ ವಿರುದ್ಧದ ಅಭಿಪ್ರಾಯ ಹೇಳಿ ತನ್ನ ಬ್ಯುಸಿನೆಸ್ ಹಾಳ್ಮಾಡಿಕೊಳ್ಳುತ್ತಾನೆ?! ■

ವಾಸ್ತು, ಲಾಟರಿ ಮಂತ್ರಿಸಿ ಕೊಡುವುದು, ನಿಧಿಯ ಅಡ್ರೆಸ್ ಹುಡುಕುವುದು, ಸಂತಾನ ಭಾಗ್ಯ ವ್ಯಾಪಾರ ಅಭಿವೃದ್ಧಿ, ಕಲಹ ನಿವಾರಣೆ, ಭೂತೋಚ್ಚಾಟನೆ ಇತ್ಯಾದಿಗಳೆಲ್ಲಕ್ಕೂ ಕೈಯಿಟ್ಟ. ಶಂಕರಮಠದ ಗ್ರಂಥಾಲಯದ ಸೆಲ್ಲಾರ್‌ನಲ್ಲಿದ್ದ ಮನೆಯನ್ನೇ ಆಕ್ರಮಿಸಿಕೊಂಡು ಪಕ್ಕದಲ್ಲೇ ಕಲ್ಪತರು ಸಂಶೋಧನಾ ಕೇಂದ್ರ ಎಂಬ ಮತ್ತೊಂದು ಬೋರ್ಡ್ ತಗುಲಿ ಹಾಕಿದ. ಶಂಕರಮಠಕ್ಕೆ ಬರುತ್ತಿದ್ದ ವೀವಿಪುರಂನ ಕೋಮಟ ಶೆಟ್ಟಿಯೊಬ್ಬರಿಗೆ ನಿಧಿ ಸಿಗುವ ಹಾಗೇ ಮಾಡುತ್ತೇನೆಂದು ಹತ್ತು ಲಕ್ಷ ಕಿತ್ತ, ಚಿಕ್ಕಪೇಟೆಯ ಹವಾಲಾ ದೊರೆ ಶಾಂತಿಲಾಲ್ ಜೈನ್‌ನಿಂದ ಐದು ಲಕ್ಷ ಕಿತ್ತು ಯಾವುದೋ ಲಾಟರಿ ಮಂತ್ರಿಸಿಕೊಟ್ಟು ಐದು ಕೋಟಿಯ ಬಂಪರ್ ಪ್ರೈಜ್ ಬರುವಂತೆ ಮಾಡುತ್ತೇನೆಂದು ಆತನ ಬಂಟರಿಂದ ಸಮಾ ಒದೆ ತಿಂದಿದ್ದ.

ಇದು ಗೊತ್ತಾಗಿಯೇ ಶೃಂಗೇರಿ ಸ್ವಾಮಿಗಳು ಈತನ ಧರ್ಮಾಧಿಕಾರಿ ಪದವಿ ಕಿತ್ತು ತೊಲಗಾಚೆ ಎಂದರು. ಪಾಖಂಡಿ ಸೋಮಾಯಾಜಿ ಮಠದ ವಿರುದ್ಧವೇ ಕೋರ್ಟ್ ಮೆಟ್ಟಿಲು ಹತ್ತಿ ತಾನಿದ್ದ ಮನೆ ಖಾಲಿ ಮಾಡಿಸದಂತೆ ತಡೆಯಾಜ್ಞೆ ತಂದ.

ಇದು ಸೋಮಯಾಜಿಯ ಕಪಟ ಬುದ್ಧಿಗೆ ಕೆಲ ಸ್ಯಾಂಪಲ್ಲುಗಳಷ್ಟೇ. ಈ ಮಧ್ಯೆ ಇಂಗ್ಲೆಂಡ್ ಪ್ರವಾಸಕ್ಕೆಂದು ಹೋದ ಸೋಮಯಾಜಿ ಅಲ್ಲಿ ಜೀನ್ಸ್-ಟೀ ಶರ್ಟ್ ತೊಟ್ಟು ವಿದೇಶಿ ಯುವತಿಯೊಬ್ಬಳನ್ನು ಕೆಣಕಿ ಫಜೀತಿ ಮಾಡಿಕೊಂಡ. ಮದುವೆಯಾಗಿ ಇಬ್ಬರು ಮಕ್ಕಳಿದ್ದಾಗ್ಯೂ ಶಂಕರಪುರದ ಹೆಂಗಸೊಬ್ಬಳನ್ನು ಮದುವೆಯಾಗುತ್ತೇನೆಂದು ನಂಬಿಸಿ ಆಕೆಯ ಆಸ್ತಿ ಲಪಟಾಯಿಸಿಬಿಟ್ಟ.

ಮುಂದೆ ಚಾಮರಾಜಪೇಟೆಯ ಉಪಚುನಾವಣೆ ಬಂದಿದ್ದೇ ಖಾದಿ ತೊಟ್ಟ ಸೋಮಯಾಜಿ ಬ್ರಾಹ್ಮಣರ್‍ಯಾರೂ ಬಿಜೆಪಿಗೆ ಓಟೇ ಹಾಕದ ಹಾಗೇ ಮಾಡ್ತೀನಿ ಎಂದು ಕುಮಾರಸ್ವಾಮಿಯಿಂದ ರೊಕ್ಕ ಕಿತ್ತಿದ್ದ. ಅಚಾನಕ್ಕಾಗಿ ಜಮೀರ್ ಗೆದ್ದು ಬಿಟ್ಟರು. ಅಲ್ಲಿಗೆ ಸೋಮಯಾಜಿಯ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿ ದೇವೇಗೌಡರೂ ಹಳ್ಳಕ್ಕೆ ಬಿದ್ದರು. ಅಲ್ಲಿಯತನಕ ಕವಡೆ ಶಾಸ್ತ್ರ ಹೇಳಿಕೊಂಡಿದ್ದ ಸೋಮಯಾಜಿ ಕ್ರಮೇಣ ತನ್ನ ಹೆಸರಿನ ಮುಂದೆ 'ದೈವಜ್ಞ' ಎಂಬ ಬಿರುದು ಮುದ್ರಿಸಲಾರಂಭಿಸಿದ. ದೇವೇಗೌಡರನ್ನು ಪದೇಪದೇ ತಮಿಳುನಾಡು, ಕೇರಳಕ್ಕೆ ಕರೆದೊಯ್ದು ಏನೇನೋ ಹೋಮ ಮಾಡಿಸುತ್ತೇನೆಂದು ಅವರಿಂದ ಬೋಳಿಸುತ್ತಿದ್ದ.



ಇಂಥವನನ್ನು ಕರೆತಂದು ವಿಜಯ ಕರ್ನಾಟಕದಲ್ಲಿ ನಿತ್ಯ ಪಂಚಾಂಗ ಬರೆಯಲು ಹಚ್ಚಿದ್ದು ಅಲ್ಲಿನ ಚೆಡ್ಡಿ ಪತ್ರಕರ್ತರು!

ಪ್ರತಿ ಸೋಮವಾರ ವಿ.ಕ.ದಲ್ಲಿ ದೈವಜ್ಞನ ವಾಸ್ತು ಕೂಡ ಶುರುವಾಯಿತು. ದೇವರ ಮನೆ ಹೊಡೆದು ಹಾಕಿ ಅಲ್ಲಿ ಬಾತ್‌ರೂಂ ಕಟ್ಟಿಸಿ, ಚಪ್ಪಲಿ ಸ್ಟ್ಯಾಂಡ್ ಬದಲಿಸಿ, ಮನೆ ಮುಂದೆ ಯಾವ್ಯಾವುದೋ ಗಿಡ ಮಡಗಿ, ಬೆಡ್‌ರೂಂ ಚೇಂಜ್ ಮಾಡಿ, ಕೆಂಪು ಬಟ್ಟೆ ಹಾಕಬೇಡಿ; ಇತ್ಯಾದಿ ಉಲ್ಬಂಪಲ್ಟಾ ಸಲಹೆಗಳೆಲ್ಲ ವಿ.ಕ.ದಲ್ಲಿ ಅಚ್ಚಾಗುತ್ತವೆ. ನಂಬಿದ ಯಾರೂ ಈತನಕ ಉದ್ಧಾರವಾಗಿಲ್ಲ.

ನಿನ್ನೆಮೊನ್ನೆಯ ತನಕ ಕುಮಾರಸ್ವಾಮಿಯೇ ದೇಶದ ಪ್ರಧಾನಿಯಾಗ್ತಾರೆ ಎಂದು ಮಣ್ಣಿನ ಮಕ್ಕಳ ಭಜನೆ ಮಾಡಿಕೊಂಡಿದ್ದ ಸೋಮಯಾಜಿ ಈಗ ಏಕಾಏಕಿ ಬಿಜೆಪಿಗೆ ಹಾರಿದ್ದಕ್ಕೂ ಕಾರಣವಿದೆ. ಇಲ್ಲಿಗೆ ತಿಂಗಳ ಹಿಂದಷ್ಟೇ ಬಿಜೆಪಿ ನಾಯಕ ರಾಮಚಂದ್ರಗೌಡ ಮತ್ತು ಶೋಭಾ ಕರಂದ್ಲಾಜೆಯನ್ನು ಶಂಕರಮಠಕ್ಕೆ ಕರೆತಂದು ಸೋಮಯಾಜಿಗೆ ಗಂಟುಹಾಕಿದ್ದು ವಿಕದ ಪತ್ರಕರ್ತನೊಬ್ಬ. ಹೇಗೂ ಚುನಾವಣೆ ಬೇರೆ ಕಾವೇರಿದೆ. ಈ ಹಂತದಲ್ಲಿ ಯಡ್ಡಿಯೇ ಮುಂದಿನ ಮುಖ್ಯಮಂತ್ರಿಯಾಗುತ್ತಾರೆ ಎಂದು ಸೋಮಯಾಜಿಯ ಬಾಯಿಂದ ಹೇಳಿಸಿಬಿಟ್ಟ, ಎರಡನೇ ಮತ್ತು ಮೂರನೇ ಹಂತದ ಮತದಾನದ ಹೊತ್ತಿಗೆ ಬಿಜೆಪಿ ಪರ ಅಲೆಗೆ ಮತ್ತಷ್ಟು ಪುಷ್ಟಿ ಸಿಕ್ಕಂತಾಗುತ್ತದೆ. ಸೋಮಯಾಜಿ ಬಿಟ್ಟ ಬುರುಡೆಯನ್ನು ಟೀವಿ ನೈನ್ ಮತ್ತು ವಿ.ಕ. ವಿಶೇಷ ಪ್ರಾಮುಖ್ಯತೆ ಕೊಟ್ಟು ಪ್ರಕಟಿಸಿಬಿಟ್ಟರೆ ಸಹಜವಾಗೇ ಟ್ರೆಂಡ್ ಸೃಷ್ಟಿಯಾಗುತ್ತದೆ.

ಇಂಥಾದ್ದೊಂದು ಲೆಕ್ಕಾಚಾರ ಹಾಕಿಯೇ ಮೇ 12ರ ನಂತರ ತಾನು ಮುಖ್ಯಮಂತ್ರಿಯಾಗುತ್ತಾರೆಂದು ಪ್ರಕಟಿಸುತ್ತೇನೆಂದು ಸೋಮಯಾಜಿ ಘೋಷಿಸಿದ್ದ. ಅದನ್ನೂ ವಿ.ಕ. ವಿಶೇಷ ಪ್ರಾಮುಖ್ಯತೆ ಕೊಟ್ಟು ಮುದ್ರಿಸಿತು. ಮರುದಿನವೇ ಟೀವಿ ನೈನ್‌ನಲ್ಲಿ ಸೋಮಯಾಜಿ ಭಾವಿ ಮುಖ್ಯಮಂತ್ರಿಯನ್ನು ಹೆಸರಿಸಲಿದ್ದ, ಆದರೆ ಹುಷಾರಾದ ಚುನಾವಣಾ ಆಯೋಗ ಸೋಮಯಾಜಿಗೆ ನೋಟೀಸು ಕೊಟ್ಟು ಬಾಯಿ ಮುಚ್ಚಿಸಿತು.

ಇನ್ನೆಲ್ಲಿ ಕಂಬಿ ಎಣಿಸಬೇಕಾಗುತ್ತೋ ಎಂದು ಹೆದರಿದ ಸೋಮಯಾಜಿ ಅಲ್ಲಿಗೆ ಬಾಲ ಮುದುರಿಕೊಂಡ.

ಆದರೆ ಇದಕ್ಕೊಂದು ಬಿಜೆಪಿ ಖದೀಮರಿಂದ ಸೋಮಯಾಜಿ ಮೂರು ಕೋಟಿಯ ರೊಕ್ಕ ಪೀಕಿದಿತ್ತಲ್ಲ; ಈ ಪೈಕಿ ಎರಡೂವರೆ ಕೋಟಿ ವಾಪಸ್ಸು ಮಡಗು ಎಂದು ಈಗ ರಾಮಚಂದ್ರಗೌಡರು ವಸೂಲಿಗೆ ಬಿದ್ದಿದ್ದಾರಂತೆ. ಕೊಟ್ಟ ದುಡ್ಡು ಕೈಲಾಸಕ್ಕೆ ಎಂಬಂತೆ ಸೋಮಯಾಜಿ ಕೈ ಎತ್ತಿದ್ದಾನೆ. ಮೂರನೇ ಹಂತದ ಚುನಾವಣೆ ಮುಗಿದ ಮರುಗಳಿಗೆಯಲ್ಲೇ ಯಾರು ಮುಂದಿನ ಮುಖ್ಯಮಂತ್ರಿ ಎಂಬುದನ್ನು ಸೋಮಯಾಜಿ ಘೋಷಿಸುತ್ತಾನಂತೆ. ನಡೆದ ಡೀಲು, ಪಡೆದ ರೊಕ್ಕದ ಕತೆ ಯಾರಿಗೆ ತಾನೇ ಗೊತ್ತಿಲ್ಲ? ವಂಚಕ ಜ್ಯೋತಿಷಿಯೊಬ್ಬನ ಮಾತು ಕೇಳಿ ಇಂಥದ್ದೇ ಪಕ್ಷಕ್ಕೆ ಓಟು ಕೊಡುವಷ್ಟು ಜನ ಮುಠ್ಠಾಳರಲ್ಲ.

-ರಾ. ಸೋಮನಾಥ್

ಟಿಪ್ಪೂ ಸುಲ್ತಾನ್ ಕನ್ನಡಿಗನಲ್ಲವೆ?


ಚೆಡ್ಡಿಗಳ ರಕ್ಷಣೆಗೆ ನಾರಾಯಣಗೌಡನ ವೇದಿಕೆ




ಗಣಿರೆಡ್ಡಿ, ಲಿಂಬಾವಳಿ, ಅನಂತಕುಮಾರ್ ಇತ್ಯಾದಿ ಬಿಜೆಪಿ ಧೂರ್ತರನ್ನು ವೇದಿಕೆಗೆ ಕರೆದು ಸನ್ಮಾನಿಸಿದಾಗಲೇ ರಕ್ಷಣಾ ವೇದಿಕೆ ಮತ್ತು ಅದರ ಒಡೆಯ ನಾರಾಯಣಗೌಡರ ಕನ್ನಡ ಕಾಳಜಿಯ ಬಗ್ಗೆ ಅನುಮಾನ ಶುರುವಾಗಿತ್ತು, ಅದೀಗ ನಿಜವಾಗುತ್ತಿದೆ.

ದೇವನಹಳ್ಳಿ ಏರ್‌ಪೋರ್ಟಿಗೆ ಟಿಪ್ಪೂ ಸುಲ್ತಾನರ ಹೆಸರಿಡುವುದು ಇನ್ನೇನು ಗ್ಯಾರಂಟಿ ಎನ್ನುವಾಗಲೇ ನಾರಾಯಣಗೌಡರ ಆರೆಸ್ಸೆಸ್ ಬುದ್ಧಿಯೂ ಜಾಗೃತಗೊಂಡಿದೆ!

ದೇವನಹಳ್ಳಿ ಟಿಪ್ಪೂ ಸುಲ್ತಾನರ ಜನ್ಮಸ್ಥಳ. ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣ ಕೊಟ್ಟ ಟಿಪ್ಪೂ ಸುಲ್ತಾನ್ ಒರ್ವ ವೀರಕನ್ನಡಿಗ. ಸ್ವಾತಂತ್ರ ಸಮರದಲ್ಲಿ ತನ್ನ ಜೀವವನ್ನೇ ಬಲಿದಾನಗೈದ ಮಹಾನ್ ಹುತಾತ್ಮ. ಇಂತಹ ಟಿಪ್ಪೂ ಹೆಸರನ್ನು ದೇವನಹಳ್ಳಿ ಏರ್‌ಪೋರ್ಟಿಗೆ ಇಡುವಾಗಲೇ ರಕ್ಷಣಾ ವೇದಿಕೆಯ ಅಧಿಪತಿ ನಾರಾಯಣಗೌಡರ ಜಾತಿ ಪ್ರಜ್ಞೆ ಎಚ್ಚರಗೊಂಡು ಅವರಿಗೆ ಕೆಂಪೇಗೌಡರ ಹೆಸರು ನೆನಪಾಗುತ್ತದೆಯೆಂದರೆ ಏನರ್ಥ?



ಈಗಾಗಲೇ ಬೆಂಗಳೂರಿನಲ್ಲಿ ಕೆಂಪೇಗೌಡರ ಹೆಸರಿನಲ್ಲೊಂದು ರಸ್ತೆಯಿದೆ. ಮೆಜೆಸ್ಟಿಕ್ ಮಧ್ಯದಲ್ಲೇ ಕೆಂಪೇಗೌಡ ಸರ್ಕಲ್ ಕೂಡ ಇದೆ. ಬೆಂಗಳೂರಿನ ಕೇಂದ್ರ ಬಸ್ ನಿಲ್ದಾಣಕ್ಕೂ ಸರ್ಕಾರ ಕೆಂಪೇಗೌಡರ ಹೆಸರಿಟ್ಟಿದೆ. ಪಾಲಿಕೆಯ ಎದುರೇ ಕೆಂಪೇಗೌಡರ ಪ್ರತಿಮೆ, ಕಾರ್ಪೊರೇಷನ್ ಲಾಂಛನವಾಗಿ ಕೆಂಪೇಗೌಡ ಗೋಪುರ, ಕೆಂಪೇಗೌಡ ಪ್ರಶಸ್ತಿ, ಕೆಂಪೇಗೌಡ ಆಸ್ಪತ್ರೆ, ಕಾಲೇಜು, ಬಡಾವಣೆ ಹೀಗೆ ದಿನಂಪ್ರತಿ ಕೆಂಪೇಗೌಡರನ್ನು ಸ್ಮರಿಸಲು ಬೇಕಾಬಿಟ್ಟಿ ಸವಲತ್ತುಗಳನ್ನು ಸರ್ಕಾರವೇ ಕಲ್ಪಿಸಿಕೊಟ್ಟಿದೆ. ಬೆಂಗಳೂರನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡ ಒಂದೇ ಕಾರಣಕ್ಕೆ ಕೆಂಪೇಗೌಡರನ್ನು ಈಪಾಟಿ ಸ್ಮರಿಸಬಹುದಾದರೆ ಸ್ವಾತಂತ್ರ್ಯಕ್ಕಾಗಿ ತನ್ನಿಬ್ಬರು ಮಕ್ಕಳನ್ನೇ ಒತ್ತೆ ಇಟ್ಟ, ಹೋರಾಟದಲ್ಲಿ ಪ್ರಾಣವನ್ನೇ ಬಲಿಕೊಟ್ಟ ಟಿಪ್ಪೂ ಸುಲ್ತಾನರನ್ನು ಇನ್ನೆಷ್ಟು ಸ್ಮರಿಸಬೇಕು?



ದುರಂತವೆಂದರೆ ಚಾಮರಾಜಪೇಟೆಯಲ್ಲಿ ಟಿಪ್ಪೂ ಕಟ್ಟಿಸಿದ ಅರಮನೆ ಬಿಟ್ಟರೆ ಟಿಪ್ಪೂ ಸುಲ್ತಾನ್ ಹೆಸರಿನ ರಸ್ತೆ, ಸರ್ಕಲ್, ಪ್ರತಿಮೆ, ಬಡಾವಣೆ, ಬಸ್ ನಿಲ್ದಾಣ, ಆಸ್ಪತ್ರೆ, ಕಾಲೇಜು ಯಾವುದೂ ಇಲ್ಲ. ಏಕೆಂದರೆ ಟಿಪ್ಪೂ ಒರ್ವ ಮುಸ್ಲಿಂ.

ಟಿಪ್ಪೂ ಒಬ್ಬ ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ಆತನ ಬಲಿದಾನವನ್ನು ಕನ್ನಡಿಗರು ಮರೆಯಬಹುದಾ?

ಹೋದವಾರ ಮೇ 15ರಂದು ಸಿಪಿಎಂ ಪಕ್ಷದ ನಾಯಕ ಸೀತರಾಂ ಯಚೂರಿಯವರು ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರಿಗೆ ಪತ್ರ ಬರೆದು "ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲೆಯೆತ್ತಿರುವ ದೇವನಹಳ್ಳಿ ಧೀರ ಟಿಪ್ಪೂ ಸುಲ್ತಾನನ ಜನ್ಮಸ್ಥಳ. ಆದ್ದರಿಂದ ಆತನ ಹೆಸರನ್ನೇ ವಿಮಾನ ನಿಲ್ದಾಣಕ್ಕೆ ಇಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ೧೮ನೇ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪೂ ಸುಲ್ತಾನನಿಗೆ ನಾವು ಸಲ್ಲಿಸುವ ಸೂಕ್ತ ಗೌರವ ಅದಾಗಿರುತ್ತದೆ" ಎಂದಿದ್ದರು. ಯಾವಾಗ ಈ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿ ಇನ್ನೇನು ಏರ್ ಪೋರ್ಟಿಗೆ ಟಿಪ್ಪೂ ಸುಲ್ತಾನನ ಹೆಸರನ್ನೇ ಇಡಲಾಗುತ್ತದೆ ಎನಿಸಿತೋ ಆಗ ನಾರಾಯಣಗೌಡರ ಕೆಂಪೇಗೌಡರ ಭಕ್ತಿ ಉಲ್ಬಣಿಸಬೇಕೆ?

ಹಾಗೊಂದು ಪಕ್ಷ ಟಿಪ್ಪೂ ಕನ್ನಡಿಗನಲ್ಲ ಎಂಬುದು ರಕ್ಷಣಾ ವೇದಿಕೆಯ ನಿಲುವೇ? ಅಥವಾ ಆತ ಮುಸ್ಲಿಂ ಎಂಬ ಕಾರಣಕ್ಕೆ ನಾರಾಯಣಗೌಡರಿಗೆ ಬೇಡವಾದನೇ? ಇದರರ್ಥ ಕನ್ನಡ ಚಳವಳಿಯಲ್ಲೂ ಚೆಡ್ಡಿಗಳ ಕೋಮುವಾದದ ವಿಷ ತೂರಿಬಿಟ್ಟದೆಯೇ? ಈ ಪ್ರಶ್ನೆಗಳಿಗೆ ನಾರಾಯಣಗೌಡ ಉತ್ತರಿಸುತ್ತಾರೆಯೇ?

ಟಿಪ್ಪೂ ಸುಲ್ತಾನ್ ಹೆಸರನ್ನು ದೇವನಹಳ್ಳಿ ಏರ್‌ಪೋರ್ಟಿಗೆ ಇಟ್ಟ ಮಾತ್ರಕ್ಕೇ ಕೆಂಪೇಗೌಡರಿಗೆ ಅನ್ಯಾಯವಾಗುತ್ತದೆ ಎಂದು ಯಾವ ಪುಣ್ಯಾತ್ಮ ರಕ್ಷಣಾ ವೇದಿಕೆಯ ತಲೆ ಕೆಡಿಸಿದ್ದಾನೋ. ಇದೇ ದೇವನಹಳ್ಳಿ ಏರ್‌ಪೋರ್ಟಿಗೆಂದು ನೋಟಿಫೈ ಮಾಡಿಕೊಂಡ ರೈತರ ಭೂಮಿಯನ್ನು ಕಟ್ಟಾ ನಾಯ್ಡು ಗ್ಯಾಂಗ್ ಕಬಳಿಸಿದಾಗ ರಕ್ಷಣಾ ವೇದಿಕೆ ತುಟಿಪಿಟಿಕ್ಕೆನ್ನಲಿಲ್ಲ. ಐಟಿ ಕಂಪೆನಿಗಳ ಹೆಸರಲ್ಲಿ ರೈತರ ಭೂಮಿ ಕಿತ್ತು ಬಿಲ್ಡರುಗಳ ಬಾಯಿಗೆ ಹಾಕಿದ ಅಧಿಕಾರಿಗಳ ವಿರುದ್ಧ ನಾರಾಯಣಗೌಡ ಚಕಾರವೆತ್ತಿಲ್ಲ. ಸೆಝ್ ಹೆಸರಲ್ಲಿ ಖದೀಮ ಕಂಪೆನಿಗಳು ರೈತರನ್ನು ಬೀದಿಗೆ ಹಾಕಿದಾಗಲೂ ಸೊಲ್ಲೆತ್ತಲಿಲ್ಲ.

ಈಗ ಟಿಪ್ಪೂ ಸುಲ್ತಾನ್ ಹೆಸರಿಡುತ್ತಾರೆಂದಾಕ್ಷಣ ಅದರ ವಿರುದ್ಧ ಕೆಂಪೇಗೌಡರನ್ನು ಎತ್ತಿ ಕಟ್ಟುವುದು ಆರೆಸ್ಸೆಸ್ ಷಡ್ಯಂತ್ರವೇ ಹೊರತು ಅದು ಕನ್ನಡಾಭಿಮಾನ ಖಂಡಿತ ಅಲ್ಲ. ಏಕೆಂದರೆ ಟಿಪ್ಪೂ ಸುಲ್ತಾನ್ ಹೆಸರನ್ನು ದೇಶದ ಬೇರೆ ಯಾವುದೇ ರಾಜ್ಯ ಸ್ಮರಿಸುತ್ತಿಲ್ಲ. ಕನ್ನಡಿಗರ ಹೊರತಾಗಿ ಟಿಪ್ಪುವಿಗೆ ವಾರಸುದಾರರೆಂದು ಬೇರೆ ಯಾರೂ ಇಲ್ಲ. ಇದನ್ನು ರಕ್ಷಣಾ ವೇದಿಕೆ ಅರ್ಥ ಮಾಡಿಕೊಳ್ಳಬೇಕು. ಕನಿಷ್ಠ ಕನ್ನಡಿಗರ ಜೊತೆ ಮುಸ್ಲಿಮರು ನಿಲ್ಲಬೇಕೆಂಬುದಕ್ಕಾದರೂ ಟಿಪ್ಪು ಹೆಸರಿಡುವುದಕ್ಕೆ ಬೆಂಬಲಿಸಬೇಕು. ಆಗಷ್ಟೇ ಕನ್ನಡಿಗರ ಉದ್ಯೋಗದ ಪ್ರಶ್ನೆ, ಭೂಮಿ ಕಳಕೊಂಡ ರೈತರ ಬದುಕಿನ ಪ್ರಶ್ನೆಗೆ ಮುಸ್ಲಿಮರು ಬೆಂಬಲಿಸುತ್ತಾರೆ. ಅದು ಬಿಟ್ಟು ಕನ್ನಡಿಗರಿಂದ ಮುಸ್ಲಿಮರನ್ನು ಬೇರ್ಪಡಿಸ ಹೊರಟರೆ ಖುಷಿಪಡುವುದು ಸಂಘ ಪರಿವಾರವೇ ಹೊರತು ಕನ್ನಡಿಗರ ಹೋರಾಟಕ್ಕೆ ಬಲ ಬರುವುದಿಲ್ಲ.

ಬೆಂಕಿ ಇಕ್ಕಿದ್ದೇ ಬಿಜೆಪಿ

ದೇವನಹಳ್ಳಿಯಲ್ಲಿ ಟಿಪ್ಪೂ ಹುಟ್ಟದೇ ಹೋಗಿದ್ದರೆ ಇಂಟರ್‌ನ್ಯಾಷನಲ್ ಏರ್‌ಪೋರ್ಟಿಗೆ ಆತನ ಹೆಸರಿಡುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲವೇನೊ. ಈತನಕ ಯಾವೊಂದು ಕನ್ನಡ ಸಂಘಟನೆಯೂ (ಇದೀಗ ರಕ್ಷಣಾ ವೇದಿಕೆಯ ಹೊರತಾಗಿ) ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಡುವಂತೆ ಒತ್ತಾಯಿಸಿಲ್ಲ. ಯಾವತ್ತು ಟಿಪ್ಪೂ ಹೆಸರು ಕೇಳಿಬಂತೋ ಸಂಘ ಪರಿವಾರದ ಕೆಲ ಶಾಖಾ ಸಂಘಟನೆಗಳು ಇದ್ದಕ್ಕಿದ್ದಂತೆ ಕೆಂಪೇಗೌಡರ ಹೆಸರಿಡುವಂತೆ ಪತ್ರಿಕಾ ಹೇಳಿಕೆ ಕೊಟ್ಟವು.

ಅದರರ್ಥ ಟಿಪ್ಪೂ ಹೆಸರನ್ನು ಕೆಂಪೇಗೌಡರ ವಿರುದ್ಧ ಎತ್ತಿಕಟ್ಟಿ ಕಾರಸ್ಥಾನ ಮಾಡುವುದು. ಉರ್ದು ವಾರ್ತೆಯಲ್ಲಾದಂತೆ ಕನ್ನಡಿಗರಿಗೂ ಮುಸ್ಲಿಮರಿಗೂ ಹುಳಿಹಿಂಡುವುದು. ಇಂಥ ಹುನ್ನಾರಕ್ಕೆಂದೇ ಬಿಜೆಪಿಯ ಕೆಲ ನಾಯಕರು ಕೆಂಪೇಗೌಡರ ಹೆಸರಿಡುವಂತೆ ಪತ್ರಿಕಾ ಹೇಳಿಕೆ ಕೊಡುತ್ತಿದ್ದಾರೆ.

ಇದನ್ನ ನಾರಾಯಣಗೌಡ ಮತ್ತವರ ವೇದಿಕೆ ಆದಷ್ಟು ಬೇಗ ಅರ್ಥಮಾಡಿಕೊಳ್ಳಬೇಕಿದೆ. ಮಾತ್ರವಲ್ಲ, ಭಾರತದ ಧೀರ ಯೋಧ, ಕರ್ನಾಟಕದ ಹೆಮ್ಮೆ ಟಿಪ್ಪೂ ಸುಲ್ತಾನನ ಹೆಸರನ್ನೆ ಹೊಸ ವಿಮಾನ ನಿಲ್ದಾಣಕ್ಕೆ ಇಡಬೇಕೆಂದು ಒತ್ತಾಯಿಸಬೇಕಿದೆ. ಇದನ್ನು ನಾರಾಯಣ ಗೌಡರು ಮಾಡ್ತಾರಾ?


ಬಿಜೆಪಿಗೊಂದು ಸವಾಲ್...

'ಲಿಂಗಾಯತರು ಮೂರ್ಖರು' ಎಂಬ ಅಭಿಪ್ರಾಯ ಇರುವುದು ಬಿಜೆಪಿಯ ಬ್ರಾಹ್ಮಣ ನಾಯಕರಿಗೆ. ಕಳೆದ ವಾರದ ನಮ್ಮ ವರದಿ ನೋಡಿದ ಅನೇಕ ವೀರಶೈವ ಮುಖಂಡರು ಲಂಕೇಶ್ ಕಚೇರಿಗೆ ಫೋನ್ ಮಾಡಿ "ಆ ವರದಿಯನ್ನೇಕೆ ಪ್ರಕಟಿಸಿದಿರಿ" ಎಂದು ನಮ್ಮೊಂದಿಗೆ ಜಗಳವಾಡಿದ್ದಾರೆ. ಆದರೆ ಅವರು ಪ್ರಶ್ನಿಸಬೇಕಾದ್ದು ನಮ್ಮನ್ನಲ್ಲ, ಬದಲಾಗಿ ಬಿಜೆಪಿಗಳನ್ನು.

ಅಂದಹಾಗೆ ಕಳೆದ ವಾರದ ಈ ವರದಿ ನೋಡಿ ಕಂಗಾಲಾದ ಬಿಜೆಪಿಗಳು ಪತ್ರಿಕೆ ಜನರಿಗೆ ತಲುಪದಂತೆ ನಾನಾ ಸರ್ಕಸ್ ಮಾಡಿದ್ದಾರೆ. ಮುಖ್ಯವಾಗಿ ಎರಡೂ ಹಾಗೂ ಮೂರನೇ ಹಂತದ ಮತದಾನ ನಡೆಯಬೇಕಿರುವ ಕ್ಷೇತ್ರಗಳಲ್ಲಿ ಪತ್ರಿಕೆ ಜನರ ಕೈಗೆ ಸಿಗದಂತೆ ಮಾಡಲು ತಾವೇ ಬಹುತೇಕ ಪ್ರತಿಗಳನ್ನು ಖರೀದಿಸಿ ಸ್ಟಾಲ್‌ಗಳಿಂದ ಕಣ್ಮರೆ ಮಾಡಿದ್ದಾರೆ. ಹಾಗಾಗಿ ನಾವಿದನ್ನು ಒಂದು ಸವಾಲಿನಂತೆ ತೆಗೆದುಕೊಂಡಿದ್ದೇವೆ. ಬಿಜೆಪಿಯೊಳಗೆ ಲಿಂಗಾಯತರ ಸ್ಥಾನಮಾನದ ಬಗ್ಗೆ ಅಲ್ಲಿರುವ ಮೇಲ್ಜಾತಿ ನಾಯಕರಿಗೆ ಯಾವ ಭಾವನೆ ಇದೆ ಎಂಬುದಕ್ಕೆ ಸಾಕ್ಷಿಯಾಗಿರುವ ಲೇಖನವನ್ನು ಮರು ಮುದ್ರಿಸುತ್ತಿದ್ದೇವೆ. ಸತ್ಯವನ್ನು ಎಂದೂ ಮರೆಮಾಚಲಾಗುವುದಿಲ್ಲ ಮತ್ತು ಜನಪರವಾದ ನಮ್ಮ ದನಿಯನ್ನು ಎಂದೂ ದಮನಿಸಲು ಸಾಧ್ಯವಿಲ್ಲ ಎಂದು ತೋರಿಸಲು....

'ಲಿಂಗಾಯತರು ಮೂರ್ಖರು' -ಅನಂತಕುಮಾರ್

ಈ ಬಾರಿಯ ಚುನಾವಣೆಯಲ್ಲಿ ರಾಜ್ಯದ ಬಲಿಷ್ಠ ಸಮುದಾಯವಾದ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಪರ ಒಲವು ತೋರುತ್ತಿದ್ದಾರೆಂದು ಹಲವರು ಅಭಿಪ್ರಾಯಪಡುತ್ತಿದ್ದಾರೆ. ಆದರೆ ಅದೇ ಲಿಂಗಾಯತ ಸಮುದಾಯದ ಬಗ್ಗೆ ಬಿಜೆಪಿ ನಾಯಕರಲ್ಲಿ ಅಭಿಮಾನವಾಗಲಿ, ಕಾಳಜಿಯಾಗಲಿ ಇದೆಯೇ? ಕಿಂಚಿತ್ತೂ ಇಲ್ಲವೇ ಇಲ್ಲ. ಮಾತ್ರವಲ್ಲ ಲಿಂಗಾಯತ ಸಮುದಾಯದ ಬಗ್ಗೆ ಬಿಜೆಪಿಯ ಹಿರಿಯ ನಾಯಕ ಅನಂತಕುಮಾರ್ ಎಂತಹ ತುಚ್ಛ ಭಾವನೆಯನ್ನು ಹೊಂದಿದ್ದಾರೆ ಎಂಬುದಕ್ಕೆ ಇಲ್ಲಿ ಒಂದು ಸಾಕ್ಷಿಯನ್ನು ನೀಡುತ್ತಿದ್ದೇವೆ.



ನೆನಪಿದೆಯೇ, ಬಿ.ಬಿ. ಶಿವಪ್ಪ ಎಂಬ ಲಿಂಗವಂತ ಹಲವು ದಶಕಗಳ ಕಾಲ ತಮ್ಮ ಜೀವನವನ್ನು ಬ್ರಾಹ್ಮಣ ಜಾತಿ ಪಕ್ಷ ಎಂದೂ ಹಲವೊಮ್ಮೆ ಕರೆಯಲ್ಪಡುವ ಬಿಜೆಪಿ ಪಕ್ಷದ ಏಳಿಗೆಗಾಗಿ ಸವೆಸಿದರು. ಅದಕ್ಕೆಂದು ಅವರಿಗೆ ದಕ್ಕಿದ್ದು ಆ ಪಕ್ಷದ ರಾಜ್ಯಾಧ್ಯಕ್ಷನ ಜವಾಬ್ದಾರಿಯೇ ಹೊರತು ಯಾವುದೇ ಅಧಿಕಾರವಲ್ಲ, ಬದಲಾಗಿ ಶಿವಪ್ಪನಿಗಿಂತಲೂ ಕಿರಿಯನಾದ ಅನಂತಕುಮಾರ್‌ಗೆ ಕೇಂದ್ರ ಸಚಿವ ಸಂಪುಟದಲ್ಲಿ ಬೃಹತ್ ಇಲಾಖೆಗಳ ಮಂತ್ರಿ ಪದವಿ ಸಿಕ್ಕಿತ್ತು.

ಶಿವಪ್ಪನವರು ಬಿಜೆಪಿ ಪಕ್ಷದಲ್ಲಿದ್ದಾಗ ಅಲ್ಲಿ ಹೇಗೆ ಬ್ರಾಹ್ಮಣರ ಹಿಡಿತ ಅನ್ಯಜಾತಿ ನಾಯಕರನ್ನು ಮೂಲೆಗುಂಪು ಮಾಡುತ್ತದೆ ಎಂಬ ಬಗ್ಗೆ ಒಂದು ಪ್ರಕರಣ ನಡೆದು ಅದಕ್ಕೆ ಸಂಬಂಧಿಸಿದಂತೆ ಅವರು ಅನಂತಕುಮಾರರಿಗೆ ಬರೆದ ಪತ್ರ ಇಲ್ಲಿದೆ. ಇದನ್ನು ಸಾವಧಾನವಾಗಿ ಎಲ್ಲರೂ ಓದಬೇಕೆಂದು ವಿನಂತಿ.

ಜೂನ್ 10, 1999

ಅನಂತಕುಮಾರ್ ಅವರಿಗೆ,

ಇತ್ತೀಚೆಗೆ ಪಕ್ಷದ ಕಚೇರಿ ಸಿಂಹಾಲಯದಲ್ಲಿ ಕೆಲವು ಪಕ್ಷದ ಆಂತರಿಕ ವಿಚಾರಗಳನ್ನು ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಚರ್ಚಿಸಲು ಕೆಲವು ಹಿರಿಯ ನಾಯಕರುಗಳ ಸಭೆಯಲ್ಲಿ ತಾವು ಭಾಗವಹಿಸಿದ್ದಿರಿ. ಆ ಸಭೆಯಲ್ಲಿ ಎರಡು ಪ್ರಮುಖ ವಿಷಯಗಳ ಬಗ್ಗೆ ನೀಡಿದ ವ್ಯಾಖ್ಯಾನ ನನಗೆ ಅತೀವ ನೋವನ್ನು ಹಾಗೂ ದಿಗ್ಭ್ರಮೆಯನ್ನುಂಟುಮಾಡಿತು. ಒಂದನೆಯ ವಿಚಾರವೆಂದರೆ ನೀವು ವೀರಶೈವ ಸಮುದಾಯದ ಬಗ್ಗೆ ಆಡಿದ ಅವಹೇಳನಕಾರಿ ಮಾತುಗಳು ಮತ್ತು ನೀಡಿರುವ ವ್ಯಾಖ್ಯಾನ. ಎರಡನೆ ವಿಚಾರವೆಂದರೆ ವರ್ಣಾಶ್ರಮ ಪದ್ಧತಿಯನ್ನು ತಾವು ಬಲವಾಗಿ ಪ್ರತಿಪಾದಿಸಿದ್ದು.

ಲಿಂಗಾಯತರನ್ನು ಎರಡು ಪಂಗಡಗಳನ್ನಾಗಿ ವಿಂಗಡಿಸಬಹುದು. ಒಂದು ಪಂಗಡಕ್ಕೆ 'ಪಂಚಾಕ್ಷರಿ'ಗಳೆಂದು, ಎರಡನೆಯದಕ್ಕೆ 'ಷಡಾಕ್ಷರಿಗಳು' ಎಂದು ಹೆಸರಿಸಬಹುದು ಪಂಚಾಕ್ಷರಿಗಳೆಂದರೆ ಏನೂ ಗೊತ್ತಿಲ್ಲ ಎಂಬ ಐದು ಅಕ್ಷರದವರು ಮತ್ತು ಷಡಾಕ್ಷರಿಗಳು ಎಂದರೆ ಏನೇನು ಗೊತ್ತಿಲ್ಲ ಎಂಬ ಆರು ಅಕ್ಷರದವರು ಎಂದಿದ್ದೀರಿ.

ಇದು ನೀವು ಲಿಂಗಾಯತರನ್ನು ಕುರಿತು ನೀಡಿದ ವ್ಯಾಖ್ಯಾನ. ಅಂದು ಅಲ್ಲಿ ಕೆ.ಎಸ್. ಈಶ್ವರಪ್ಪ, ಬಸವರಾಜ್, ಜಿ.ಎಂ. ರಾಜಾಚಾರ್, ಆಯನೂರು ಮಂಜುನಾಥ್, ರುಕ್ಮಯ್ಯ ಪೂಜಾರಿ; ಎಸ್. ಶಂಕರಪ್ಪ ಇನ್ನೂ ಕೆಲವರು ಹಾಜರಿದ್ದರು. ನಿಮ್ಮ ಈ ವ್ಯಾಖ್ಯಾನ ಕೇಳಿ ಪ್ರತಿಭಟಿಸಲಾಗದಷ್ಟು ದಿಗ್ಭ್ರಮೆಯಾಗಿ ಈ 'ಮಹಾನ್' ನಾಯಕರುಗಳೆಲ್ಲ ಕುಳಿತಿದ್ದರು. ಆದರೆ ನಿಮ್ಮ ಮಾತಿಗೆ ನಾನು ಕೂಡಲೇ ನನ್ನ ವಿರೋಧವನ್ನು ವ್ಯಕ್ತಪಡಿಸಿದೆ. ವಿಚಿತ್ರವೆಂದರೆ ಆಗಲೂ ನೀವು "ಇದು ನನ್ನ ಬಲವಾದ ವೈಯಕ್ತಿಕ ನಿಲುವು" ಎಂದೇ ನಿಮ್ಮ ಮಾತುಗಳನ್ನು ಸಮರ್ಥಿಸಿಕೊಂಡಿರಿ.



ಇಷ್ಟಕ್ಕೆ ನಿಲ್ಲಿಸದೆ ತಮ್ಮ ಈ ಅವಹೇಳನಕಾರಿ ವ್ಯಾಖ್ಯಾನವನ್ನು ಮುಂದುವರಿಸಿ ಲಿಂಗಾಯತ ಸಮುದಾಯದಿಂದ ಬಂದ ಮಹಾನ್ ಮುತ್ಸದ್ದಿ ಎಸ್. ನಿಜಲಿಂಗಪ್ಪ ಮತ್ತು ಈ ರಾಷ್ಟ್ರದ ಉಪರಾಷ್ಟ್ರಪತಿ ಸ್ಥಾನಕ್ಕೇರಿದ ಇದೇ ಸಮುದಾಯದ ಬಿ.ಡಿ. ಜತ್ತಿ ಅವರ ಬಗ್ಗೆಯೂ ನಿಮ್ಮದೇ ಆದ ವಿಚಾರಲಹರಿಗಳನ್ನು ತೇಲಿಬಿಟ್ಟಿರಿ. ನಿಮ್ಮ ಪ್ರಕಾರ ನಿಜಲಿಂಗಪ್ಪನವರು ಬ್ರಾಹ್ಮಣ ಹೆಣ್ಣುಮಗಳಾದ ಇಂದಿರಾ ಗಾಂಧಿಯವರನ್ನು ಎದುರು ಹಾಕಿಕೊಂಡು ರಾಜಕೀಯದಲ್ಲಿ ಮೂಲೆಗುಂಪಾದರು. ಅದೇ ಇಂದಿರಾ ಪರ ನಿಂತ ಜತ್ತಿ ಅವರು ಉಪರಾಷ್ಟ್ರಪತಿಗಳಾದರು. ಅಂದರೆ ಬ್ರಾಹ್ಮಣರನ್ನು ಯಾರೂ ಸಹ ಎದುರು ಹಾಕಿಕೊಳ್ಳಬಾರದೆಂಬುದು ನಿಮ್ಮ ಮಾತಿನ ತರ್ಕವಾಗಿತ್ತು.

ಇನ್ನೂ ಎರಡನೇ ವಿಚಾರವೆಂದರೆ ನೀವು ಅಂದು ವರ್ಣಾಶ್ರಮ ವ್ಯವಸ್ಥೆಯನ್ನು ಬಲವಾಗಿ ಸಮರ್ಥಿಸಿಕೊಂಡಿರಿ. ತಮ್ಮ ಪ್ರಕಾರ ವರ್ಣಾಶ್ರಮ ವ್ಯವಸ್ಥೆ ಭಗವಂತನ ಸೃಷ್ಟಿ!

ಈ ಸಂದರ್ಭದಲ್ಲಿ ನೀವು ನಿಮ್ಮನ್ನು ಪಕ್ಷದ ತಲೆ ಬ್ರಾಹ್ಮಣ ಎಂದು ಸ್ವಯಂ ಬಿಂಬಿಸಿಕೊಂಡಿರಿ. ಬಾಹುಗಳಾದ 4 ಉದರವನ್ನು (ಕ್ಷತ್ರಿಯ ಮತ್ತು ವೈಶ್ಯ) ಎಂದು ವ್ಯಾಖ್ಯಾನಿಸಿ ಇನ್ನಿತರೆ ಎಲ್ಲಾ ಜಾತಿ, ಲಿಂಗಾಯತ, ಒಕ್ಕಲಿಗ, ಕುರುಬ, ದಲಿತ ಮತ್ತು ಇತರ ಸಮುದಾಯಗಳನ್ನು ಪಕ್ಷದ ಕಾಲುಗಳೆಂದು ವ್ಯಾಖ್ಯಾನಿಸಿದ್ದೀರಿ. ಮುಂದುವರಿದು "ರಾಜಕೀಯ ಕಾರಣಗಳಿಗಾಗಿ ಈ ವಿಚಾರಧಾರೆಯನ್ನು ಬಹಿರಂಗವಾಗಿ ಮಂಡಿಸಲು ಸಾಧ್ಯವಿಲ್ಲ" ಎಂದೂ ಇದೇ ಸಂದರ್ಭದಲ್ಲಿ ಹೇಳಿದ್ದೀರಿ.

ಇವೆಲ್ಲವನ್ನೂ ಕೇಳಿದ ನಂತರ ಮನಸ್ಸಿಗೆ ಅತೀವ ನೋವು ಉಂಟಾಗಿದೆ. ತಮ್ಮಂತಹ ಕೊಳಕು ಮನಸ್ಸಿನ ಸಂಕುಚಿತ ಮನೋಭಾವದ ಮತ್ತು ಕೀಳು ಅಭಿರುಚಿಯ ವ್ಯಕ್ತಿತ್ವವನ್ನು, ವ್ಯಕ್ತಿಯನ್ನು ವಾಜಪೇಯಿಯವರು ತಮ್ಮ ಸಂಪುಟದಲ್ಲಿ ಅದ್ಯಾವ ಬಗೆಯಲ್ಲಿ ಸಹಿಸಿಕೊಂಡಿದ್ದಾರೆ ಎಂಬುದೇ ಅತ್ಯಂತ ದೊಡ್ಡ ಆಶ್ಚರ್ಯಕರ ಸಂಗತಿ. ಧಿಕ್ಕಾರವಿರಲಿ ನಿಮ್ಮ ಈ ಕೊಳಕು ಮನಸ್ಸಿಗೆ. ಧಿಕ್ಕಾರವಿರಲಿ ನಿಮ್ಮ ಈ ಅನ್ಯಜಾತಿಯ ದ್ವೇಷ ಭಾವನೆಗೆ.

-ಇಂತಿ,

ಬಿ.ಬಿ. ಶಿವಪ್ಪ

ಈ ಪತ್ರವನ್ನು ಓದಿದ ನಂತರ ಲಿಂಗಾಯತರು ಸೇರಿದಂತೆ ಬ್ರಾಹ್ಮಣೇತರ ಜಾತಿಗಳ ಬಗ್ಗೆ ಬಿಜೆಪಿ ಪಕ್ಷಕ್ಕೆ ಮತ್ತದರ ನಾಯಕರಿಗೆ ಎಂತಹ ತುಚ್ಛ ಭಾವನೆ ಇದೆ ಎಂದು ಎಲ್ಲರಿಗೂ ಅರ್ಥವಾಗುತ್ತದಲ್ಲವೇ?

ನಾವಿಲ್ಲಿ ಮುದ್ರಿಸಿರುವ ಶಿವಪ್ಪನವರು ಬರೆದ ಪತ್ರ ಕಳೆದ ಚುನಾವಣಾ ಸಮಯದಲ್ಲಿ ವಿಜಯ ಕರ್ನಾಟಕದ (ಏಪ್ರಿಲ್ 20, 2004) ಸಂಚಿಕೆಯಲ್ಲಿ ಪ್ರಕಟವಾಗಿತ್ತು, ಲಿಂಗಾಯತರಿಗೆ ಮತ್ತು ಇತರ ಜಾತಿಯವರ ಮನಸ್ಸಿಗೆ ಘಾಸಿಗೊಳಿಸುವ ವಿಚಾರ ಯಾವುದೆಂದರೆ 1999 ರಲ್ಲಿ ಈ ಪ್ರಕರಣ ನಡೆದು ಶಿವಪ್ಪ ತಮ್ಮೆ ಅಸಮಾಧಾನವನ್ನು ತೋಡಿಕೊಂಡಾಗಲೂ ಅನಂತಕುಮಾರ್ ತನ್ನ ಈ ತುಚ್ಛವರ್ತನೆ ಬಗ್ಗೆ ವಿಷಾದ ವ್ಯಕ್ತಪಡಿಸುವುದಿರಲಿ, ಶಿವಪ್ಪನವರ ಪತ್ರಕ್ಕೆ ಕನಿಷ್ಠ ಪ್ರತಿಕ್ರಿಯೆಯನ್ನೂ ನೀಡಿರಲಿಲ್ಲ.

ಹಾಗೆಯೇ ಇದನ್ನು 2004 ರಲ್ಲಿ ವಿ.ಕ. ಪ್ರಕಟಿಸಿದಾಗಲೂ ಆತ ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡಿದ್ದೇನೆಂದು ಸ್ಪಷ್ಟಪಡಿಸಿರಲಿಲ್ಲ. (ಅಂದಹಾಗೆ ಅಂದು ವಿ.ಕ.ದಂತಹ ಚಿಡ್ಡಿ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟಗೊಳ್ಳಲು ಕಾರಣವಿತ್ತು. ಅಂದಿನ ವಿ.ಕ.ದ ಮಾಲೀಕ ವಿಜಯ್ ಸಂಕೇಶ್ವರ್‌ಗೂ ಅನಂತಕುಮಾರ್‌ಗೂ ವೈರತ್ವ ಏರ್ಪಟ್ಟಿತ್ತು, ಆದರೆ ಇವತ್ತು ಸಂಕೇಶ್ವರ್ ಎಂಬ ಮತ್ತೋರ್ವ ಲಿಂಗವಂತ ಕೂಡ ಬಿಜೆಪಿಗೆ ಮರಳಿದ್ದಾರೆ).

ಇದೆಲ್ಲದರ ಅರ್ಥ ಇಷ್ಟೇ. ಯಡಿಯೂರಪ್ಪ, ಬಿ.ಬಿ. ಶಿವಪ್ಪ ಮತ್ತು ವಿಜಯ್ ಸಂಕೇಶ್ವರ್‌ರಂತಹ ಅಧಿಕಾರದಾಹಿಗಳಿಗೆ ಬಿಜೆಪಿ ಪಕ್ಷ ಲಿಂಗಾಯತ ಸಮುದಾಯವನ್ನಾಗಲಿ, ಕೊನೆಗೆ ಸ್ವತಃ ತಮ್ಮನ್ನಾಗಲಿ ಎಷ್ಟೇ ಅವಮಾನಪಡಿಸಿದರೂ ಪರವಾಗಿಲ್ಲ. ಆದರೆ ಅಧಿಕಾರದಾಹಿಗಳಲ್ಲದ, ಬಸವತತ್ವ ಪಾಲಿಸುವ, ಲಿಂಗಧರ್ಮ ಅನುಸರಿಸುವ ನಿಜವಾದ ಲಿಂಗಾಯತರಿಗೇನೂ ತಲೆ ಕೆಟ್ಟಿಲ್ಲ. ಲಿಂಗಾಯತರನ್ನು ಇಷ್ಟು ಅವಹೇಳನಕಾರಿಯಾಗಿ ನೋಡುವ ಪಕ್ಷಕ್ಕೆ ಮತ ಹಾಕಲು ಲಿಂಗಾಯತರು ಹುಚ್ಚರೇನಲ್ಲ. ಹಾದಿ ಬೀದಿಯಲ್ಲಿ "ನನಗೆ ದ್ರೋಹ ಮಾಡಿದರು" ಎಂದು ಜನತಾದಳದ ವಿರುದ್ಧ ಅರಚಾಡುವ ಯಡಿಯೂರಪ್ಪ "ನನ್ನ ಸಮುದಾಯವನ್ನು ಅವಹೇಳನ ಮಾಡಬೇಡ" ಎಂದು ಅನಂತಕುಮಾರ್‌ನನ್ನು ತರಾಟೆಗೆ ತೆಗೆದುಕೊಳ್ಳುವ ತಾಕತ್ತು ಇಲ್ಲದ ಮನುಷ್ಯ. ಆತನನ್ನು ಲಿಂಗಾಯತರ ನಾಯಕ ಎಂದಿರಲಿ, ಆತನೋರ್ವ ಲಿಂಗಾಯತ ಎಂದು ಒಪ್ಪಿಕೊಂಡರೂ ಅದು ವೀರಶೈವರು ತಮಗೆ ತಾವೇ ಮಾಡಿಕೊಳ್ಳುವ ಅವಮಾನ.

ಲಿಂಗಾಯತರು ನಿಜವಾಗಲೂ ವೀರಶೈವರಾಗಿದ್ದರೆ ಈ ಚುನಾವಣೆಯಲ್ಲಿ ಬ್ರಾಹ್ಮಣಶಾಹಿಗಳ ಬಿಜೆಪಿಯನ್ನು ಸೋಲಿಸಿ ತಮ್ಮ ಸಮುದಾಯದ ಸ್ವಾಭಿಮಾನವನ್ನು ಮೆರೆಯಬೇಕಿದೆ.

(ವಿ.ಸೂ. : ಈ ಲೇಖನದ ಜೆರಾಕ್ಸ್ ಪ್ರತಿಗಳನ್ನು ಯಾರು ಬೇಕಾದರೂ ಹಂಚಬಹುದು)

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಯಾವುದೇ ಪಕ್ಷ ಕೇವಲ ಒಂದು ಜಾತಿಯ ಮತದಾರರನ್ನು ನಂಬಿಕೊಂಡು ಎಲೆಕ್ಷನ್ ಸೆಣಸಿಲ್ಲ. ರಾಜ್ಯದ 224 ಕ್ಷೇತ್ರಗಳಲ್ಲಿ ಒಂದೇ ಜಾತಿ ಅಥವಾ ಧರ್ಮದ ಮತದಾರರೇ ನಿರ್ಣಾಯಕವಾಗಿರುವ ಬೆರಳೆಣಿಕೆಯಷ್ಟು ಕ್ಷೇತ್ರಗಳಷ್ಟೇ ಸಿಗಬಹುದು. ಉಳಿದಂತೆ ಸಕಲೆಂಟು ಜಾತಿಯ ಮತದಾರರೂ ಅಲ್ಲಿರುತ್ತಾರೆ, ಕೆಲವೆಡೆ ಕೆಲವೊಂದು ಜಾತಿಯ ಮತದಾರರ ಸಂಖ್ಯೆ ಬೇರೆಯುವರಿಗಿಂತ ಜಾಸ್ತಿ ಇರುತ್ತದೆ ಅಷ್ಟೆ.

ಆದರೆ ಬಿಜೆಪಿಗಳು ಈ ಬಾರಿ ಎಂಥ ಯಡವಟ್ಟು ರಾಜಕೀಯ ಮಾಡಿದ್ದಾರೆಂದರೆ ಕೇವಲ ಲಿಂಗಾಯತರನ್ನು ಒಲಿಸಿಕೊಂಡರೆ ಸಾಕು ಉತ್ತರ ಕರ್ನಾಟಕದ ಮೂರನೇ ಹಂತದ ಚುನಾವಣೆಯಲ್ಲಿ ಸೀಟುಗಳನ್ನು ಗೆದ್ದು ಬಿಡಬಹುದೆಂದು ನಂಬಿಕೊಂಡಿದ್ದಾರೆ. ಇದು ನಿಜವೋ ಸುಳ್ಳೋ ಅದು ಬೇರೆ ಮಾತು. ಆದರೆ ಬಿಜೆಪಿ ಹೀಗೆ ಲಿಂಗಾಯತರೆಲ್ಲಾ ಬಿಜೆಪಿಯ ಹಿಂದಿದ್ದಾರೆಂದು ಬಿಂಬಿಸಿರುವ ಕಾರಣ ಲಿಂಗಾಯತೇತರ ಜಾತಿಗಳೆಲ್ಲಾ ಬಿಜೆಪಿ ವಿರುದ್ಧ ಧ್ರುವೀಕರಣಗೊಂಡಿದ್ದಾರೆ.

ಭವಿಷ್ಯದಲ್ಲಿ ಇದರಿಂದ ತೊಂದರೆಯಾಗುವುದು ಸ್ವತಃ ಲಿಂಗಾಯತರಿಗೇ ವಿನಃ ಬಿಜೆಪಿಗಳಿಗಲ್ಲ. ಏಕೆಂದರೆ ಮುಂದೆ ಶಾಸಕ-ಮಂತ್ರಿ-ಸಂಸದರಾಗಬೇಕೆಂಬ ಅಪೇಕ್ಷೆ ಇರುವ ಅನೇಕ ಯುವ ಲಿಂಗಾಯತ ಲೀಡರ್‌ಗಳಿಗೆ ಈ ಜಾತಿ ಧ್ರುವೀಕರಣದಿಂದ ತೊಂದರೆಯಾಗುವ ಸಂಭವವಿದೆ. ಮುಂಬೈ ಕರ್ನಾಟಕದ ಧಾರವಾಡ, ಗದಗ, ಹಾವೇರಿ, ಬಿಜಾಪುರ, ಬೆಳಗಾಂ ಜಿಲ್ಲೆಗಳಲ್ಲಿ ಲಿಂಗಾಯತ ಜನಸಂಖ್ಯೆಯಿರುವಷ್ಟೆ ಕುರುಬರು, ದಲಿತ ಮತದಾರರಿದ್ದಾರೆ. ಹೈದರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗಾಗಳಲ್ಲೂ ಲಿಂಗಾಯತರಿಗೆ ಸರಿಸಮರಾಗಿ ದಲಿತ ಹಾಗೂ ಮುಸ್ಲಿಂ ಮತದಾರರಿದ್ದಾರೆ. ಈ ವಾಸ್ತವ ಸ್ವತಃ ಲಿಂಗಾಯತರಿಗೂ ಗೊತ್ತಿದೆ. ಪರಿಸ್ಥಿತಿ ಹೀಗಿರುವಾಗ ಇವತ್ತು ಲಿಂಗಾಯತರೆಲ್ಲಾ ಬಿಜೆಪಿ ಹಿಂದೆ ನಿಂತರೆ ನಾಳೆ ಇನ್ನೊಂದು ಎಲೆಕ್ಷನ್ ಬರುವ ವೇಳೆಗೆ ಅನ್ಯ ಜಾತಿಗಳೆಲ್ಲಾ ಲಿಂಗಾಯತರ ವಿರುದ್ಧ ಒಗ್ಗಟ್ಟಾಗಿ ನಿಂತುಬಿಟ್ಟಿರುತ್ತಾರೆ.

ಆಗ ಲಿಂಗಾಯತ ಮುಖಂಡರೇನು ಮಾಡಬೇಕು?

ಈ ಬಿಜೆಪಿಗಳನ್ನು ನಂಬಿಕೊಂಡು ಬರೀ ಲಿಂಗಾಯತ ಜಾತಿ ರಾಜಕಾರಣಕ್ಕೇ ತಮ್ಮನ್ನು ಸೀಮಿತ ಮಾಡಿಕೊಂಡರೆ ಕಾಂಗ್ರೆಸ್ ಹಾಗೂ ದಳದವರು ನೋಡಿಕೊಂಡು ಸುಮ್ಮನಿರುತ್ತಾರಾ?

ಇವತ್ತಿನ ರಾಜಕಾರಣ ಕೇವಲ ಒಂದೇ ಜಾತಿ ಅಥವಾ ಒಂದೇ ಪಕ್ಷದವರ ನಿಯಂತ್ರಣದಲ್ಲಿಲ್ಲ. ಸ್ವತಃ ದಲಿತ ನಾಯಕರೇ ಹುಟ್ಟು ಹಾಕಿರುವ ಬಿಎಸ್‌ಪಿ ಕೇವಲ ದಲಿತರ ಓಟು ನಂಬಿಕೊಂಡರೆ ಅಧಿಕಾರ ಸಿಗುವುದಿಲ್ಲವೆಂದು ಅರ್ಥ ಮಾಡಿಕೊಂಡು ಈಗ ಮೇಲ್ಜಾತಿ ನಾಯಕರನ್ನು ತನ್ನ ತಕ್ಕೆಗೆ ತೆಗೆದುಕೊಳ್ಳುತ್ತಿದೆ. Social Engineering ಎಂದು ಕರೆಯಲಾಗುವ ಈ ತಂತ್ರದಲ್ಲಿ ದಳ-ಕಾಂಗ್ರೆಸ್ ಸಹ ಹಿಂದೆ ಬಿದ್ದಿಲ್ಲ.


ದೇವೇಗೌಡರು ಅಷ್ಟೆಲ್ಲಾ ಆಟ ಆಡಿದರೂ ಇವತ್ತಿಗೆ ಜೆಡಿಎಸ್ ಅನ್ನು ಕೇವಲ ಒಕ್ಕಲಿಗರ ಪಕ್ಷವೆಂದು ಆರೋಪಿಸಲು ಆಗುತ್ತಿಲ್ಲ. ಅದೇ ರೀತಿ ಕಾಂಗ್ರೆಸ್ ಕೂಡ ಯಾವುದೇ ಒಂದೇ ಜಾತಿಯ ಬೆಂಬಲದಿಂದ ರಾಜಕೀಯ ಮಾಡುತ್ತಿಲ್ಲ. ಇದನ್ನೇ ಇನ್ನೊಂದು ರೀತಿ ಹೇಳಬೇಕೆಂದರೆ ರಾಜ್ಯದ ಪ್ರಬಲ ಜಾತಿಗಳಾದ ಲಿಂಗಾಯತರೂ, ಒಕ್ಕಲಿಗ, ಕುರುಬ, ಮುಸ್ಲಿಂ ಹಾಗೂ ದಲಿತ ಜನಾಂಗದವರು ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ಕೇವಲ ಒಂದೇ ಪಕ್ಷವನ್ನು ನಂಬಿಕೊಂಡಿಲ್ಲ. ತಮ್ಮ ಇಡೀ ಸಮುದಾಯದ ಬೆಂಬಲವನ್ನು ಯಾವುದೋ ಒಂದು ಪಾರ್ಟಿಗೆ ನೀಡಿಯೂ ಇಲ್ಲ. ಹೀಗಿರುವಾಗ ಈ ಬಿಜೆಪಿಗಳು ಲಿಂಗಾಯತರು ಪೂರ್ತಿ ತನ್ನ ಹಿಂದೆ ಇದ್ದಾರೆಂದು ಬಿಂಬಿಸುವ ಮೂಲಕ ಅವರನ್ನು ಅನ್ಯರಿಂದ ಬೇರ್ಪಡಿಸಿ ಅನಾಥರಾಗಿಸಲು ಹೊರಟಿದ್ದಾರೆ ಎನ್ನದೇ ವಿಧಿಯಿಲ್ಲ.

'ಲಿಂಗಾಯತರು ಬಿಜೆಪಿ ಗುಲಾಮರಲ್ಲ'

ಅಖಿಲ ಭಾರತ ವೀರಶೈವ ಮಹಾಸಭಾ ಲಿಂಗಾಯತ ಧರ್ಮೀಯರ ಒಂದು ಬಲಿಷ್ಠ ಸಂಘಟನೆ. 'ಲಿಂಗಾಯತರು ಮೂರ್ಖರು' ಎಂಬ ಬಿಜೆಪಿ ನಾಯಕ ಅನಂತಕುಮಾರ್ ಹೇಳಿಕೆಯ ಬಗ್ಗೆ ರಾಜ್ಯಾದ್ಯಂತ ಆಕ್ರೋಶದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ವೀರಶೈವ ಮಹಾಸಭಾದ ಕರ್ನಾಟಕದ ಪ್ರಧಾನ ಕಾರ್ಯದರ್ಶಿಯಾಗಿರುವ ವಾಗೀಶ್ ಪ್ರಸಾದ್‌ರ ಅಭಿಪ್ರಾಯವನ್ನು ಇಲ್ಲಿ ಪ್ರಕಟಿಸಿದ್ದೇವೆ.



ಬಿಜೆಪಿ ಸ್ವಾರ್ಥಕ್ಕೆ ಲಿಂಗಾಯತರು ಬಲಿ



ಲಿಂಗಾಯತರು ಜುಜುಬಿ ಯಡಿಯೂರಪ್ಪನ ಮುಖ ನೋಡಿಕೊಂಡು ಇವತ್ತು ಬಿಜೆಪಿ ಹಿಂದೆ ಹೊರಟುಬಿಟ್ಟರೆ ನಾಳೆ ಅವರ ಹಿಂದೆ ಬೇರೆ ಯಾವ ಜಾತಿಯವರೂ ಬರುವುದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು

...ಗೆ ತಮ್ಮ ಚುನಾವಣಾ ಸ್ವಾರ್ಥಕ್ಕಾಗಿ ಲಿಂಗಾಯತರ ...ಯನ್ನು ಬಲಿ ಕೊಡುತ್ತಿರುವ ಬಿಜೆಪಿಗಳು ಆಳದಲ್ಲಿ ಲಿಂಗಾಯತ ... ವಿರೋಧಿಗಳೇ ಆಗಿದ್ದಾರೆ.

...06ರಲ್ಲಿ ಈ ಬಿಜೆಪಿಗಳು ಇಡೀ ರಾಜ್ಯದ ಉದ್ದಗಲಕ್ಕೂ ... ಸಮಾಜೋತ್ಸವ' ನಡೆಸಿದರಲ್ಲ ಆಗ ಬರೀ ಲಿಂಗಾಯತರನ್ನಷ್ಟೇ ... ಮೆರೆಸಿದ್ದರಾ?

...ವಲ್ಲ.

ಇವರಿಗೆ ಸಕಲೆಂಟು ಜಾತಿಯವರ ಬೆಂಬಲವೂ ಬೇಕಿತ್ತು. ...ಈಗ ಎಲೆಕ್ಷನ್ ಟೈಂನಲ್ಲಿ ಮಾತ್ರ ಲಿಂಗಾಯತ ಸೆಂಟಿಮೆಂಟ್ ...ತ್ತಿ ತಮ್ಮ ಓಟಿನ ರಾಜಕೀಯ ನಡೆಸುತ್ತಿದ್ದಾರೆ. ಯಡಿಯೂರಪ್ಪನೇ ...ನ ಸಿಎಂ ಎಂದು ಹೇಳಿಕೊಂಡ ಮಾತ್ರಕ್ಕೆ ಬಿಜೆಪಿ ಲಿಂಗಾಯತರ ...ದಾಗಿಬಿಡುತ್ತದೆಯಾ?

...ೇ ಯಡ್ಡಿ ಹಣಕಾಸು ಸಚಿವನಾಗಿದ್ದಾಗ ಬ್ರಾಹ್ಮಣ ಮಠಗಳಿಗೆ ... ಕೋಟಿ ಅನುದಾನ ಕೊಟ್ಟದ್ದನೇ ವಿನಃ ವೀರಶೈವ ವಿದ್ಯಾರ್ಥಿ ...ಗಳಿಗೆ ಹಣ ಕೊಟ್ಟರಲಿಲ್ಲ. ಬಿಜೆಪಿಗಳ ಹಿಂದೂತ್ವದ ಅಬ್ಬರದಲ್ಲಿ ... ಪರಂಪರೆ, ವೈಶಿಷ್ಟ್ಯ ಹೊಂದಿರುವ ಲಿಂಗಾಯತ ಧರ್ಮದ ...ಹಾಗೂ ಅನನ್ಯತೆಗೆ ಭಂಗ ಬರುತ್ತಿದೆ. ವೀರಶೈವ ಧರ್ಮೀಯರೆನ್ನೆಲ್ಲಾ ...ಸೇಲಾಗಿ ಹಿಂದೂಗಳೆಂದು ಆಪೋಶನ ತೆಗೆದುಕೊಳ್ಳಲೂ ಬಿಜೆಪಿ ...ದೆ.

...ಗಾಯತರು ಒಂದು ಸಾರಿ ಇಡೀ ರಾಜ್ಯದ ಇನ್ನಿತರ ಜಾತಿಗಳ ... ನೋಡಲಿ. ಒಕ್ಕಲಿಗರಾಗಲಿ ಅಥವಾ ಕುರುಬರಾಗಲಿ ತಮ್ಮ ...ಗಳ ರಕ್ಷಣೆಗಾಗಿ ಒಂದೇ ಪಾರ್ಟಿ ನಂಬಿಕೊಂಡಿಲ್ಲ.

...ಬರಿಗೆ ಕಾಂಗ್ರೆಸ್‌ನಲ್ಲಿ ಸಿದ್ಧರಾಮಯ್ಯ, ಎಚ್. ವಿಶ್ವನಾಥ್, ...ಎ. ರೇವಣ್ಣ ಇದ್ದಾರೆ. ಬಿಜೆಪಿಯೊಳಗೆ ಈಶ್ವರಪ್ಪ ಹಾಗೆ ದಳದಲ್ಲೂ ...ಲೀಡರ್‌ಗಳಿದ್ದಾರೆ.

...ೇ ರೀತಿ ಒಕ್ಕಲಿಗರೂ ಸಹ ಎಲ್ಲಾ ಪಾರ್ಟಿಗಳಲ್ಲೂ ಹಂಚಿ ಹೋಗಿದ್ದಾರೆ. ಇದು ಕೇವಲ ಲೀಡರ್‌ಗಳ ವಿಚಾರ ಅಲ್ಲ, ಮತದಾರರೂ ಕೂಡ. ಇವರೆಲ್ಲಾ ತಂತಮ್ಮ ಕ್ಷೇತ್ರಗಳಲ್ಲಿ ಯೋಗ್ಯ ಅಭ್ಯರ್ಥಿಯನ್ನು ನೋಡಿ, ಜಾತಿ ಲೆಕ್ಕಾಚಾರವನ್ನು ಗಣನೆಗೆ ತೆಗೆದುಕೊಂಡು ಯಾವ ಪಾರ್ಟಿಗೆ ತಮ್ಮ ಬೆಂಬಲ ಎಂದು ನಿರ್ಧರಿಸುತ್ತಿದ್ದಾರೆ.

ವಾಸ್ತವ ಸ್ಥಿತಿ ಹೀಗಿರುವಾಗ ಲಿಂಗಾಯತರು ಜುಜುಬಿ ಯಡಿಯೂರಪ್ಪನ ಮುಖ ನೋಡಿಕೊಂಡು ಇವತ್ತು ಬಿಜೆಪಿ ಹಿಂದೆ ಹೊರಟುಬಿಟ್ಟರೆ ನಾಳೆ ಅವರ ಹಿಂದೆ ಯಾರೂ ಬರುವುದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಇಷ್ಟಕ್ಕೂ ಬಿಜೆಪಿಗೆ ಈ ಬಾರಿ ಸರಳ ಬಹುಮತವೂ ಸಿಗುವುದಿಲ್ಲ ಎಂಬುದು ಖಚಿತ. ಶಿಕಾರಿಪುರದಲ್ಲಿ ಆಕಸ್ಮಾತ್ ಯಡಿಯೂರಪ್ಪ ಗೆದ್ದರೂ ಗೆಲ್ಲಬಹುದು. ಆದರೆ ಇಡೀ ರಾಜ್ಯ ಬಿಜೆಪಿಗಳ ಕೈಗೆ ಸಿಗುತ್ತಿಲ್ಲ.

ಲಿಂಗಾಯತರು ಈಗ ಸ್ಪಷ್ಟವಾಗಿ ಯೋಚಿಸಬೇಕಾದ್ದು ಏನೆಂದರೆ:

ಅವರು ಬ್ರಾಹ್ಮಣಶಾಹಿಗಳ ಬಿಜೆಪಿ ಸೇರಿ ಇಡೀ ಸಮಾಜದಿಂದ isolate ಆಗಿ ಬೇರೆಲ್ಲರ ಬೆಂಬಲ ಕಳೆದುಕೊಳ್ಳುತ್ತಾರಾ?

ಲಿಂಗಾಯತೇತರ ಜಾತಿಗಳವರು ಲಿಂಗಾಯತರ ವಿರುದ್ಧ ಒಂದುಗೂಡುವಂಥ ಅನಗತ್ಯ ಕಿರಿಕಿರಿ ಸೃಷ್ಟಿಸಿಕೊಳ್ಳುತ್ತಾರಾ?

ಲಿಂಗಾಯತರು ಬಸವನ ಆಶಯಗಳಿಗೆ ಬದ್ಧರಾಗುತ್ತಾರಾ ಅಥವಾ ನರೇಂದ್ರ ಮೋದಿಯ ಕಾಲಾಳುಗಳಾಗುತ್ತಾರಾ?


ಕಾಯಕವೇ ಕೈಲಾಸವೆಂದ ಬಸವನಂತೆ ಇತರ ಕಾಯಕ ಜೀವಿಗಳೊಂದಿಗೆ ಒಂದುಗೂಡುತ್ತಾರಾ ಅಥವಾ ಯಡ್ಡಿಯ ಕೈಯಲ್ಲಿ ಕೊಲ್ಲುವ ತ್ರಿಶೂಲಗಳಾಗುತ್ತಾರಾ?

ಅಥವಾ

ಪಕ್ಷಾತೀತವಾಗಿ, ನಿಷ್ಪಕ್ಷಪಾತವಾಗಿ ಅರ್ಹರನ್ನು ಬೆಂಬಲಿಸುತ್ತಾರಾ? ಎಂಬುದಷ್ಟೆ. ಬಿಜೆಪಿಯ ತ್ರಿಶೂಲ ರಾಜ್ಯ ಲಿಂಗಾಯತರ ಪಾಲಿಗೆ 'ಹೊನ್ನ ಶೂಲ'ವಾಗಲಿದೆ. ಶೂಲ ಹೊನ್ನಿನದಾದರೇನು ಇರಿಯದೇ ಬಿಟ್ಟೀತೆ!

■ ಬಿಳಿದಾಳೆ ಪಾರ್ವತೀಶ್

ಲಿಂಗಾಯತರಲ್ಲಿ ಒಡಕು ತಂದ ಬಿಜೆಪಿ



...ರಶೈವರಲ್ಲಿ ಸಾದರು, ಪಂಚಮಸಾಲಿ, ಬಣಜಿಗ, ರೆಡ್ಡಿ, ಪಂಚಾಚಾರ್ಯರೆಂಬ ನಾನಾ ಒಳಪಂಗಡಗಳಿವೆ. ಇವರೆಲ್ಲರಿಗೂ ಬೇರೆಬೇರೆ ಪರಂಪರೆಗಳಿವೆ. ...ಗಲೂ ಲಿಂಗಾಯತರಲ್ಲಿ ಒಗ್ಗಟ್ಟು ತರುವ ಪ್ರಯತ್ನಗಳು ನಡೆದೇ ಇವೆ.


...ರೆ ಅಂತ ಸದಾಶಯಗಳಿಗೆ ಕಲ್ಲು ಹಾಕಿ ಒಳಜಾತಿ ಗುಂಪುಗಾರಿಕೆ ಬೆಳೆಸಲು ಬಿಜೆಪಿ ಕೊಡುಗೆ ನೀಡುತ್ತಿದೆ.

...ಾಹರಣೆಗೆ

...ಂಬೈ ಕರ್ನಾಟಕದ ಬಹುತೇಕ ಭಾಗದಲ್ಲಿ ಅಂದರೆ ಧಾರವಾಡ, ಹಾವೇರಿ, ಗದಗ, ಬಿಜಾಪುರ, ಬೆಳಗಾಂಗಳಲ್ಲಿ ಪಂಚಮಸಾಲಿ ಲಿಂಗಾಯತರ ...್ಯೆ ಜಾಸ್ತಿ ಇದ್ದರೂ ಬಿಜೆಪಿಗಳು ಅವರನ್ನು ನಿರ್ಲಕ್ಷಿಸಿ ಕೇವಲ ಅಲ್ಪಸಂಖ್ಯಾತ ಬಣಜಿಗ ಲಿಂಗಾಯತರಿಗೆ ಮಾತ್ರ ಮಣೆ ಹಾಕುತ್ತಿದೆ. ಜಗದೀಶ್ ಶೆಟ್ಟರ್, ... ಸಂಕೇಶ್ವರ್, ಬಸು ಬೊಮ್ಮಾಯಿ, ಚಂದ್ರಕಾಂತ ಬೆಲ್ಲದ ಥರದವರಿಗೆ ಮಾತ್ರ ಅವಕಾಶ ಕೊಟ್ಟು ಬೆಳೆಸಿದೆ. ಆದರೆ ಬಹುಸಂಖ್ಯಾತರಾದ ...ಸಾಲಿಗಳನ್ನು ಬಿಜೆಪಿ ತುಳಿದು ಮೂಲೆಗುಂಪು ಮಾಡಿಬಿಟ್ಟಿದೆ. ಇದರಿಂದ ಕೆರಳಿರುವ ಪಂಚಮಸಾಲಿ ಲಿಂಗಾಯತರು ಈಗ ಬಿಜೆಪಿ ... ಸೇಡು ತೀರಿಸಲು ಕಾಯುತ್ತಿದ್ದಾರೆ. ಮಾತ್ರವಲ್ಲ ಲಿಂಗಾಯತರ ಇನ್ನೊಂದು ಉಪಜಾತಿಯಾದ ಬಣಜಿಗರ ವಿರುದ್ಧವೇ ತಿರುಗಿ ...ೆ.

...ಪಿಗೆ ದುಡ್ಡಿರುವ ಲಿಂಗಾಯತರ ಬಗ್ಗೆ ಮಾತ್ರ ಪ್ರೀತಿ, ಉಳಿದ ಲಿಂಗಾಯತರು ಅವರಿಗೆ ಕಾಲಕಸ.

ಸಂದರ್ಶನ



...: ಅನಂತಕುಮಾರ್ ಅಭಿಪ್ರಾಯದ ಬಗ್ಗೆ ನೀವೇನು ಹೇಳುತ್ತೀರಿ?

... ಪ್ರಸಾದ್: ಇದು ಬಹಳ ದುರದೃಷ್ಟಕರ ಹಾಗೂ ಅವಹೇಳನಕಾರಿ ನಿಲುವು.

...ಯತರೆಲ್ಲಾ ಬ್ರಾಹ್ಮಣರ ಸೇವಕರೆಂಬಂತೆ ಸಂಘ ಪರಿವಾರ ಭಾವಿಸಿರುವಂತಿದೆಯಲ್ಲಾ?

ನೋಡಿ, ಈ ಅನಂತಕುಮಾರ್‌ಗೆ ಪೂರ್ತಿ ತಲೆ ಕೆಟ್ಟಿದೆ. ಮುಂದೆ ಪಾರ್ಲಿಮೆಂಟ್ ಎಲೆಕ್ಷನ್ ಬಂದಾಗ ನಾವು ಅವರಿಗೆ ಸರಿಯಾದ ಪಾಠ ಕಲಿಸುತ್ತೇವೆ.

... ಲಿಂಗಾಯತರ ಪಾಲಿಗೆ ಉಳಿದುಕೊಂಡಿರುವುದು ಬಿಜೆಪಿ ಪಕ್ಷ ಒಂದೇ ...ಂತೆ ಬಿಜೆಪಿ ಪ್ರಚಾರ ನಡೆಸುತ್ತಿದೆ. ಇದು ವಾಸ್ತವವಾ?

...ಕುಲ ತಪ್ಪು, ಲಿಂಗಾಯತರಿಗೆ ಯಾವುದೋ ಒಂದೇ ಒಂದು ಪಕ್ಷ ಅಂತಿಲ್ಲ. ... ನೋಡಿದರೆ ಕಾಂಗ್ರೆಸ್ ಪಾರ್ಟಿಯಿಂದ ನಿಜಲಿಂಗಪ್ಪ, ಬಿ.ಡಿ. ಜತ್ತಿ, ವೀರೇಂದ್ರ ...ೀಲ್ ಮುಖ್ಯಮಂತ್ರಿಯಾಗಿದ್ದಾರೆ. ಅದೇ ರೀತಿ ಜಾತ್ಯತೀತ ಜನತಾದಳದಿಂದ ...ಆರ್. ಬೊಮ್ಮಾಯಿ, ಜೆ.ಎಚ್. ಪಟೇಲ್ ಕೂಡಾ ಸಿಎಂಗಳಾಗಿದ್ದರು. ಈಗ ...ಪಿ. ವೀರಶೈವರ ಹೆಸರೇಳಿಕೊಂಡು ಅಧಿಕಾರ ಕಬಳಿಸಲು ಸಂಚು ನಡೆಸುತ್ತಿದೆ

...ಕುಮಾರ್ ಲಿಂಗಾಯತರನ್ನು ಪಾದುಕ್ಕೆ... ಅಂತ ಗೇಲಿ ಮಾಡಿದ್ದಾರಲ್ಲ?

...ಿ, ಬ್ರಾಹ್ಮಣರಿಗೆ ವೇದ-ಉಪನಿಷತ್ತು ಹೇಗೆ ಪವಿತ್ರವೋ ಅದೇ ರೀತಿ ನಮಗೂ ಇವು ಮಹತ್ವದವು. ...್ಟ, ಪಂಚಾಮೃತಗಳು, ಶಿವನ ಶಕ್ತಿಯ ಪ್ರತೀಕ. ಅನಂತಕುಮಾರ್ ಮಾತುಗಳೆಲ್ಲಾ ಅಸಂಬದ್ಧ ಅಷ್ಟೆ.

...ಯೊಳಗೆ ಒಬ್ಬರೆ ಲಿಂಗಾಯತರ ಸ್ಥಾನಮಾನ ಹೇಗಿದೆ?

...ಗ್ಗೆ ಅವಾಕ ಕೋರಿಸೋ ಥರಾ. ಈ ಸಾರಿ ನೋಡಿದ್ರಿ, ಬಿಜೆಪಿಯಿಂದ ಟಿಕೆಟ್ ಪಡೆದಿರೋ ಲಿಂಗಾಯತ ...ರಿಗೇ ಜಾಸ್ತಿ ಜನ ಸೋಲಲಿದ್ದಾರೆ. ಯಾಕೆಂದರೆ ಯಾರಿಗೆ ಬಿಜೆಪಿ ಟಿಕೆಟ್ ನೀಡಿದೆಯೊ ಅವರಲ್ಲಿ ಬಹುತೇಕರು ನಮ್ಮ ಸಮಾಜದ ಅರ್ಹ ಪ್ರತಿನಿಧಿಗಳಲ್ಲ. ಹಾಗೆ ಹೇಳಬೇಕೆಂದರೆ ಕಾಂಗ್ರೆಸ್-ಜೆಡಿಎಸ್‌ನವರು ಉತ್ತಮರಿಗೆ ಟಿಕೆಟ್ ನೀಡಿದ್ದಾರೆ.

*** ಆದರೆ ಯಡಿಯೂರಪ್ಪನವರನ್ನು ಬೆಳೆಸಿದ್ದಾರಲ್ಲ?**

ಇರಬಹುದು. ಆದರೆ ಸ್ವಲ್ಪ ಹಿಂದಕ್ಕೆ ನೋಡಿ. ಬಸವರಾಜ್ ಪಾಟೀಲ್ ಸೇಡಂ, ಯತ್ನಾಳ್, ಜಗದೀಶ್ ಶೆಟ್ಟರ್, ಬಿ.ಬಿ. ಶಿವಪ್ಪರಂಥವರನ್ನು ತುಳಿದಿರುವುದೂ ಕಾಣುತ್ತೆ.

*** ಹಿಂದೂತ್ವ-ವೀರಶೈವ ಧರ್ಮ ಒಂದೇನಾ?**

ಖಂಡಿತಾ ಬೇರೆ ಬೇರೆ. ನಮ್ಮದು ವೀರಶೈವ ಧರ್ಮ. ಸರ್ವೇಜನ ಸುಖಿನೋ ಭವಂತೂ ಎಂಬ ಆಶಯ ನಮ್ಮದು. ಈ RSSನವರ ಹಿಂದೂತ್ವ ಒಪ್ಪಿಕೊಂಡರೆ ವೀರಶೈವ ಧರ್ಮ ನಾಶವಾಗುತ್ತೆ.

*** ಲಿಂಗಾಯತರು ಬರೀ ಬಿಜೆಪಿ ಹಿಂದೆ ಹೋದರೆ ಇಡೀ ಸಮಾಜದಿಂದ ಪ್ರತ್ಯೇಕ ಆಗಲ್ವಾ. ಬರೀ ಲಿಂಗಾಯತರ ಓಟು ಪಡೆದುಕೊಂಡರೆ ಗೆಲ್ಲಲು ಸಾಧ್ಯವಾ?**

ನಾವೇನೂ ಎಲ್ಲರೂ ಏಕಪಕ್ಷೀಯವಾಗಿ ಬಿಜೆಪಿನ ಎಲ್ಲೂ ಬೆಂಬಲಿಸಿಲ್ಲ. ಕಾಂಗ್ರೆಸ್-ದಳ ಸೇರಿದಂತೆ ಯಾರೇ ಯೋಗ್ಯ ಅಭ್ಯರ್ಥಿಗೆ ಜನ ಓಟ್ ಮಾಡುತ್ತಾರೆ. ಜೊತೆಗೆ ಇತರ ಎಲ್ಲಾ ಜನಾಂಗದವರ ವಿಶ್ವಾಸ ಗಳಿಸಿದರೆ ಮಾತ್ರ ಒಬ್ಬರು ಗೆಲ್ಲಲು ಸಾಧ್ಯ. ಲಿಂಗಾಯತರ ಪಾಲಿಗೆ ಬಿಜೆಪಿ ಒಂದೇ ಗತಿಯಲ್ಲ.

*** ಲಿಂಗಾಯತರನ್ನೆಲ್ಲಾ ಬಿಜೆಪಿಗೆ ಒತ್ತೆ ಇಟ್ಟಿದ್ದಾರೇನೋ ಎಂಬಂತೆ ಬಿಜೆಪಿ ನಾಯಕರು ವರ್ತಿಸುತ್ತಿದ್ದಾರಲ್ಲ!**

ಅವರಂಥ ಅವಿವೇಕಿ, ಮುಠ್ಠಾಳರು ಯಾರೂ ಇಲ್ಲ. ವೀರಶೈವರನ್ನು ಖರೀದಿಸೋ ಶಕ್ತಿ ಬಿಜೆಪಿಗೂ ಇಲ್ಲ, ಬೇರೆಯವರಿಗೂ ಇಲ್ಲ. ■

ತ್ರಿಕೋನ ಸ್ಪರ್ಧೆಯ ರಣರಂಗ

ಹಿರಿಯ ನಾಯಕರೂ, ಕಟ್ಟಾ ಕ್ರಿಮಿನಲ್‌ಗಳೂ ಮತ್ತು ಚೆಡ್ಡಿ ಚತುರರೂ ಚುನಾವಣಾ ಕಣದಲ್ಲಿರುವ ಗುಲ್ಬರ್ಗಾ ಹಿಂದೊಮ್ಮೆ ಕಾಂಗ್ರೆಸ್ ಪಕ್ಷದ ಕೋಟೆಯಾಗಿದ್ದು ಆನಂತರ ಜನತಾದಳದ ಪಾಲಾಗಿತ್ತು. ಆದರೆ ಪ್ರಸ್ತುತ ಚುನಾವಣೆಯ ಸಂದರ್ಭದಲ್ಲಿ ಈ ಜಿಲ್ಲೆಯ 13 ಕ್ಷೇತ್ರಗಳು ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ನಡುವೆ ಹಂಚಿಕೆಯಾಗಲಿದೆ ಎಂಬಂತೆ ಭಾಸವಾಗುತ್ತಿದೆ.

ಶಹಾಪುರ:


ದರ್ಶನಾಪುರ್

ಶಹಾಪುರದ ಮತದಾರ ಎಂದಿಗೂ ತಾನು ಯಾವುದೇ ಒಂದು ಪಕ್ಷಕ್ಕೆ ಹಾಗೂ ಒಬ್ಬ ವ್ಯಕ್ತಿಗೆ ಒತ್ತಿ ಬಿದ್ದವನಲ್ಲ, ಆತ ತುಂಬಾ ಜಾಣ. ತಾನು ಯಾರನ್ನು ಒಳ್ಳೆಯನೆಂದು ಬಗೆದು ಚುನಾಯಿಸಿ ಕಳಿಸುತ್ತಾನೋ ಆತನನ್ನು ಕೇವಲ ಐದೇ ಐದು ವರ್ಷಗಳಲ್ಲಿ ಅಳೆದು - ಸುರಿದು ನೋಡಬಲ್ಲ ತಾಕತ್ತನ್ನು ಬೆಳೆಸಿಕೊಂಡವನು. ಹಾಗಾಗಿ ತಾನು ಚುನಾಯಿಸಿ ಕಳಿಸಿದ ವ್ಯಕ್ತಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಗೊತ್ತಾಗುತ್ತಲೆ ಆತನನ್ನು ಮಕಾಡೆ ಮಲಗಿಸಿಬಿಡುತ್ತಾನೆ.

ಹೀಗೆ ಕ್ಷೇತ್ರದಲ್ಲಿ ಮಲಗಿ ಮತ್ತೆ ಎದ್ದವರು ಅನೇಕರು. ಇದೀಗ ಜೆಡಿಎಸ್ ಅಭ್ಯರ್ಥಿಯಾಗಿರುವ ಶಿವಶೇಖರಪ್ಪ ಪಾಟೀಲ ಆಗಲಿ ಮಾಜಿ ಮಂತ್ರಿ ಶರಣಬಸಪ್ಪ ದರ್ಶನಾಪುರನಾಗಲಿ ಈ ಮಾತಿಗೆ ಹೊರತಾದವರಲ್ಲ, ಕಳೆದ ಸಲ ದರ್ಶನಾಪುರ ಗೆದ್ದು ಶಿವಶೇಖರಪ್ಪ ಸೋತಿದ್ದ. ಈ ಬಾರಿ ಸೋಲುವ ಪಾಳಿ ದರ್ಶನಾಪುರನದಾಗಿತ್ತು. ಆದರೆ ಅಧಿಕಾರದ ರುಚಿಕಂಡ ದರ್ಶನಾಪುರ ಅಷ್ಟು ಸುಲಭವಾಗಿ ತನ್ನ ಕುರ್ಚಿಯನ್ನು ಬಿಟ್ಟುಕೊಡದವ. ಹಾಗಾಗಿ ತಾನಿದ್ದ ಜೆಡಿಎಸ್‌ದಿಂದ ಜಿಗಿದು ಕಾಂಗ್ರೆಸ್ ತೆಕ್ಕೆಗೆ ಹೋಗಿದ್ದಾನೆ.


ಶಿವಶೇಖರಪ್ಪ


ಅನಿವಾರ್ಯವಾಗಿ ಇಷ್ಟು ವರ್ಷಗಳವರೆಗೆ ಕಾಂಗ್ರೆಸ್‌ನಲ್ಲಿದ್ದ ಶಿವಶೇಖರಪ್ಪ ಪಾಟೀಲ ಜೆಡಿಎಸ್ ಅಭ್ಯರ್ಥಿಯಾಗಿದ್ದಾನೆ. ಇದೊಂದು ಥರ ಕದಲಬದಲ ಕವಡೆ ಕಾಯಿಯ ಆಟ. ಆದರೇನಂತೆ? ಮತದಾರ ಮಾತ್ರ ಇವರುಗಳು ತಿಳಿದುಕೊಂಡಷ್ಟು ಮೂರ್ಖನಲ್ಲ. ಹಾಗೆ ನೋಡಿದರೆ ಬಿಜೆಪಿಯಿಂದ ಸ್ಪರ್ಧಿಸಿರುವ ಡಾ.ಮಲ್ಲಣ್ಣಗೌಡ ಉಕ್ಕನಾಳ ಸಮರ್ಥ ಶಾಸಕನಾಗುವ ವ್ಯಕ್ತಿಯಾಗಿದ್ದಾನೆ. ಆದರೆ ಆತ ಅಪ್ಪಿಕೊಂಡಿರುವ ಪಕ್ಷ ಚೆಡ್ಡಿಗಳದ್ದು, ಕೆಲ ವಿಚಾರವಾದಿಗಳಿಗೆ ಹೇಗೋ ಹಾಗೆ ಅಲ್ಪಸಂಖ್ಯಾತರಿಗೂ ಇದು ನುಂಗಲಾಗದ ತುತ್ತಾಗಿದೆ.


ಹಾಗೆ ನೋಡಿದರೆ ಶಿವಶೇಖರಪ್ಪ ಪಾಟೀಲ ಕೆಲಸಗಾರನೇನೂ ಅಲ್ಲ, ದರ್ಶನಾಪುರ ಕೆಲಸಗಾರನಾಗಿದ್ದರೂ ತನ್ನ ಸುತ್ತಮುತ್ತ ಕಟ್ಟಿಕೊಂಡ ತನ್ನ ಪಟಾಲಂನಿಂದಾಗಿ ಜಜ್ಜೆ ಆದವ. ಆತನ ಶ್ರೀಮಂತಿಕೆಗೆ ಜನಸಾಮಾನ್ಯ ಬೆಕ್ಕಸಬೆರಗಾಗಿದ್ದಾನೆ. ಹೀಗಾಗಿ ಕನಿಷ್ಠ ತನಗೆ ಹತ್ತಿರವಾಗಿರುವ, ತನ್ನ ಬೇಕು-ಬೇಡಗಳಿಗೆ ಸ್ಪಂದಿಸುವ ಶಿವಶೇಖರಪ್ಪನ ಕೈ ಹಿಡಿದು ಆತನನ್ನು ಮತದಾರ ಗೆಲ್ಲಿಸಬಹುದು.

ಸುರಪುರ

ಸುರಪುರದಲ್ಲಿ ಚುನಾವಣೆಗಳೆಂದರೆ ಅದು ರಣಾಂಗಣದ ಯುದ್ಧಗಳನ್ನು ನೆನಪಿಗೆ ತರಿಸುತ್ತದೆ. ಕಾಂಗ್ರೆಯ ಮಲ್ಲಿಕಾರ್ಜುನ ಖರ್ಗೆಯ ತಪ್ಪು ತೀರ್ಮಾನಗಳಿಂದ ಡಾ. ವೆಂಕಟಪ್ಪನಾಯಕನಿಗೆ ಟಿಕೆಟ್ ಸಿಕ್ಕಿದೆ. ವೆಂಕಟಪ್ಪನಾಯಕ ವೈಯಕ್ತಿಕವಾಗಿ ಒಳ್ಳೆಯನಾದರೂ ಕೆಲಸಗಾರನಲ್ಲ, ಜೊತೆಗೆ ಈತನ ಹಿಂಬಾಲಕರಾದ ಯಡಿಯಾಪುರ ಬಸ್ಸನಗೌಡ, ಅವರ ಸಹೋದರರಾದ ರಾಮುನಾಯಕ, ಮೌನೇಶ್ ನಾಯಕನ ನಡತೆಗಳೆ ಇವರಿಗೆ ಮುಳುವಾಗುವ ಸಾಧ್ಯತೆಗಳಿವೆ.

ಈ ಕಾರಣಕ್ಕಾಗಿಯೇ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದೆ ಹೋದಾಗ ಕೊನೆಯ ಘಳಿಗೆಯಲ್ಲಿ ಬಿಜೆಪಿಯ ಚೆಡ್ಡಿಯನ್ನು ತೊಟ್ಟುಕೊಂಡ ರಾಜುಗೌಡ ಇಲ್ಲಿ ಗೆದ್ದುಬರುತ್ತಾನೆ. ಇಲ್ಲಿ ಬಿಜೆಪಿ ಗೆಲ್ಲುತ್ತದೆ ಅನ್ನೋದಕ್ಕಿಂತ ಡಾ.ವೆಂಕಟಪ್ಪನಾಯಕ ಹಾಗೂ ರಾಜುಗೌಡರಿಗೆ ನಡೆದಿರುವ ಕುಸ್ತಿಯಲ್ಲಿ ರಾಜುಗೌಡ ಮೇಲುಗೈ ಸಾಧಿಸುತ್ತಾನೆ ಎಂದು ಹೇಳಿದರೆ ಸರಿಯಾಗುತ್ತದೆ.


ರಾಜು ಎಂ.ಎಲ್.ಎ



ಯಾದಗಿರಿ

ಯಾದಗಿರಿಯ ಗೋದಾಮಿನ ವಿಶ್ವನಾಥರೆಡ್ಡಿ ಮತ್ತವರ ಪಟಾಲಂಗೆ ಜನ ಬೆಚ್ಚಿ ಬಿದ್ದಿದ್ದಾರೆ. ಕಳೆದ ಬಾರಿ ಡಾ.ವೀರಬಸವಂತರೆಡ್ಡಿ ಎಂಬ ಸಭ್ಯ ಸಂಪನ್ನ ವ್ಯಕ್ತಿ ನಾಮಕಾವಸ್ತೆ ಶಾಸಕನಾಗಿದ್ದರೂ ದರ್ಬಾರೆಲ್ಲ ಗೋದಾಮಿನ ಗಣಂಗಳೆ ಮಾಡಿದ್ದು ಮೈನಸ್ ಪಾಯಿಂಟ್ ಆಗಿದೆ. ಇದರ ಜೊತೆಗೆ ಈತ ಚೆಡ್ಡಿಯ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದು ಇಲ್ಲಿರುವ ಮುಸಲ್ಮಾನ ಅಲ್ಪಸಂಖ್ಯಾತರಿಗೆ ನುಂಗಲಾಗದ ತುತ್ತಾಗಿದೆ. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಶ್ರೀನಿವಾಸರೆಡ್ಡಿ ಜಿಲ್ಲಾ ಪಂಚಾಯತಿಯ ಹಾಲಿ ಸದಸ್ಯ. ಶಹಾಪುರ ತಾಲೂಕಿನ ಹೈಯ್ಯಾಳ ಪಟ್ಟ ಈ ಸಲ ಯಾದಗಿರಿ ಮತಕ್ಷೇತ್ರದಲ್ಲಿ ಸೇರಿರುವುದು ಈತನ ಸದಾಶಯಕ್ಕೆ ಕಾರಣವಾಗಿದೆ. ಕಾಂಗ್ರೆಸ್‌ನ ಅಭ್ಯರ್ಥಿ ಡಾ.ಮಲಕರೆಡ್ಡಿ ಒಳ್ಳೆಯ ಚಾರಿತ್ರ್ಯ ಇರುವ ವ್ಯಕ್ತಿಯಾಗಿದ್ದರೂ ಅವರ ಶ್ರೀಮತಿ ಡಾ.ಮಹಾದೇವಿ ಮಲಕರೆಡ್ಡಿಯವರ ಆಖೈರು ತೀರ್ಮಾನಗಳು ಮುಳುವಾಗಬಹುದಾದ ಸಾಧ್ಯತೆ ಇದ್ದರೂ ಕೊನೆಯ ಘಳಿಗೆಯಲ್ಲಿ ಮತದಾರ ಇವರ ಕೈ ಬಿಡಲಾರನೆನಿಸುತ್ತದೆ.




ಮಲಕರೆಡ್ಡಿ

ಸೇಡಂ





ಸೇಡಂನಲ್ಲಿ ಎದ್ದಿರುವ ರಾಜಕೀಯ ಸಿಮೆಂಟ್ ಧೂಳು ಜೆಡಿಎಸ್ ಹಾಗೂ ಕಾಂಗ್ರೆಗಳಿಗೆ ಮುಳುವಾಗುವ ಸಾಧ್ಯತೆಗಳು ಧಟ್ಟವಾಗಿ ಹಬ್ಬಿವೆ. ಮುದನಾ, ಮಕ್ರಂಖಾನ್‌ಗಳ ಟಿಕೆಟ್ ಪೈಪೋಟಿಯಲ್ಲಿ ಆದ ವೈಮನಸ್ಸು ಸರಿಪಡಿಸಲು ಸಾಧ್ಯವಾಗದೆ ಇರುವುದು ಜೆಡಿಎಸ್ ಸೋಲಿಗೆ ಕಾರಣವಾಗುತ್ತಿದೆ. ಇದೇ ರೀತಿ ಕಾಂಗ್ರೆನ ಸತೀಶ್ ರೆಡ್ಡಿ ರಂಜೋಳನ ಕೈಚಳಕ. ಮೂರನೆ ರಂಗದ ಅಭ್ಯರ್ಥಿಯಾಗಿರುವ ಬಸವಂತರೆಡ್ಡಿ ಮೋತಕಪಲ್ಲಿಯೂ ಕಾಂಗ್ರೆ ಮೂಲದ ಓಟುಗಳನ್ನೆ ಛಿದ್ರಗೊಳಿಸುತ್ತಾನೆ. ಹೀಗಾಗಿ ಮತ್ತೆ ಅನಿವಾರ್ಯವೆಂಬಂತೆ ಇಲ್ಲಿ ಚೆಡ್ಡಿ ಅಭ್ಯರ್ಥಿಯಾದ ರಾಜಕುಮಾರ ಪಾಟೀಲ ತೇಲ್ಕರ್ ಗೆಲ್ಲುವ ಸಾಧ್ಯತೆಗಳು ಹೆಚ್ಚಾಗಿವೆ.




ಗುರುಮಿಠಕಲ್

ಗುರುಮಿಠಕಲ್ ಕೆಪಿಸಿಸಿ ಅಧ್ಯಕ್ಷರಾದ ಖರ್ಗೆಯ ತವರುಮನೆ. ಈಗ ಇದು ಸಾಮಾನ್ಯ ಕ್ಷೇತ್ರವಾಗಿದ್ದರಿಂದ ಅನಿವಾರ್ಯವಾಗಿ ಗುರುಮಿಠಕಲ್‌ನ್ನು ಮುಂಚಿದ ಆಸಾಮಿ ಎಂದೆ ಕುಖ್ಯಾತಿಗಳಿಸಿರುವ ಬಾಬುರಾವ್ ಚಿಂಚನಸೂರಗೆ ಬಿಟ್ಟುಕೊಟ್ಟಿದ್ದಾರೆ. ಆದರೆ ಜಾಣ ಮತದಾರ ಮಾತ್ರ ಖರ್ಗೆ ಸೂಚಿತ ಅಭ್ಯರ್ಥಿಗೆ ಮತ ಹಾಕುವುದು ಬೇರೆ, ಖರ್ಗೆಗೆ ಮತ ಹಾಕುವುದು ಬೇರೆ ಎಂಬ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಇದಲ್ಲದೆ ಬಿಜೆಪಿಯ ವಿಠ್ಠಲ ಹೇರೂರ ಕಬ್ಬ... ಮತಗಳನ್ನು ನೆಚ್ಚಿಕೊಂಡಿದ್ದಾನೆ. ಚಿಂಚನಸೂರ ಕೂಡ ಕಬ್ಬ... ಇವರಿಬ್ಬರಲ್ಲಿ ಮತಗಳು ಹರಿದು ಹಂಚಿಹೋಗಿ ಜೆಡಿ... ನಾಗನಗೌಡ ಕಂದಕೂರ ಗೆಲ್ಲುವುದು ಸುಲಭವಾಗಿದೆ.


ಚಿಂಚನಸೂರ್


ನಾಗಣ್ಣಗೌಡ

ಚಿತ್ತಾಪುರ


ಖರ್ಗೆ

ಚಿತ್ತಾಪುರದಿಂದ ಮಲ್ಲಿಕಾರ್ಜುನ ಖರ್ಗೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸುತ್ತಿದ್ದಂತೆ ಈ ಮತಕ್ಷೇತ್ರಕ್ಕೆ ತನ್ನದೆ ಆದ ಖದರು ಪ್ರಾಪ್ತವಾಗಿದೆ. ತನ್ನ ಕ್ಷೇತ್ರವಾದ ಗುರುಮಿಠಕಲ್‌ನಲ್ಲಿ ಜಾಸ್ತಿ ಪ್ರಚಾರಕ್ಕೆ ಹೊರಡದೆ ತನ್ನ ಅಭಿವೃದ್ಧಿ ಕಾರ್ಯಗಳೆ ತನಗೆ ಊರುಗೋಲು ಎಂದು ತೆಪ್ಪಗೆ ಚುನಾವಣೆಗಳನ್ನು ಎದುರಿಸುತಿದ್ದ ಖರ್ಗೆ ಇಲ್ಲಿ ನಿತ್ಯ ಬೆವರಿಳಿಸುತ್ತ ತನ್ನ ಮಗ ಪ್ರಿಯಾಂಕ ಖರ್ಗೆಯೊಂದಿಗೆ ಊರೂರು ಸುತ್ತುತ್ತಿ...


ಅದೇನು ಕಾರಣವೋ ಇಲ್ಲಿರುವ ಲಂಬಾಣಿ ಜನಾಂಗದವರು ಬಿಜೆಪಿಯ... ತಮ್ಮ ಪಕ್ಷವೆಂದು ತಪ್ಪಾಗಿ ಭಾವಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ವಾಲ್ಮೀಕಿ ನಾಯಕ... ಚೆಡ್ಡಿ ಗೆಟಪ್‌ನಲ್ಲಿ ನೋಡುತ್ತಿದ್ದಂತೆ ಅತ್ತ ಆರ್‌ಎಸ್‌ಎಸ್ ಕುಣಿತ ಆರಂಭಗೊಳ್ಳು... ಆ ಮೂಲಕ ತಮ್ಮ ವರ್ಗದವರ ಟೊಂಕ ಮುರಿಯ... ಕ್ರಿಯೆಯಲ್ಲಿ ಚೆಡ್ಡಿಗಳೆಲ್ಲ ನಿರತರಾಗುತ್ತಾರೆ ಎಂಬ... ಗೊತ್ತುಮಾಡಿಕೊಳ್ಳುತ್ತಿರುವ ಇಲ್ಲಿನ ಲಿಂಗಾಯತ, ಕಬ್ಬ... ಜನಾಂಗದವರು ಕೊನೆಯ ಘಳಿಗೆಯಲ್ಲಿ ವಾಲ್ಮೀಕಿ ನಾಯ... ಚೆಡ್ಡಿ ಏರಿಸುವ ಬದಲು, ಅಭಿವೃದ್ಧಿಯ ಹರಿಕಾರ ಎ... ಕರೆಯುವ ಖರ್ಗೆಯ ಕೈ ಬಲಪಡಿಸಲು ಇಚ್ಛಿಸಲಿದ್ದಾ...



ಅಫಜಲಪುರ



ಮ್ಯಾಲೀಕಯ್ಯ

ಅಫಜಲಪುರದಲ್ಲಿ ಒಮ್ಮೊಮ್ಮೆ ಪ್ರಜಾಪ್ರಭುತ್ವ ಇರುವ ಬಗ್ಗೆಯೆ ಸಂಶಯ ಮೂಡುತ್ತದೆ. ಸುಫಾರಿ ಕೊಲೆಗಳ ಸರದಾರನೆಂದೇ ಕುಖ್ಯಾತಿ ಗಳಿಸಿದ ಮಾಲೀಕಯ್ಯ ಗುತ್ತೇದಾರ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಎಲ್ಲಾ ಪಕ್ಷಗಳನ್ನು ತಿರುವಿಟ್ಟು ಕೊನೆಗೆ ಚೆಡ್ಡಿ ತೊಟ್ಟು ತಿರುಗುತ್ತಿರುವ ಎಂ.ವೈ.ಪಾಟೀಲ, ಗುತ್ತೇದಾರನಿಗೆ ಹೋಲಿಸಿದರೆ ಒಳ್ಳೆಯ ವ್ಯಕ್ತಿಯೆಂಬಂತೆ ಗೋಚರಿಸುತ್ತಾನೆ. ಆದರೆ ಆತ ಅಪ್ಪಿಕೊಂಡಿರುವ ಪಕ್ಷ ತಾನು ಇದು... ನಂಬಿಕೊಂಡು ಬಂದ ತತ್ವ ಸಿದ್ಧಾಂತ ಹಾಗೂ ಲಿಂಗಾಯತರ ಮೂಲ ವಿಚಾರಧ... ಕೊಡಲಿ ಪೆಟ್ಟನ್ನು ಹಾಕುವಂಥವು. ಅಲ್ಲದೆ ಘತ್ತರಗಿ ಭಾಗ್ಯವಂತಿ ದೇವಿ... ಹುಂಡಿಗೆ ಭಕ್ತರು ಹಾಕುವ ಬಂಗಾರ ಹಾಗೂ ಹಣದ ಥೈಲಿ ಪಾಟೀ... ಮಗನ ಮೂಲಕ ಮನೆ ಸೇರಿದ್ದು ಇದೀಗ ಕ್ಷೇತ್ರದ ತುಂಬ ಸುದ್ದಿಯಾ... ಜೆಡಿಎಸ್ ಅಭ್ಯರ್ಥಿಯಾಗಿರುವ ತುಕಾರಾಮಗೌಡ ಪಾಟೀಲ ... ಮನುಷ್ಯರಾಗಿದ್ದರೂ ಅವರು ಪ್ರಬಲ ವಿರೋಧ ನೀಡುವ ಸಾಧ್ಯತೆಗಳು ಕಡಿ... ಅಂದಹಾಗೆ, ಗುತ್ತೇದಾರ ಫ್ಯಾಮಿಲಿಯನ್ನು ಬಹಳ ಹಿಂದಿನಿಂದ ವಿರೋಧಿಸಿಕೊಂಡು ಬಂದಿರುವವರಲ್ಲಿ ತುಕಾರಾಮ ಪಾಟೀಲರು ಪ್ರಮುಖ... ಅಷ್ಟೇ ಅಲ್ಲ, ಸುಭಾಷ್ ಗುತ್ತೇದಾರನ ಸಹೋದರ ಅಶೋಕ್ ಗುತ್ತೇದಾ... ಹೆಂಡತಿ ಪದ್ಮಾವತಿಯನ್ನು ಪ್ರೀತಿಸಿ ಕೊನೆಗೆ ಆಕೆಗೆಂದು ಅವಳ ಗಂಡ ಅಶೋಕ... ಕೊಂದ ಆರೋಪದ ಮೇಲೆ ಈಗ ಜೈಲಿನಲ್ಲಿ... ಸುಭಾಷ್ ಪಾಟೀಲ ಎಂಬ ಯುವಕನ ತಂದೆ... ತುಕರಾಂಗೌಡ ಪಾಟೀಲ್. ಇದೆಲ್ಲ ಏನೇ ಇದ್ದರೂ, ... ಬಾರಿಯ ಚುನಾವಣೆಯಲ್ಲಿ ತುಕರಾಮಗೌಡ ಪಾಟೀ... ಪಡೆಯುವ ಓಟುಗಳೆಲ್ಲ ಎಂ.ವೈ.ಪಾಟೀಲಗೆ ಸೇ... ಮತಗಳಾಗಿರುತ್ತವೆ ಎಂಬುದರ ಬಗ್ಗೆ ಅನುಮಾನಗ... ಇದರಿಂದಾಗಿ ಸಹಜವಾಗಿ ಮಾಲೀಕಯ್ಯ ... ಮರುಹುಟ್ಟು ಪಡೆಯುವ ಸಾಧ್ಯತೆಗಳಿವೆ.


ಎಂ.ವೈ.ಪಾಟೀಲ

ಚುನಾವಣೆ 2008

ಗುಲ್ಬರ್ಗಾ ಎಂಬ ಜೆಡಿಎಸ್ ಕೋಟೆ




ಧೃತರಾಷ್ಟ್ರ ಪ್ರೇಮದ, ಹಠವಾದಿ ಧೋರಣೆಯ, ತಾನು ಹಿಡಿದ ಮೊಲಕ್ಕೆ ಮೂರು ಕಾಲೆಂದು ವಾದಿಸುವ ದೇವೇಗೌಡರ ದುರ್ದಿನಗಳು ಕರ್ನಾಟಕದಲ್ಲಿ ಇನ್ನೇನು ಆರಂಭಗೊಳ್ಳಲಿವೆ ಎಂದೆಲ್ಲ ಬಹುತೇಕರು ಲೆಕ್ಕಹಾಕಿದ್ದರು. ಬಿಜೆಪಿಯ ಚೆಡ್ಡಿ ಚತುರರಂತೂ ತಮ್ಮ ಪಕ್ಷದ ಜೊತೆ ಮಾಡಿಕೊಂಡ ಒಪ್ಪಂದವನ್ನು ದೇವೇಗೌಡರು ಮುಳುಗಡೆ ಮಾಡಲು ಕಾರಣೀಕರ್ತರಾದಾಗಲಂತೂ ಭೂಮಿ ಆಕಾಶ ಒಂದು ಮಾಡಿ ನರಿಯಂತೆ ಊಳಿಟ್ಟರು. ದೇವೇಗೌಡರ ಜನತಾದಳ ಅಪ್ಪಮಕ್ಕಳ ಪಕ್ಷ, ಅದು ಮಾತು ತಪ್ಪಿದ, ನೀತಿಹೀನ ಪಕ್ಷ ಎಂದೆಲ್ಲ ಒಂದೇ ಸಮ ಬೊಬ್ಬರಿದರು. ಇಂದಿನ ಬಹುತೇಕ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲೆಲ್ಲ ಬಹುತೇಕವಾಗಿ ತುಂಬ ತುಳುಕಾಡುತ್ತಿರುವ ದಾರದ ವಾಸನೆಯ ಜನಗಳೆಲ್ಲ ಬಿಜೆಪಿಯ ಪರವಾಗಿ ತುತ್ತೂರಿ ಊದಿದ್ದೇ ಊದಿದ್ದು. ಇಟ್ಟೆಯ ಹಣ್ಣು ತಿಂದ ನರಿಗೆ ಸೃಷ್ಟಿಯೆಲ್ಲ ತಿರುಗಿತೆಂಬಂತೆ ಜೆಡಿಎಸ್‌ನಲ್ಲಿದ್ದು ಯಥೇಚ್ಛವಾಗಿ ತಿಂದುಂಡ ಹಲವಾರು ಹರಾಮಕೋರ ಗಡವಗಳು ತಾವುಗಳೆಲ್ಲ ಸಾಚಾ ಎಂದು ತೋರಿಸಿಕೊಳ್ಳಲು ದೇವೇಗೌಡರ ಸಖ್ಯವನ್ನು ಏಕ್‌ದಮ್ ತೊರೆದು ಬೇರೆ ಬೇರೆ ಪಕ್ಷಗಳಿಗೆ ವಲಸೆ ಹೋದರು.

ಅದೆಲ್ಲ ಏನೇ ಇರಲಿ, ದಳವೆಂದರೆ ದೇವೇಗೌಡರ ಕುಟುಂಬ ಪಕ್ಷ ಎಂದೆಲ್ಲ ಜಾತ್ಯತೀತ ಜನತಾ ದಳ ಕರ್ನಾಟಕದ ಎಲ್ಲಾ ಕಡೆ ಝುಳಝುಳವಾಯಿತು ಎಂದು ಬಹುತೇಕರು ಬಗೆದಿದ್ದರು. ಆದರೆ ಉತ್ತರ ಕರ್ನಾಟಕದ ಹಲವಾರು ಕಡೆ ಜೆಡಿಎಸ್ ಎಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿ ಗೆದ್ದುಬರುವುದರಲ್ಲಿ ಯಾವುದೇ ಅನುಮಾನವಿಲ್ಲ, ಒಂದು ಸಂದರ್ಭದಲ್ಲಿ ಕಲಬುರ್ಗಿ ಜಿಲ್ಲೆ ಕಾಂಗ್ರೆಗಳ ಭದ್ರಕೋಟೆಯಾಗಿತ್ತು, ಆನಂತರ ತಮ್ಮ ವಿಚಾರ ವಿಶಿಷ್ಟ ನಡೆ, ಸಹಜ ವರ್ತನೆಗಳ ಹೋರಾಟದ ಮೂಲಕ ಜನಮಾನಸವನ್ನು ತಲುಪಿದ ಬಿ.ಆರ್.ಪಾಟೀಲ, ವೈಜನಾಥ ಪಾಟೀಲ, ವಿಶ್ವನಾಥ ಪಾಟೀ... ಹೆಬ್ಬಾಳ, ಎಸ್.ಕೆ.ಕಾಂತಾ ಮುಂತಾದವರಿಂದ ಸಹಜವಾಗಿಯೆ ಕಲಬುರ್ಗಿ... ಜೆಡಿಎಸ್‌ನ ಭದ್ರಕೋಟೆಯಾಗಿದ್ದು ಯಾರಾದರೂ ಪರಾಂಭರಿಸಬಹುದು.

ಆದರೆ ಆ ನಂತರ ಎಸ್.ಕೆ.ಕಾಂತಾ ಒಬ್ಬರನ್ನು ಬಿಟ್ಟರೆ ಇಡೀ ಗುಲಬರ್ಗಾ... ಜಿಲ್ಲೆಯಲ್ಲಿ ಹೇಳಿಕೊಳ್ಳುವಂಥ ಒಬ್ಬ ನಾಯಕನೂ ಜೆಡಿಎಸ್‌ನಲ್ಲಿ ಇಲ್ಲದೆ... ಹೋದದ್ದು ಆ ಪಕ್ಷದ ದುರಂತ ಎಂದೇ ಎಲ್ಲರೂ ಭಾವಿಸಿದ್ದರು. ಆದ... ವಾಸ್ತವಿಕವಾಗಿ ಕಾಂಗ್ರೆಸ್ ಹಾಗೂ ಬಿಜೆಪಿಯ ಟಿಕೆಟ್‌ಗಳೆಲ್ಲ ಬಹುತೇಕವಾ... ಬಕೆಟ್ ಹಿಡಿಯುವವರಿಗೆ, ಭಕ್ಷೀಸು ನೀಡುವವರಿಗೆ ಮಾರಾಟವಾದವು... ಇದರಿಂದ ಅಭ್ಯರ್ಥಿಗಳು ಅತೃಪ್ತರಾದರು. ಈ ಅಭ್ಯರ್ಥಿಗಳನ್ನು ಕೂಡ... ಸಂಪರ್ಕಿಸಿದ ದೇವೇಗೌಡರು ಅವರನ್ನೆಲ್ಲ ತಮ್ಮ ಜೆಡಿಎಸ್ ಪಕ್ಷದ ಬುಟ್ಟಿ... ಹಾಕಿಕೊಂಡು ಚಾಣಾಕ್ಷತನ ಮೆರೆದಿದ್ದಾರೆ. ಇಬ್ಬರ ಮೇಲಿನ ಸಿಟ್ಟು... ಮೂರನೆಯವನಿಗೆ ಆಯ ಎಂಬಂತೆ ಈಗ ಬಹುತೇಕ ಕಡೆ ಇಂಥದ್ದೆ ಸ್ಥಿ... ನಿರ್ಮಾಣವಾಗಿದೆ.

ಆಳಂದದಲ್ಲಿ ಮೂಲ ಕಾಂಗ್ರೆಸ್ ಆಸಾಮಿಯಾದ ಸುಭಾಷ್... ಆರ್.ಗುತ್ತೇದಾರರನ್ನು ಕಡೆಗಣಿಸಿ ಇತ್ತೀಚೆಗೆ ಕಾಂಗ್ರೆಸ್ ಸೇರಿಕೊಂಡು ಸಿದ್ದರಾಮಯ್ಯ... ಗುಂಪಿನ ಬಿ.ಆರ್.ಪಾಟೀಲ್‌ಗೆ ಟಿಕೆಟ್ ಕೊಡಲಾಗಿದೆ. ಇದರಿಂದ ರೊಚ್ಚಿಗೆ... ಗುತ್ತೇದಾರ ಜೆಡಿಎಸ್ ಸೇರಿಕೊಂಡು ಬಿ.ಆರ್. ಜೊತೆ ಈಗ ಲಡಾಯಿ...

...ಳಂದ


ಸುಭಾಷ ಗುತ್ತೇದಾರ

...ಳಂದ ಕ್ಷೇತ್ರದ ಮತದಾರ ...ಸೋ ಊದುವುವನ್ನು ಕೊಟ್ಟು ...ಬವ್ವುವನ್ನು ಪಡಕೊಂಡ ಎಂಬ ...ಲ್ಲಿದ್ದಾನೆ. ಬಿ.ಆರ್.ಪಾಟೀಲ ಎಂಬ ...ವಾದಿ ಇಲ್ಲಿ ಗೆಲ್ಲಲೇ ಬೇಕಿದೆ. ...ಸುಫಾರಿ ಕೊಲೆಗಳ ಪಾಲುದಾರನಾದ, ಹೆಂಡದ ದೊರೆ ಕುಖ್ಯಾತಿ ಗಳಿಸಿಕೊಂಡಿರುವ ಸುಭಾಸ ಗುತ್ತೇದಾರ ಹೊಳೆಯನ್ನೇ ಹರಿಸುತ್ತಿದ್ದಾನೆ. ಹೇಗಾದರೂ ಸೈ



...ರ್.ಪಾಟೀಲ

ಏನು ಚೆಲ್ಲಿಯಾದರೂ ಸೈ ತಾನು ಶಾಸಕನಾಗಲೇಬೇಕು ಎಂಬ ಹೊಂಚನ್ನು ಹಾಕಿಕೊಂಡಿರುವ ಗುತ್ತೇದಾರನಿಗೆ ಅನುಕೂಲವಾಗಲು ವೀರಣ್ಣ ಮಂಗಾಣಿ ಎಂಬಾತ ಬಿಎಸ್ಪಿಯಿಂದ ಸ್ಪರ್ಧಿಸಿದ್ದಾನೆ. ಬಿಜೆಪಿಯ ವೀರೇಂದ್ರ ಪಾಟೀಲರ ಅಳಿಯ ಬಿ.ಜಿ. ಜವಳಿ ಕೂಡ ಬಿ.ಆರ್.ಪಾಟೀಲರ ...ಳ ಬುಟ್ಟಿಗೆ ಕೈ ಹಾಕಿದ್ದಾನೆ. ಕಾಂಗ್ರೆಸ್ಸಿನಿಂದ ಗೆದ್ದು ...ಬೇಕಾದ ಬಿ.ಆರ್.ಪಾಟೀಲ ಇಲ್ಲಿ ಹಿಂದೆ ಸರಿದು ...ಸ ಗುತ್ತೇದಾರನಿಗೆ ಸ್ಥಾನಬಿಟ್ಟುಕೊಟ್ಟರೆ ಇದು ...ಪ್ರಭುತ್ವದ ಅಣಕ ಎನ್ನದೆ ವಿಧಿಯಿಲ್ಲ.

...ಲಬರ್ಗಾ ದಕ್ಷಿಣ

...ಎಸ್.ಕೆ.ಕಾಂತಾ ಎಂಬ ಮಾಜಿ ಮಂತ್ರಿ, ನಿಷ್ಠುರವಾದಿ ... ಬಡೆ ಮುರುವತ್ತುಗಳಿಗೆ ತನ್ನನ್ನು ... ಮಾರಿಕೊಂಡವನಲ್ಲ. ಕಾಣಿಯ ...ಂ, ಅರ್ಧಗಾಣಿಯ ಗೆಲ್ಲ ಎನ್ನು ...ವ ಕಾಂತಾನಂಥವರಿಗೆ ಚುನಾ... ...ಲೆಮಾಡಿಸಿದ್ದಲ್ಲ ಎಂದು ಹೇಳು ...ದ್ದಾರೆ. ಹಾಗಾದರೆ ಲಂಪಟರನ್ನೆ ... ವರ್ಷಗಳವರೆಗೆ ಗೆಲ್ಲಿಸಿ ...ಕು? ಎಂಬ ಪ್ರಶ್ನೆಗೆ ಬಹಳಷ್ಟು ...ಲ್ಲಿ ಉತ್ತರವಿಲ್ಲ. ತಮ್ಮ ನಿಜದ ನಿಲುವನ್ನು ಕಂಡರಿಯದವರು ..., ಹೀಗೆಲ್ಲ ಮಾತಾಡುವುದುಂಟು. ಜೆಡಿಎಸ್‌ನ ಕಾಂತಾ ... ಆದು ಸಮಾಜ ಒಳ್ಳೆಯದರತ್ತ ತುಡಿಯುವ ಲಕ್ಷಣ ... ಹೇಳಬೇಕು. ಕಾಂಗ್ರೆಸ್ಸಿನಿಂದ ಸ್ಪರ್ಧಿಸಿರುವ ಎಚ್.ಕೆ.ಇ ಸೊಸೈಟಿಯ ಅಧ್ಯಕ್ಷ ಬಸವರಾಜ ಭೀಮಳ್ಳಿ



ಎಸ್.ಕೆ.ಕಾಂತಾ



ಹೇಳಿಕೇಳಿ ರೊಕ್ಕದ ಆಸಾಮಿ. ದುಡ್ಡಿನ ಮೇಲೆ ನಿಗರಿ ಕುಳಿತು ದರ್ಪ ಮಾಡುವುದು ಆತನಿಗೆ ಗೊತ್ತೆ ಹೊರತು ಜನರೊಂದಿಗೆ ಬೆರೆತು ಕೆಲಸ ಮಾಡುವುದು ಗೊತ್ತಿಲ್ಲ. ಬಿಜೆಪಿಯಿಂದ ಸ್ಪರ್ಧಿಸಿರುವ ಚಂದ್ರಶೇಖರ ...ಲನ ಅಪ್ಪವಕ್ರಮುಖ ಕಳೆದ ಸಲ ಗೆದ್ದು ಬಂದಾಗ ...ಗೆಲ್ಲ ಗೊತ್ತಾಗಿದೆ. ಹೀಗಾಗಿ ಇಲ್ಲಿ ಕುಸ್ತಿ ಇರುವುದು ...ಲ ಇರುವ ಕಾಂತಾ ಹಾಗೂ ಹಣಬಲದ ಭೀಮಳ್ಳಿಯ ...ವೆ. ಇಲ್ಲಿ ಕಾಂತಾ ಗೆಲ್ಲಬೇಕು ಎಂಬುದೆ ಎಲ್ಲರ ಬಯಕೆ.

...ಲಬರ್ಗಾ ಉತ್ತರ

...ಲಬುರ್ಗಿಯಲ್ಲಿ ಖಮರುಲ್ಲ ಇಸ್ಲಾಂ ಸ್ಪರ್ಧಿಸುತ್ತಾನೆಂದರೆ ...ತ್ರದ ಖದರೆ ಬೇರೆಯಾಗುತ್ತದೆ. ...ಮ್ಮೆ ತಪ್ಪು ತಿಳಿವಳಿಕೆಯಿಂದ ...ರುಲ್ಲಾ ಕಲಬುರ್ಗಿಯನ್ನು ಚೋಟಾ ...ಸ್ತಾನ ಮಾಡುವುದಾಗಿ ಹೇಳಿದ್ದ. ...ಗಾಗಿ ಬಹಳಷ್ಟು ಜನಗಳ ಟೀಕೆಗೂ ...ಯಾಗಿದ್ದ. ತನ್ನ ತಪ್ಪನ್ನು ತಕ್ಷಣ ...ಕೊಂಡ ಕಾಂಗ್ರೆಸ್ ಅಭ್ಯರ್ಥಿ ಖಮರ್


ಖಮರುಲ್ಲ

ತನ್ನ ಖದರನ್ನು ಮತ್ತೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ತಪ್ಪು ತಿಳಿವಳಿಕೆಯಿಂದ ಲಿಂಗಾಯತರು ಬಿಜೆಪಿಯ ಬಸವರಾಜ ಗಳಂಗಳಪ್ಪ ಪಾಟೀಲನ ಜೊತೆ ಗುರುತಿಸಿಕೊಳ್ಳಲು ಹವಣಿಸುತ್ತಿರುವುದು ತಮ್ಮ ಸಮಾಧಿಯತ್ತ ತಾವೆ ತುದಿಯುವಂತೆ ಎಂಬುದು ಗೊತ್ತಿಲ್ಲ. ಜೆಡಿಎಸ್‌ನ ಸುರೇಶಚಂದ್ರ ಮಹಾಗಾಂವಕರ್ ಓಟುಗಳನ್ನು ಪಡೆದಷ್ಟು ಖಮರುಲ್ಲಾ ಇಸ್ಲಾಂಗೆ ಗೆಲುವು ಖಚಿತವಾಗುತ್ತದೆ.


ಚಿಂಚೋಳಿ




ಖರ್ಗೆಯ ಅವಕೃಪೆಗೆ ಪಾತ್ರವಾಗಿ ಇಂದ್ರನ ಶಾಪಕ್ಕೆ ಗುರಿಯಾದ ಅಹಲ್ಯೆಯಂತೆ ಇಷ್ಟು ದಿನ ಕಲ್ಲಾಗಿ ಕುಳಿತಿದ್ದ ಬಾಬುರಾವ್ ಚವ್ಹಾಣ ಇದೀಗ ಚಿಂಚೋಳಿಯ ಕಾಂಗ್ರೆಸ್ ಅಭ್ಯರ್ಥಿ. ವೈಜನಾಥ ಪಾಟೀಲ, ಕೈಲಾಸನಾಥ ಪಾಟೀಲರಿಗೆ ಕಟ್ ಆಗಿರುವ ಟಿಕೆಟ್‌ಗಳಿಂದ ಈಗಾಗಲೇ ವೈಮನಸ್ಸು ಹೆಚ್ಚಾಗಿದೆ. ಖರ್ಗೆಯ ಪೆಡಸು ಶಕ್ತಿಯ ತಾಕತ್ತನ್ನು ಮುರಿಯಲೆ ಬೇಕೆಂದು ಪಾಟೀಲದ್ವಯರು ಸ್ಕೆಚ್ ರೆಡಿಮಾಡಿಟ್ಟುಕೊಂಡಿದ್ದಾರೆ. ಗೋಪಾಲರಾವ್ ಕಟ್ಟಿಮನಿ ಎಂಬ ಜೆಡಿಎಸ್ ಅಭ್ಯರ್ಥಿ ಮೂರನೆ ಸ್ಥಾನಕ್ಕೆ ಮಾತ್ರ ಸೀಮಿತವಾಗಬಲ್ಲ ವ್ಯಕ್ತಿ. ಹೀಗಾಗಿ ಇಲ್ಲಿ ಸುನೀಲ ಮಲ್ಯುಪುರೆ ಎಂಬ ಬಿಜೆಪಿಯ ವ್ಯಕ್ತಿ ಆಯ್ಕೆಯಾಗುತ್ತಾನೆ. ಇದು ವೈಜನಾಥ ಪಾಟೀಲ ಹಾಗೂ ಕೈಲಾಸನಾಥ ಪಾಟೀಲನಂಥ ಅರ್ಧಮರ್ಧ ಲಿಂಗಾಯತರಿಂದ ಇದು ಸಾಧ್ಯವಾಗುತ್ತಿರುವುದು ಇವರು ತಲುಪುತ್ತಿರುವ ಅಧಃಪತನದ ಸಂಕೇತ.

ಜೇವರ್ಗಿ


ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಈ ಬಾರಿ ತಾನೇ ಕೆಡವಿದ ಖೆಡ್ಡಾಕ್ಕೆ ಬೀಳುವ ಸ್ಪಷ್ಟ ಲಕ್ಷಣಗಳಿವೆ. ಇದಕ್ಕೆ ಬೇರೆಯವರ್‍ಯಾರು ಕಾರಣೀಭೂತರಲ್ಲ. ಜೆಡಿಎಸ್‌ನಿಂದ ಸ್ಪರ್ಧಿಸುತ್ತಿರುವ ಬಸರಾಜ ಬೂದಿಹಾಳ ಇಲ್ಲಿ ಯಾರಿಗೂ ಪರಿಚಯವಿರದ ಡಮ್ಮಿ ಕ್ಯಾಂಡಿಡೇಟ್. ಹೀಗಾಗಿ ಇಲ್ಲಿ ಧರ್ಮಸಿಂಗ್‌ನ ನಿರ್ಲಕ್ಷತನ ಮತ್ತು ಅನಿವಾರ್ಯ ಎಂಬಂತೆ ಬಿಜೆಪಿಯ ದೊಡ್ಡಪ್ಪಗೌಡ ನರಬೋಳ ಎಂಬ ಚಿಡ್ಡಿ ಗೆಲ್ಲುವ ಸಾಧ್ಯತೆಗಳಿವೆ. ಹಾಗಾದರೆ ಮುಂದೊಂದು ದಿನ ಬಿಜೆಪಿಯ ಚಿಡ್ಡಿಯನ್ನು ಅಪ್ಪಿಕೊಂಡದ್ದಕ್ಕೆ ಇಲ್ಲಿನ ಜನ ಪರಿತಾಪ ಪಡುವ ದುರಂತ ಕಾದಿದೆ.


ದೊಡ್ಡಪ್ಪಗೌಡ





ಗುಲಬರ್ಗಾ ಗ್ರಾಮೀಣ:


ಗುರುನಾಥ್

ಕಳೆದ ಬಾರಿ ಕಮಲಾಪುರ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದ ರೇವುನಾಯಕ ಬೆಳಮಗಿ ಚಿಡ್ಡಿ ತೊಟ್ಟು ಕುಣಿದಾಡಿದ್ದನ್ನು ಕ್ಷೇತ್ರದ ಬಹಳಷ್ಟು ಜನ ಕಂಡಿದ್ದಾರೆ. ಹೀಗಾಗಿ ಬೆಳಮಗಿ ಉಟ್ಟ ಧೋತರದ ಒಳಗಿನ ಚಿಡ್ಡಿ ಇಲ್ಲಿ ಅನಾಮತ್ತಾಗಿ ಕಳಚಿ ಬೀಳುತ್ತದೆ. ಜೆಡಿಎಸ್‌ನ ಸಿ.ಗುರುನಾಥ ಎಂಬ ಮಾಜಿ ಕಾರ್ಮಿಕ ಮಂತ್ರಿ ಮತ್ತೆ ಶಾಸಕತ್ವ ಪಡಕೊಳ್ಳುತ್ತಾನೆ. ಇದಕ್ಕೆ ಚಂದ್ರಿಕಾ ಪರಮೇಶ್ವರಿ ಎಂಬ ಕಾಂಗ್ರೆಸ್ ಅಭ್ಯರ್ಥಿಯ ನಿಸ್ಸಹಾಯಕತೆಯೂ ನೆರವಾಗಬಹುದು.

■ ವಿಶ್ವಾರಾಧ್ಯ ಸತ್ಯಂಪೇಟೆ

...ದ್ದಾನೆ. ವ್ಯಕ್ತಿತ್ವ, ಸಜ್ಜನಿಕೆ ಹಾಗು ಕ್ಷೇತ್ರದ ಅಭಿವೃದ್ಧಿಯ ...ಯಿಂದ ಬಿ.ಆರ್.ಪಾಟೀಲ ಗೆದ್ದುಬರಬೇಕಾಗಿದೆ. ಆದರೆ ...ಷ್ ಗುತ್ತೇದಾರ ಹರಿಸಲಿರುವ ಹೆಂಡದ ಹಣದ ಎದುರು ಕಷ್ಟವಾಗಬಹುದು.

...ಮೂವತ್ತೈದು ವರ್ಷಗಳಿಂದ ಕಾಂಗ್ರೆಸ್ಸಿನಲ್ಲಿದ್ದುಕೊಂಡು ... ಪಕ್ಷಗಳ ನಾಯಕರ ಜೊತೆ ಯಾವ ಬಾದರಾಯಣ ...ಂಧವ್ವೂ ಇಟ್ಟುಕೊಳ್ಳದಿದ್ದ ಶಹಾಪುರ ಮತಕ್ಷೇತ್ರದ ...ಶಿವಶರಣಪ್ಪನನ್ನು ಖರ್ಗೆ ಅದೇಕೋ ಟಿಕೆಟ್ ನೀಡದೆ ...ಸಿಬಿಟ್ಟರು. ಇದು ಈಗ ಇಡೀ ಕ್ಷೇತ್ರದ ತುಂಬ ...ಶರಣಪ್ಪನ ಪರವಾದ ಅನುಕಂಪದ ಅಲೆಯಾಗಿ ...ರ್ತನವಾಗಿದೆ. ಜೊತೆಗೆ ಶರಣಬಸಪ್ಪ ದರ್ಶನಾಪುರನ ...ಕೆ, ಆತನ ಸಹೋದರ ಅಮರೇಶಗೌಡ ಮತ್ತು ಕಾಕ ...ರಾಜಪ್ಪಗೌಡನ ಅಟ್ಟಹಾಸ ಜನಸಾಮಾನ್ಯರನ್ನು ...ಗೊಳಿಸಿದೆ. ಇದೆಲ್ಲವನ್ನು ಸರಿಯಾಗಿ ಗ್ರಹಿಸಿದ ಮೂಲ ...ಈಗ ಶಿವಶರಣಪ್ಪ ಪಾಟೀಲ ಕೊನೆಗಳಿಗೆಯಲ್ಲಿ ಜೆಡಿಎಸ್ ...ಸ್ಸಿ ಈ ಬಾರಿ ಆತನು ಭರ್ಜರಿ ಗೆಲುವು ಸಾಧಿಸಿದರೆ ... ಆಶ್ಚರ್ಯಪಡಬೇಕಿಲ್ಲ.

...ಲಬುರ್ಗಾ ದಕ್ಷಿಣ ಕ್ಷೇತ್ರಕ್ಕೆ ನಿಂತಿರುವ ಬಿಜೆಪಿ ಅಭ್ಯರ್ಥಿ ...ಶೇಖರ ಪಾಟೀಲ ರೇವೂರ ಹೇಳಿಕೇಳಿ ಗೌಡ್ರು ಮನೆತನದ ... ಈತನಿಗೆ ಬಸವೇಶ ಎಂದರೇನೆಂಬುದೇ ಗೊತ್ತಿಲ್ಲ. ...ವನ್ನೆಲ್ಲ ಕಳೆದ ಬಾರಿ ಚುನಾಯಿಸಿ ಮತದಾರ

ತನ್ನ ಹಣೆ ಹಣೆ ಬಡಕೊಂಡಿದ್ದ. ಆದರೂ ಈ ಮಹಾಶಯನಿಗೆ ಟಿಕೆಟ್ ನೀಡಿ ಬಿಜೆಪಿ ತನ್ನ ಕಾಲ ಮೇಲೆ ತಾನೆ ಕಲ್ಲು ಹಾಕಿಕೊಂಡಾಗಿದೆ. ಇನ್ನು ಕಾಂಗ್ರೆಸ್ಸಿನಿಂದ ನಿಂತಿರುವ ಬಸವರಾಜ ಭೀಮಳ್ಳಿ ಎಂಬ ಫ್ಯೂಡಲ್ ಗುಣಗಳ ಅಪ್ಪಟ ಅಬ್ಕಾರಿ. ಹೀಗಾಗಿ ಸಹಜವಾಗಿ ಇಲ್ಲಿ ಹೋರಾಟಗಾರ ಜೆಡಿಎಸ್‌ನ ಎಸ್.ಕೆ.ಕಾಂತಾ ಗೆಲುವು ಸುಲಭವಾಗುತ್ತದೆ.

ಗುಲಬರ್ಗಾ ಗ್ರಾಮೀಣ ಮತಕ್ಷೇತ್ರದಲ್ಲಿ ಚಂದ್ರಿಕಾ ಪರಮೇಶ್ವರಿ ಎಂಬ ಹೆಣ್ಣುಮಗಳಿಗೆ ಕಾಂಗ್ರೆಸ್ ಅದು ಹೇಗೆ ಟಿಕೆಟ್ ನೀಡಿತೋ ಊಹಿಸುವುದಕ್ಕೂ ಕಷ್ಟವಾಗುತ್ತದೆ. ಯಾಕೆಂದರೆ ಈ ಹೆಣ್ಣುಮಗಳ ಬಗ್ಗೆ ಇಲ್ಲಿ ಯಾರಿಗೂ ಅಷ್ಟಾಗಿ ಗೊತ್ತಿಲ್ಲ. ಬಿಜೆಪಿಯಿಂದ ಸ್ಪರ್ಧಿಸಿರುವ ರೇವೂ ನಾಯಕ ಬೆಳಮಗಿ ಕಳೆದ ಬಾರಿ ಕಮಲಾಪುರ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿ ಬಂದು ತನ್ನ ಹಸ್ತರೇಖೆಯನ್ನು ಎಲ್ಲರಿಗೂ ತೋರಿಸಿಕೊಂಡಿದ್ದಾನೆ. ಹೀಗಾಗಿ ಇಲ್ಲಿ ಅನಿವಾರ್ಯವಾಗಿ ಶಹಾಬಾದ ಮತಕ್ಷೇತ್ರದಿಂದ ಹಿಂದೊಂದು ಬಾರಿ ಜೆಡಿಎಸ್‌ನಿಂದ ಗೆದ್ದಿದ್ದ ಸಿ.ಗುರುನಾಥ ಈಗಲೂ ಜೆಡಿಎಸ್‌ನಿಂದ ಗೆದ್ದುಬರಬಹುದು.


ಇದೆಲ್ಲವನ್ನು ನೋಡಿದರೆ, ದೇವೇಗೌಡರ ಜೆಡಿಎಸ್ ಪಕ್ಷ ಕೇವಲ ಹಳೇ ಮೈಸೂರಿನಲ್ಲಿ ಮಾತ್ರವಲ್ಲ, ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲೂ ಗಟ್ಟಿಯಾಗಿದ್ದು ಅಲ್ಲಿಂದಲೂ ಹಲವು ಸೀಟುಗಳನ್ನು ಗೆದ್ದುಬರಲಿದೆ ಎಂಬುದು ಅರ್ಥವಾಗುತ್ತದೆ.


■ ವರದಿಗಾರ

ಬಸವಣ್ಣನ ಕರ್ಮಭೂಮಿಯಲ್ಲಿ ಕಮಲ ಎಂಬ ಕರ್ಮ

ಬಸವಣ್ಣನ ಕರ್ಮಭೂಮಿಯಾದ ಬೀದರ್ ಜಿಲ್ಲೆಯಲ್ಲಿ ಬಿಜೆಪಿಯ ಕಮಲ ಅರಳುವುದೇ ಲಿಂಗಾಯತರಿಗೆ ಒಂದು ಅವಮಾನದ ವಿಷಯವಾಗಬೇಕಿತ್ತು. ಆದರೆ ಇಲ್ಲಿನ ಬಹಳಷ್ಟು ಲಿಂಗಾಯತರು ಇವತ್ತು ಚಿಡ್ಡಿ ತೊಟ್ಟಿರುವ ಲಿಂಗಾಯತ ಲೀಡರ್‌ಗಳನ್ನು ಗೆಲ್ಲಿಸುವ ಸೂಚನೆ ಇದೆ. ಇದೆಲ್ಲವರ ಮಧ್ಯೆ ಆನೆಯೊಂದು ದಾಪುಗಾಲು ಹಾಕುವ ಲಕ್ಷಣಗಳಿವೆ.

ಭಾಲ್ಕಿ


ಪ್ರಕಾಶ್ ಖಂಡ್ರೆ


ಅನಿಲ ಭುಸಾರೆ

ಹಣಾಹಣಿಗೆ ಹೆಸರಾದ ಕ್ಷೇತ್ರಗಳಲ್ಲಿ ಒಂದೆಂಬ ಪ್ರತೀತಿ ಭಾಲ್ಕಿಗೆ. ಸಹೋದರ ಸಂಬಂಧಿಗಳಾದ ಪ್ರಕಾಶ ಖಂಡ್ರೆ ಕಮಲವನ್ನು ಕೈಯಲ್ಲಿ ಹಿಡಿದು ಹೊರಟಿದ್ದರೆ, ಇನ್ನೊಂದು ಕಡೆ ಈಶ್ವರ ಖಂಡ್ರೆ ಕೈಯ ಕೈಹಿಡಿದುಕೊಂಡಿದ್ದಾರೆ. ಇಬ್ಬರದೂ ಸಮಬಲ ಹೋರಾಟ. ಇಲ್ಲಿಯ ಮರಾಠ ಓಟುಗಳು ಇಬ್ಬರ ಸೋಲು-ಗೆಲುವುಗಳನ್ನು ನಿರ್ಧರಿಸುತ್ತವೆ. ಈ ಬಾರಿ ಜೆಡಿಎಸ್‌ನಿಂದ ಅನಿಲ ಭುಸಾರೆ ಎಂಬ ಮರಾಠ ನಿಂತಿರುವುದು ಬಿಜೆಪಿಗೆ ನುಂಗಲಾಗದ ತುತ್ತಾಗಿದೆ. ಸುಮಾರು ದಶಕಗಳ ಕಾಲ ಕಮಲದ ಕೈಹಿಡಿದ ಇಲ್ಲಿನ ಮತದಾರ ಇದೀಗ ಕೈಯನ್ನು ಒಂದು ಬಾರಿ ಹಿಡಕೊಂಡು ಈಶ್ವರ ಖಂಡ್ರೆಯನ್ನು ಆಲಂಗಿಸುವ ಇರಾದೆ ಹೊಂದಿದ್ದಾನೆ.


ಹುಮ್ನಾಬಾದ




ಮಿರಾಜುದ್ದೀನ್

ಸದಾ ತ್ರಿಕೋನ ಸ್ಪರ್ಧೆಗೆ ಹೆಸರಾದ ಕ್ಷೇತ್ರ ಇದು. ಜೆಡಿಎಸ್‌ನ ರಾಜ್ಯಾಧ್ಯಕ್ಷ ಮಿರಾಜುದ್ದೀನ ಪಟೇಲ್ ಕ್ಷೇತ್ರ ಮರುವಿಂಗಡಣೆಯಿಂದ ತಮ್ಮ ಮತಗಳನ್ನು, ಜೊತೆಗೆ ತಮ್ಮ ಜನಪ್ರಿಯತೆಯನ್ನು ಕಳಕೊಂಡಿದ್ದಾರೆ. ಆದರೂ ಜಾತಿ ಲೆಕ್ಕಾಚಾರಗಳಿಂದ ಮತಗಳು ವಿಭಜನೆ ಆದರೆ ಮಿರಾಜುದ್ದೀನ್ ಮಿಂಚಬಹುದು. ಸದ್ಯದ ಕುಸ್ತಿಯಲ್ಲಿ ಕಾಂಗ್ರೆಸ್‌ನ ರಾಜಶೇಖರ ಪಾಟೀಲರಿಗೆ ಜನ ಕೈಕೊಟ್ಟು ಕಮಲದ ಸುಭಾಸ ಕಲ್ಲೂರ ಕೈ ಹಿಡಿಯುವ ಸೂಚನೆಗಳಿವೆ. ಇದು ಇಲ್ಲಿನ ಜನಗಳ ದುರಂತವೆನ್ನದೆ ವಿಧಿಯಿಲ್ಲವಾಗಿದೆ.

ಬೀದರ


ಗುರುಪಾದಪ್ಪ

ಕಾಂಗ್ರೆಸ್‌ನ ಗುರುಪಾದಪ್ಪ ನಾಗಮಾರಪಳ್ಳಿ ಸ್ಪರ್ಧಿಸಿದ ಕ್ಷೇತ್ರ ಇದಾಗಿರುವುದರಿಂದ ಸಹಜವಾಗಿಯೆ ಮಾಧ್ಯಮಗಳೆಲ್ಲರ ಕಣ್ಣು ಬೀದರನತ್ತ ಹರಿದಿದೆ. ಸಾಕಷ್ಟು ವಿರೋಧದ ನಡುವೆ ಕಾಂಗ್ರೆಸ್ ಟಿಕೆಟ್ ಹೊಡಕೊಂಡು ಬಂದ ಗುರುಪಾದಪ್ಪ ನಾಗಮಾರಪಳ್ಳಿಯ ಕಸುವು ಈಗಾಗಲೇ ಸಾಕಷ್ಟು ವ್ಯಯವಾಗಿದೆ. ಇಲ್ಲಿನ ಮುಸ್ಲಿಂ ಮುಖಂಡರೂ ನಾಗಮಾರಪಳ್ಳಿಯ ಬಗ್ಗೆ ಮುನಿಸಿಕೊಂಡಿದ್ದಾರೆ. ಜೆಡಿಎಸ್‌ನಿಂದ ರಾಜಶ್ರೀ ಸ್ವಾಮಿ ನಿಂತಿದ್ದಾರಾದರೂ ಅವರ ಬೇರುಗಳು ಆಳದಲ್ಲಿಲ್ಲ. ಇನ್ನುಳಿದಂತೆ ಬಿಜೆಪಿಯ ರಘುನಾಥರಾವ ಮಲ್ಕಾಪೂರೆ ಒಡ್ಡುವ ತೀವ್ರ ಸ್ಪರ್ಧೆ ಬಿಎಸ್‌ಪಿಯ ರಹೀಮ ಖಾನಗೆ ಉರುಳಾದರೆ ಗುರುಪಾದಪ್ಪ ನಾಗಮಾರಪಳ್ಳಿ ಗೆಲ್ಲುತ್ತಾರೆ.

ಬಸವಕಲ್ಯಾಣ


ಖೂಬಾ


ಬಸವಣ್ಣನವರ ಕರ್ಮಭೂಮಿಯಲ್ಲಿ ಕಮಲ ಅರಳಬೇಕೆ? ಎಂಬ ಜಿಜ್ಞಾಸೆಯಲ್ಲಿ ತೊಡಗಿರುವ ಇಲ್ಲಿನ ಲಿಂಗಾಯತರು ಬಿಜೆಪಿಯ ಬಸವರಾಜ ಪಾಟೀಲ ಅಟ್ಟೂರನ ಬಗೆಗೆ ಇದ್ದ ಪ್ರೇಮವನ್ನೂ ಬದಿಗೊತ್ತಿದ್ದಾರೆ. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾನಂತೂ ಕಳೆದ ಸಲ ಗೆದ್ದುಬಂದು ತನ್ನ ಖದರು ಕಳಕೊಂಡಿದ್ದಾನೆ. ಈ ಬಾರಿ ಮುಸ್ಲಿಂ ಸಮುದಾಯ ಹಾಗು ಮರಾಠ ಮತಗಳು ನಿರ್ಣಾಯಕವಾಗಿರುವುದರಿಂದ ಕಾಂಗ್ರೆಸ್‌ನ ಎಂ.ಜಿ.ಮುಳೆ ಗೆದ್ದುಬರುವ ಸಾಧ್ಯತೆ ಹೆಚ್ಚಾಗಿವೆಯಾದರೂ ಲಿಂಗಾಯತರು ತಮ್ಮ ತತ್ವ ಸಿದ್ಧಾಂತ ಮರೆತರೆ ಬಸವನ ನೆಲದಲ್ಲೂ ಚಿಡ್ಡಿಗಳು ಕುಣಿದಾಡುವ ದುರಂತ ನಾವೆಲ್ಲ ಕಾಣಬೇಕಾಗುತ್ತದೆ.

ಔರಾದ


ನರಸಿಂಗರಾವ್

ಗುರುಪಾದಪ್ಪ ನಾಗಮಾರಪಳ್ಳಿಯವರ ಸ್ಥಾಪಿತ ನಾಯಕತ್ವದ ಹಿಡಿತದಿಂದ ತಪ್ಪಿಸಿಕೊಂಡು ಈಗ ಮೀಸಲು ಕ್ಷೇತ್ರವಾಗಿರುವ ಔರಾದನಲ್ಲಿ ಮೊದಲ ಗೆಲುವು ತಮ್ಮದಾಗಿಸಿಕೊಳ್ಳಬೇಕೆಂಬ ಹಂಬಲ ಇಲ್ಲಿ ಸ್ಪರ್ಧಿಸಿರುವ ಎಲ್ಲರಿಗೂ ಇದೆ. ಆದರಲ್ಲೂ ಕಾಂಗ್ರೆಸ್‌ನ ನರಸಿಂಗರಾವ್ ಸೂರ್ಯವಂಶಿ ಎಂಬ ಹಾಲಿ ಸಂಸದ ಗುಂಡಪ್ಪ ವಕೀಲರ ಬೆಂಬಲ ಪಡೆದು ಗೆಲ್ಲಲೇಬೇಕೆಂದು ಹೊರಟಿದ್ದಾರೆ. ಈತನಿಗೆ ಅಡ್ಡಗಾಲಾಗಿ ಬಿಜೆಪಿಯ ಪ್ರಭು ಚವ್ಹಾಣ ನಿಂತಿದ್ದಾನೆ. ಆದರೆ ಆತನಿಗೆ ಅಡ್ಡಗಾಲಾಗಿ ಬಿಎಸ್ಪಿಯ ವೈಜನಾಥ ಸೂರ್ಯವಂಶಿ ನಿಂತಿದ್ದಾನೆ. ಇವರಿಬ್ಬರ ಗುದ್ದಾಟದಲ್ಲಿ ನರಸಿಂಗರಾವ ಸೂರ್ಯವಂಶಿಗೆ ಲಾಭವಾಗುವ ಸಾಧ್ಯತೆಗಳಿವೆ. ಜೆಡಿಎಸ್‌ನ ಅಭ್ಯರ್ಥಿ ಬಾಬುರಾವ್ ಕದಮ್ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದ್ದಾರೆ.

ಬೀದರ ದಕ್ಷಿಣ



ಮಿರಾಜುದ್ದೀನ್ ಪಟೇಲನ ಸಹೋದರ ನಸೀಮ ಪಟೇಲ್ ಇಲ್ಲಿ ಬಿಎಸ್‌ಪಿಯಿಂದ ಸ್ಪರ್ಧಿಸಿದ್ದಾನೆ. ಈ ಹಿಂದೆ ಹುಮ್ನಾಬಾದ ಮತಕ್ಷೇತ್ರದಲ್ಲಿ ಬರುತ್ತಿದ್ದ ಬಗದಲ್ ವೃತ್ತ ಇದೀಗ ಬೀದರ ದಕ್ಷಿಣಕ್ಕೆ ಹೊಂದಿಕೊಂಡಿದ್ದು ಇವರ ಕಸುವು ಹೆಚ್ಚಿಸಲು ಕಾರಣವಾಗಿದೆ. ಜೆಡಿಎಸ್‌ನ ಬಂಡೆಪ್ಪ ಖಾಶೆಂಪುರ ತನ್ನ ವ್ಯಕ್ತಿತ್ವವನ್ನು ಪಣಕ್ಕಿಟ್ಟು ಗೆಲ್ಲಲೇಬೇಕೆಂದು ಹೊರಟಿದ್ದಾನೆ. ಬಿಜೆಪಿಯ ಸಂಜಯ ಖೇಣಿಯೂ ತನ್ನ ಚರಿಷ್ಮಾ ಕಂಡುಕೊಳ್ಳಲು ಸಜ್ಜಾಗಿದ್ದಾನೆ. ಎಲ್ಲೋ ಇದ್ದ ಸಮದ್ ಸಿದ್ದಕಿ ಎಂಬ ಕಾಂಗ್ರೆಸ್ ಅಭ್ಯರ್ಥಿ ಇಲ್ಲಿ ಆಟಕ್ಕೂ, ಲೆಕ್ಕಕ್ಕೂ ಇಲ್ಲ. ಹೀಗಾಗಿ ಇವರೆಲ್ಲರನ್ನು ಹಿಂದಿಕ್ಕಿ ಆನೆ ತನ್ನ ಹಾದಿಯನ್ನು ಸುಗಮಗೊಳಿಸುವ ... ದಟ್ಟವಾಗಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ

ಬಿಜಾಪುರ: ಬಿಜೆಪಿ-ಕಾಂಗ್ರೆಸ್ ಸಮಬಲದ ಹೋರಾಟ!

ಚುನಾವಣೆ 2008

ಬಿರಗಾಲ ಮತ್ತು ಗೋಲಗುಮ್ಮಟಗಳಿಗೆ ಪ್ರಸಿದ್ಧಿಯಾಗಿರುವ ಬಿಜಾಪುರದಲ್ಲೀಗ ಚುನಾವಣಾ ಬಿಸಿ ಏರತೊಡಗಿದೆ. ಚುನಾವಣೆಯ ಪರಿಣಾಮವಾಗಿ ಕುಡಿಯಲು ಯೋಗ್ಯ ನೀರು ಸಿಗುತ್ತೋ ಇಲ್ಲವೋ ಗ್ಯಾರಂಟಿಯಿಲ್ಲ, ಆದರೆ ಸಾರಾಯಿ ಮಾತ್ರ ಗ್ಯಾರಂಟಿಯಾಗಿ ಹರಿಯುತ್ತಿದೆ. ಇನ್ನು ಕೆಲಸವಿಲ್ಲದೇ ಕುಳಿತಿರುವ ಪುರುಷರಿಗೆ, ಮಹಿಳೆಯರಿಗೆ ರಾಜಕೀಯ ಪಕ್ಷಗಳ ಪರವಾಗಿ ಓಡಾಡುವ ಕೆಲಸವಂತೂ ಸಿಕ್ಕಿದೆ. ಅದಕ್ಕವರಿಗೆ ಸಿಗುವುದು ದಿನವೊಂದಕ್ಕೆ ಎರಡು ಹೊತ್ತು ಊಟ ಮತ್ತು ನೂರು ರೂಪಾಯಿ.

ಮರಣದಂಡನೆ ಶಿಕ್ಷೆಗೊಳಗಾದ ಕೈದಿಗೆ ಶಿಕ್ಷೆಯ ದಿನ ಹತ್ತಿರವಾದಂತೆ ಹೆಚ್ಚಾಗುವ ಆತಂಕದಂತೆಯೇ ಚುನಾವಣೆಯ ದಿನ ಹತ್ತಿರವಾಗುತ್ತಿರುವಂತೆ ಅಭ್ಯರ್ಥಿಗಳಿಗೂ ಆಗುತ್ತಿದೆ.

ಸದ್ಯಕ್ಕಿರುವ ಪರಿಸ್ಥಿತಿಯನ್ನಾಧರಿಸಿ ಹೇಳುವುದಾದರೆ, ಜಿಲ್ಲೆಯಲ್ಲಿರುವ ಎಂಟು ಕ್ಷೇತ್ರಗಳಲ್ಲಿ ಪ್ರಧಾನ ಪೈಪೋಟಿ ನಡೆಯುತ್ತಿರುವುದು ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ. ಅವೆರಡೂ ಪಕ್ಷಗಳು ತಲಾ ಮೂರರಿಂದ ನಾಲ್ಕು ಕ್ಷೇತ್ರಗಳನ್ನು ಬುಟ್ಟಿಗೆ ಹಾಕಿಕೊಳ್ಳಬಹುದು. ಜೆಡಿಎಸ್ ಒಂದು ಕ್ಷೇತ್ರದಲ್ಲಿ ಗೆಲ್ಲುವ ಸಾಧ್ಯತೆಯಿದೆ.

ಬಿಜಾಪುರ


ಪಟ್ಟಣಶೆಟ್ಟಿ

ಕುಡಿಯುವ ನೀರಿನ ಭೀಕರ ಸಮಸ್ಯೆಗೆ ಹೆಸರುವಾಸಿಯಾದ ಕ್ಷೇತ್ರವಿದು. ಕನಿಷ್ಠ ಮೂರು ದಿನಗಳಿಗೊಮ್ಮೆಯಾದರೂ ನೀರು ಬಿಡುವೆ ಎಂದು ರೈಲು ಬಿಟ್ಟಿದ್ದ ಚಡ್ಡಿ ಅಪ್ಪು ಪಟ್ಟಣಶೆಟ್ಟಿ ಅದನ್ನು ಈಡೇರಿಸಲಿಲ್ಲ. ಹಾಗಾಗಿ, ನೀರು ಬಿಡದ ತನಗೆ ಜನ ನೀರಿಳಿಸುವುದು ಗ್ಯಾರಂಟಿ ಎಂದು ಪಟ್ಟಣಶೆಟ್ಟಿಗೆ ಅರಿವಾದಂತಿದೆ. ಇನ್ನೊಂದೆಡೆಗೆ ಸಂಸದ ಬಸವನಗೌಡ ಪಾಟೀಲ್ ಯತ್ನಾಳ್ ಕೂಡ ಅಪ್ಪುವನ್ನು ಅಪ್ಪಚ್ಚಿ ಮಾಡುವುದಾಗಿ ಬಹಿರಂಗ ಸೆಡ್ಡು ಹೊಡೆದು ತನ್ನ ಸಹೋದರ ಸಂಬಂಧಿ ಈಶ್ವರಪ್ಪಗೌಡನನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸಿರುವುದು ಅಪ್ಪು ಪಟ್ಟಣಶೆಟ್ಟಿಯ ಮುಖದ ಮೇಲೆ ಬೆವರಿಳಿಯುತ್ತಿರುವುದಕ್ಕೆ ಇನ್ನೊಂದು ಕಾರಣವಾಗಿದೆ.

ಇನ್ನು ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ಎಸ್.ಎ.ಹೊರ್ತಿ ಮುಸ್ಲಿಮ್ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವುದರಿಂದ ಈ ಕ್ಷೇತ್ರದಲ್ಲಿ ಅಧಿಕವಾಗಿರುವ ಮುಸ್ಲಿಮ್ ಮತಗಳು ಕಾಂಗ್ರೆಸ್‌ನ ಕೈ ಹಿಡಿಯಲಿವೆ. ಹೊರ್ತಿ ಕ್ಷೇತ್ರಕ್ಕೆ ಚಿರಪರಿಚಿತವಾಗಿದ್ದು ಜನಕ್ಕೆ ಹತ್ತಿರವಾಗಿರುವುದರಿಂದ ಆತ ಈ ಬಾರಿ ಅಪ್ಪು ಪಟ್ಟಣಶೆಟ್ಟಿಗೆ ಪ್ರಬಲ ಪೈಪೋಟಿ ನೀಡುವುದಂತೂ ಸತ್ಯ.


ಅಪ್ಪು ಪಟ್ಟಣಶೆಟ್ಟಿಯನ್ನು ಮಟ್ಟಹಾಕಲು ಹಾಕಿರುವ ಸ್ಕೆಚ್ ಅನ್ನು ಕಾರ್ಯಗತಗೊಳಿಸಲು ಯತ್ನಾಳ್ ಪ್ರಯತ್ನ ಮಾಡಿದ್ರೇ ಆದರೆ ಹೊರ್ತಿ ಗೆಲುವಿನ ನಗೆ ಬೀರಬಹುದು. ಜೆಡಿಎಸ್‌ನಿಂದ ಬಿ.ಎಚ್.ಮಹಾಬರಿ, ಜೆಡಿಯುನಿಂದ ಶಶಿಕಾಂತ ತಾವರಕೇರಿ, ಬಿಎಸ್ಪಿಯಿಂದ ರಾಜುಗೌಡ ನಾನಾಗೌಡ ಪಾಟೀಲ್ ನಿಂತಿದ್ದಾರೆ. ಆದರೆ ಅವರು ಮೂರು ಮತ್ತು ನಂತರದ ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳಬೇಕಷ್ಟೆ.

ಮುದ್ದೇಬಿಹಾಳ






ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಿ.ಎಸ್.ನಾಡಗೌಡನ ಮುಖ ಒಣಗಿದೆ. ಇಲ್ಲಿ ಸುರಿಯುತ್ತಿರುವ ಉರಿ ಉರಿ ಬಿಸಿಲಿನಿಂದಾಗಿ ಅಲ್ಲ. ತನ್ನ ಕಾರ್ಯಕರ್ತರೇ ತನ್ನ ವಿರುದ್ಧವಾಗಿ ಕೆಲಸ ಮಾಡುತ್ತಿರುವುದರಿಂದ ಹಾಗೂ ಬಿಎಸ್ಪಿ ಮತ್ತು ಸಮಾಜವಾದಿ ಪಕ್ಷಗಳು ತನ್ನ ಓಟನ ಬುಟ್ಟಿಗೆ ಕೈಹಾಕುತ್ತಿರುವುದರಿಂದ.




ಕ್ಷೇತ್ರದಲ್ಲಿ ಲಿಂಗಾಯತರ ನಂತರ ಕುರುಬರೇ ನಿರ್ಣಾಯಕರು. ಹಾಗಾಗಿ, ಈ ಜನಾಂಗದ ನಿಂಗಪ್ಪ ಬಪ್ಪರಗಿಯನ್ನು ಬಿಎಸ್ಪಿ ಕಣಕ್ಕಿಳಿಸಿದೆ. ಸಮಾಜವಾದಿಯಿಂದ ನಿಂತಿರುವ ಪಂಚಮಸಾಲಿ ಲಿಂಗಾಯತ ಮಹಾಂತಗೌಡ ಪಾಟೀಲ್ ಸೈಕಲನ್ನು ಜೋರಾಗಿ ತುಳಿಯುತ್ತಿದ್ದಾನೆ. ಇವರಿಬ್ಬರ ಕಾರಣದಿಂದ ಈ ಬಾರಿ ಕಾಂಗ್ರೆಸ್‌ಗೆ ಭಾರಿ ಹೊಡೆತ ಬೀಳಲಿದೆ. ಈ ಹಿಂದೆ ಶಾಸಕಿಯಾಗಿದ್ದ ವಿಮಲಾಭಾಯಿ ದೇಶಮುಖ್ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದಾಳೆ. ಆದರೆ ಗೆಲ್ಲುವುದು ದೂರದ ಮಾತು.

ಇದೆಲ್ಲದರ ಲಾಭ ಪಡೆಯುವ ಉತ್ಸಾಹದಲ್ಲಿ ಬಿಜೆಪಿಯ ಮಂಗಳಾದೇವಿ ಬಿರಾದಾರ್ ಲೆಕ್ಕ ಹಾಕುತ್ತಾ ಕುಳಿತಿದ್ದಾಳೆ. ಗಂಡನ ಕಳಪೆ ಕಂಟ್ರಾಕ್ಟಗಿರಿಯಿಂದ ಕಮಾಯಿಸಿದ ಹಣವನ್ನು ಮತದಾರರ ಖರೀದಿಗಾಗಿ ಖರ್ಚು ಮಾಡುತ್ತಿದ್ದಾಳೆ. ಪಕ್ಷೇತರರಾಗಿ ಕಾಶೀಮ್ ಪಾಟೀಲ್ ಯಲಗುರದಪ್ಪ ದೇಸಾಯಿ, ಬಾಬಾ ಸಾಹೇಬ್ ಭೋಸಲೆ, ಸೋಮಶೇಖರ್ ಸೇವಾಲಾಲ್ ಕಣದಲ್ಲಿದ್ದಾರಾದರೂ ಹಣಾಹಣಿಯಿರುವುದು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆಯೇ.

ದೇವರ ಹಿಪ್ಪರಗಿ


ಎ.ಎಸ್. ಪಾಟೀಲ್

ಈ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಶಿವಪುತ್ರಪ್ಪ ದೇಸಾಯಿಯ ಗತ್ತು-ಗಮ್ಮತ್ತು ಈ ಬಾರಿ ನಡೆಯೋದು ತುಸು ಕಷ್ಟ. ಈ ಚುನಾವಣೆ ಮುಗಿದ ಮೇಲೆ ತಾನೆಲ್ಲಿ ನಿರುದ್ಯೋಗಿಯಾಗಿಬಿಡುತ್ತೇನೋ ಎಂಬ ಭಯದಿಂದ ಬಿಜೆಪಿಯ ಬಸವನಗೌಡ ಪಾಟೀಲ್ ಯತ್ನಾಳ್ ಪಂಚಮಸಾಲಿಗಳನ್ನು ಓಲೈಸುವ ಸರ್ಕಸ್‌ನಲ್ಲಿ ನಿರತನಾಗಿದ್ದಾನೆ. ಆದರೆ ಪಕ್ಷೇತರ ಅಭ್ಯರ್ಥಿಯಾಗಿ ನಿಂತಿರುವ ಕಾಶೀನಾಥ್ ಮುಸಬಿಹಾಳ ಇವನಿಗೆ ಭೂತವಾಗಿ ಕಾಡುತ್ತಿರುವುದೂ ಅಷ್ಟೇ ಸತ್ಯ.


ಯತ್ನಾಳ್

ಕಾಂಗ್ರೆಸ್‌ನ ಎ.ಎಸ್.ಪಾಟೀಲ್ ನಡಹಳ್ಳಿ ಈ ಕ್ಷೇತ್ರವನ್ನು ತನ್ನದಾಗಿಸಿಕೊಳ್ಳಬೇಕೆಂದೇ ಕಳೆದ ಮೂರು ವರ್ಷದಿಂದ ಸಾಮೂಹಿಕ ವಿವಾಹ, ಶಾಲಾಮಕ್ಕಳಿಗೆ ಬ್ಯಾಗ್, ಪುಸ್ತಕ ವಿತರಣೆ ಮಾಡುತ್ತಾ ಅಗ್ಗದ ಪ್ರಚಾರ ಗಿಟ್ಟಿಸಿಕೊಂಡಿದ್ದಾನೆ. ಇಲ್ಲಿಯೂ ಕೂಡ ಹಣಾಹಣಿ ಏರ್ಪಡುವುದು ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯಾದರೂ ಯತ್ನಾಳ್ ಒಂದಿಷ್ಟು ಮುಂದಿದ್ದಾರೆ.

ಧಾರವಾಡ: ಕಾಂಗ್ರೆಸ್-ಬಿಜೆಪಿ ಹಗ್ಗ ಜಗ್ಗಾಟ

ಧಾರವಾಡ ಜಿಲ್ಲೆಯಲ್ಲಿ ಚುನಾವಣೆಯ ಕಾವೇರಿದೆ. ಇಲ್ಲಿ ಪ್ರಧಾನವಾಗಿ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ ನೇರ ಹಣಾಹಣಿ ಇದೆ. ಜಿಲ್ಲೆಯಲ್ಲಿರುವ ಒಟ್ಟು ಏಳು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳು ತಲಾ ಮೂರು ಸ್ಥಾನಗಳನ್ನು ಪಡೆದು ಸಮಬಲ ಸಾಧಿಸುವ ನಿರೀಕ್ಷೆಯಿದ್ದು ಜೆಡಿಎಸ್‌ಗೆ ಒಂದು ಸ್ಥಾನ ಸಿಗುವ ಸಾಧ್ಯತೆಯಿದೆ.

ಹುಬ್ಬಳ್ಳಿ-ಧಾರವಾಡ (ಮೀಸಲು): ಜಾತಿ ರಾಜಕಾರಣದಿಂದ ಕಾಂಗ್ರೆಸ್‌ಗೆ ಮೇಲುಗೈ


ಜಕ್ಕಪ್ಪನವರ್



ವೀರಭದ್ರಪ್ಪ


ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಮೀಸಲು ಕ್ಷೇತ್ರವಾಗಿ ಮೈದಳೆದಿರುವ ಕ್ಷೇತ್ರವಿದು. ಕಾಂಗ್ರೆಸ್‌ನಿಂದ ದಲಿತ ಬಲಗೈ ಗುಂಪಿನ ಎಸ್.ಎಚ್.ಜಕ್ಕಪ್ಪನವರ್ ಹಾಗೂ ಬಿಜೆಪಿಯಿಂದ ಎಡಗೈ ಗುಂಪಿನ ವೀರಭದ್ರಪ್ಪ ಹಾಲಹರವಿ ನಡುವೆ ನೇರವಾದ ಹಣಾಹಣಿಯಿದೆಯಾದರೂ ಜಯಕ್ಕೆ ಹತ್ತಿರದಲ್ಲಿರುವುದು ಎಚ್ಚ ಶಿಷ್ಯ ಜಕ್ಕಪ್ಪನವರ್.

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 20 ವಾರ್ಡುಗಳು ಬರುತ್ತವೆ. ಕಳೆದ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಹತ್ತು ವಾರ್ಡುಗಳಲ್ಲಿ ಬಿಜೆಪಿ ಹಾಗೂ ಒಂಭತ್ತು ವಾರ್ಡುಗಳಲ್ಲಿ ಕಾಂಗ್ರೆಸ್ ಹಾಗೂ ಒಂದರಲ್ಲಿ ಜೆಡಿಎಸ್ ಜಯ ಸಾಧಿಸಿದ್ದವು.

ಕ್ಷೇತ್ರದಲ್ಲಿ 42 ಸಾವಿರದಷ್ಟಿರುವ ಮುಸ್ಲಿಮ್ ಮತಗಳು ಹಾಗೂ 27 ಸಾವಿರದಷ್ಟಿರುವ ದಲಿತರ ಮತಗಳು ಅಭ್ಯರ್ಥಿಯ ಹಣೆಬರಹ ಬರೆಯುವಲ್ಲಿ ನಿರ್ಣಾಯಕವಾಗಿವೆ. 18 ಸಾವಿರ ಮತಗಳಿರುವ ಪಟ್ಟೆಗಾರ ಹಾಗೂ 40 ಸಾವಿರ ಮತಗಳಿರುವ ಲಿಂಗಾಯತರನ್ನು ಮಾತ್ರವೇ ಬಿಜೆಪಿ ನೆಚ್ಚಿಕೊಂಡಿದೆ. ಆದರೆ ಅವುಗಳೂ ಗ್ಯಾರಂಟಿಯಿಲ್ಲ. ಏಕೆಂದರೆ, ಈಗಾಗಲೇ ಅರ್ಧದಷ್ಟು ಮತದಾರರು ಕಾಂಗ್ರೆಸ್‌ನತ್ತ ಮುಖ ಮಾಡಿಯಾಗಿದೆ. ಬಿಜೆಪಿಯ ವಿರುದ್ಧ ರಜಪೂತ ಸಮಾಜದ 8000 ಮತಗಳನ್ನು ಹಾಗೂ ಜೈನ ಸಮುದಾಯದ 4000 ಮತಗಳನ್ನು ಈಗಾಗಲೇ ಕಾಂಗ್ರೆಸ್ ತನ್ನತ್ತ ಸೆಳೆದುಕೊಂಡಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಚ್.ಜಕ್ಕಪ್ಪನವರ್ ಗೆಲುವಿನ ನಗೆ ಬೀರುವ ಸಾಧ್ಯತೆಯಿದ್ದು ಬಿಜೆಪಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಿದೆ.

ಹುಬ್ಬಳ್ಳಿ-ಧಾರವಾಡ ಸೆಂಟ್ರಲ್: ಸೋಲಿನ ಭಯದಲ್ಲಿ ಶೆಟ್ಟರ್


ಶಂಕರಣ್ಣ ಮುನವಳ್ಳಿ


ಜಗದೀಶ್ ಶೆಟ್ಟರ್


ಕಾಂಗ್ರೆಸ್‌ನಿಂದ ಶಂಕರಣ್ಣ ಮುನವಳ್ಳಿ, ಬಿಜೆಪಿಯಿಂದ ಜಗದೀಶ್ ಶೆಟ್ಟರ್ ಹಾಗೂ ಜೆಡಿಎಸ್‌ನಿಂದ ಮಲ್ಲಿಕಾರ್ಜುನ ಕೊರವಿ ಕಣದಲ್ಲಿದ್ದಾರೆ. ಹಣಾಹಣಿಯಿರುವುದು ಶಂಕರಣ್ಣ ಮುನವಳ್ಳಿ ಹಾಗೂ ಜಗದೀಶ್ ಶೆಟ್ಟರ್ ನಡುವೆ.


ಗೆದ್ದೇ ತೀರುತ್ತೇನೆಂಬ ವಿಶ್ವಾಸದಿಂದ ಇಲ್ಲಿಯತನಕ ಬೀಗುತ್ತಿದ್ದ ಶೆಟ್ಟರ್‌ಗೆ ಮುನವಳ್ಳಿಯ ಬಿಸಿ ಬೆವರಿಳಿಸತೊಡಗಿದೆ. ಜಗದೀಶ್ ಶೆಟ್ಟರ್‌ನ ತಮ್ಮ ಪ್ರದೀಪ್ ಶೆಟ್ಟರ್ ಮಾಡಿದ ಅಧ್ವಾನಗಳೇ ಈ ಬಾರಿ ಜಗದೀಶ್ ಶೆಟ್ಟರ್ ದಾರಿಯಲ್ಲಿ ಮುಳ್ಳಾಗಿ ನಿಂತಿವೆ. ಈ ಕಾರಣಕ್ಕಾಗಿಯೇ ಶೆಟ್ಟರ್ ಈ ಬಾರಿ ಕ್ಷೇತ್ರ ಕೈ ತಪ್ಪಿಹೋಗುತ್ತದೆ ಎಂಬ ಭಯದಿಂದ ರಾಜ್ಯದ ಬೇರೆ ಕಡೆ ಪ್ರಚಾರಕ್ಕೆ ಹೋಗದೇ ಇಲ್ಲಿಯೇ ಗೂಟ ಹೊಡೆದುಕೊಂಡು ಹಣ ಚೆಲ್ಲುತ್ತಾ ಕುಳಿತಿದ್ದಾನೆ.

ಕ್ಷೇತ್ರದಲ್ಲಿ ಶೇ. 40ರಷ್ಟಿರುವ ಲಿಂಗಾಯತ ಮತಗಳಲ್ಲಿ ಅರ್ಧದಷ್ಟನ್ನು ಕಾಂಗ್ರೆಸ್ ಕಿತ್ತುಕೊಳ್ಳಲಿದೆ. ಶೇ. 20ರಷ್ಟಿರುವ ಮುಸ್ಲಿಮ್ ಮತಗಳೆಲ್ಲವೂ ಹೆಚ್ಚೂ ಕಡಿಮೆ ಕಾಂಗ್ರೆಸ್‌ನ ಪಾಲಾಗಲಿವೆ. ಶೇ. 10ರಷ್ಟಿರುವ ಪಟ್ಟೇಗಾರರಂತೂ ಶೆಟ್ಟರ ವಿರುದ್ಧ ಕುದಿಯುತ್ತಿದ್ದಾರೆ. ಏಕೆಂದರೆ ಕಮರಿಪೇಟೆಯ ಲದ್ವಾ ಹಾಗೂ ಸಂಜು ಕಾಟವೆಯನ್ನು ಚುನಾವಣೆ ಸಮಯದಲ್ಲಿ ಜೈಲಿಗೆ ಅಟ್ಟಿದ್ದರು. ಹಾಗಾಗಿ, ಅವರಲ್ಲಿ ಕನಿಷ್ಠ ಅರ್ಧದಷ್ಟು ಜನ ಕಾಂಗ್ರೆಸ್ ಕಡೆಗೆ ವಾಲಲಿದ್ದಾರೆ. ಇನ್ನು ಶೇ 15ರಷ್ಟಿರುವ ದಲಿತರ ಮತಗಳಲ್ಲಿ ಶೇ 10ರಷ್ಟರನ್ನು ಕಾಂಗ್ರೆಸ್ ಕೀಳುವ ಸಂಭವವಿದೆ. ಇದೆಲ್ಲವೂ ಶೆಟ್ಟರ್ ಕಷ್ಟದಲ್ಲಿರುವುದನ್ನು ತೋರಿಸುತ್ತದೆ. ಇನ್ನು ಬಿಜೆಪಿಯ ಒಳಗಡೆಯೇ ಯಡ್ಡಿಯ ಬಣದವರು ಶೆಟ್ಟರ್ ಕಾಲೆಳೆಯುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಈ ಎಲ್ಲ ಕಾರಣಗಳಿಂದ ಜಗದೀಶ್ ಶೆಟ್ಟರ್ ಸೋಲಿನಂಚಿನಲ್ಲಿರುವುದು ಸ್ಪಷ್ಟವಾಗಿದೆ. ಒಂದು ವೇಳೆ ಪವಾಡವೇನಾದರೂ ನಡೆದು ಶೆಟ್ಟರ್ ಗೆದ್ದರೂ ಅದು ಅಲ್ಪ ಅಂತರದಲ್ಲಿ ಮಾತ್ರ.

ಹುಬ್ಬಳ್ಳಿ-ಧಾರವಾಡ ಪಶ್ಚಿಮ: ಹುರುಪಿನಲ್ಲಿ ಹೊನ್ನಳ್ಳಿ!


ಜಬ್ಬರ್ ಖಾನ್ ಹೊನ್ನಳ್ಳಿ



ಕಾಂಗ್ರೆಸ್‌ನಿಂದ ಜಬ್ಬರ್‌ಖಾನ್ ಹೊನ್ನಳ್ಳಿ, ಬಿಜೆಪಿಯಿಂದ ಚಂದ್ರಕಾಂತ್ ಬೆಲ್ಲದ್ ಹಾಗೂ ಜೆಡಿಎಸ್‌ನಿಂದ ಮಹಮ್ಮದ್ ಇಸ್ಮಾಯಿಲ್ ತಮಟಗಾರ್ ಕಣದಲ್ಲಿದ್ದಾರೆ. ನೇರ ಜಿದ್ದಾಜಿದ್ದಿಯಿರುವುದು ಬೆಲ್ಲದ್ ಮತ್ತು ಹೊನ್ನಳ್ಳಿಯ ನಡುವೆ.


ಕ್ಷೇತ್ರದಲ್ಲಿ ಲಿಂಗಾಯತರು ಶೇ. 40ರಷ್ಟು, ಮುಸ್ಲಿಮರು ಶೇ. 30ರಷ್ಟು, ಮರಾಠರು ಶೇ. 10ರಷ್ಟು, ದಲಿತರು ಶೇ. 15ರಷ್ಟು ಇದ್ದಾರೆ. ಇದರಲ್ಲಿ ಚಂದ್ರಕಾಂತ್ ಬೆಲ್ಲದ್ ಪ್ರಧಾನವಾಗಿ ನಂಬಿರುವುದು ಲಿಂಗಾಯತ ಮತಗಳನ್ನು ಮಾತ್ರ. ಲಿಂಗಾಯತರೆಲ್ಲರೂ ಬಿಜೆಪಿಗೆ ಹಾಕುತ್ತಾರೆಂಬುದೂ ಗ್ಯಾರಂಟಿಯಿಲ್ಲ. ಯಾಕೆಂದರೆ ಕಾಂಗ್ರೆಸ್‌ಗೆ ಕೂಡ ತನ್ನ ಸಾಂಪ್ರದಾಯಿಕ ಮತಗಳ ಮೇಲೆ ಹಿಡಿತವಿದೆ. ನಿರ್ಣಾಯಕವಾಗಿರುವ ಮುಸ್ಲಿಮರು ಬಿಜೆಪಿಗಂತೂ ಓಟು ಹಾಕುವುದಿಲ್ಲ. ಅವೆಲ್ಲಾ ಕಾಂಗ್ರೆಸ್ಸಿನ ಪಾಲಾಗಲಿವೆ. ಇನ್ನೊಂದೆಡೆಗೆ ಬೆಲ್ಲದ್‌ನ ಖಾಸಾ ಸಹೋದರ ಶಿವಣ್ಣ ಬೆಲ್ಲದ್‌ನ ಸ್ಪರ್ಧೆ ಚಂದ್ರಕಾಂತನಿಗೆ ಹಾಗೂ ಜೆಡಿಎಸ್‌ನ ಇಸ್ಮಾಯಿಲ್ ತಮಟಗಾರ್‌ನ ಸ್ಪರ್ಧೆ ಹೊನ್ನಳ್ಳಿಗೆ ಒಂದಿಷ್ಟು ಹಾನಿ ಮಾಡುವುದಂತೂ ಸತ್ಯ.

...ಡಿ



...ಲ್ಲಿ ಮಾಜಿ ರೌಡಿ ರವಿಕಾಂತ್ ...ಲ್ ಈ ಬಾರಿ ...ಮಸಾಲಿಗಳಿಂದ ...ನಾಗಿದ್ದಾನೆ. ಈ ಸ್ಥಾನವನ್ನು ...ಸ್‌ನ ಯಶವಂತ ರಾಯಗೌಡ ...ಲ್ ತುಂಬುವ ಲಕ್ಷಣಗಳಿವೆ.

...ವಿಕಾಂತ ಮತ್ತು ಯಶವಂತರಾಯಗೌಡ ಕೇವಲ ತೋಳ್ಬಲ ಹಣಬಲದಲ್ಲಿ ಸರಿಸಮನಾಗಿದ್ದಾರೆ ಮಾತ್ರವಲ್ಲ, ಇಬ್ಬರೂ ...ಮಸಾಲಿ ಲಿಂಗಾಯತ ನಾಯಕರೂ ಹೌದು. ಆದರೆ, ಕ್ಷೇತ್ರದ ಮತದಾರ ಯಶವಂತರಾಯಗೌಡರ ಕಡೆಗೆ ಒಲಿಯುವ ಛಾನ್ಸುಗಳೇ ಜಾಸ್ತಿಯಿವೆ. ಏಕೆಂದರೆ, ಸತತ ಮೂರು ಬಾರಿ ಆಯ್ಕೆಯಾಗಿ ಹೋದ ರವಿಕಾಂತ ಕ್ಷೇತ್ರಕ್ಕೆ ಮಾಡಿದ್ದೂ ಅಷ್ಟಕ್ಕಷ್ಟೆಯೇ. ಇದೇ ಅವನಿಗೆ ಈ ಬಾರಿ ಮುಳುವಾದರೆ ಆತ ಪರ್ಮನೆಂಟಾಗಿ ರಾಜಕೀಯ ನಿವೃತ್ತಿ ಘೋಷಿಸಿಕೊಂಡು ವಿಶ್ರಾಂತಿಗಾಗಿ ಸೊಲ್ಲಾಪುರ ಸೇರಿಕೊಳ್ಳಬಹುದು.



...ಗಠಾಣ


...ದು ಭೀಮಾ ನದೀತಟದಲ್ಲಿರುವ ಮೀಸಲು ಕ್ಷೇತ್ರ. ಕಾಂಗ್ರೆಸ್‌ನ ...ಎಚ್.ಆಲಗೂರು, ಬಿಜೆಪಿಯ ವಿಠ್ಠಲ ಕಟಕದೊಂಡ ಹಾಗೂ ...ಸ್‌ನಿಂದ ಆರ್.ಕೆ.ರಾಠೋಡ್ ಕಣದಲ್ಲಿದ್ದಾರೆ. ಆಲಗೂರು ಪರ ...ಕ್ಕೊಂದು ಕಾಂಗ್ರೆಸ್‌ನ ಸೇವಾದಳದ ಜಿಲ್ಲಾ ಅಧ್ಯಕ್ಷ ಪುತ್ರಪ್ಪ ಭೈರಗೊಂಡ ...ಣಿ ಗ್ರಾಮದಲ್ಲಿದ್ದಾಗ ಅವರ ಮೇಲೆ ಕಂಟ್ರಿ ಪಿಸ್ತೂಲಿನಿಂದ



ಕಾಡತೂಸುಗಳ ಮಳೆಗರೆಯಲಾಗಿದೆ. ಅಪರಿಚಿತ ಸುಪಾರಿ ಭಂಟರ ಈ ಕೃತ್ಯ ಕಾಂಗ್ರೆಸ್ ಪರ ಒಂದಿಷ್ಟು ಸಿಂಪಥಿ ಅಲೆಯನ್ನು ಎಬ್ಬಿಸಿದೆ.

ಎರಡು ಬಾರಿ ಸೋತು ಸುಣ್ಣನಾಗಿರುವ ವಿಠ್ಠಲ್ ಕಟಕದೊಂಡ ಹ್ಯಾಟ್ರಿಕ್ ಸಾಧನೆಗಾಗಿ ಮತ್ತೆ ಕಣಕ್ಕಿಳಿದಿದ್ದಾರೆ. ಅವರು ಈ ಕಾರ್ಯದಲ್ಲಿ ಯಶಸ್ವಿಯಾಗುವುದು ಎಷ್ಟು ಸತ್ಯವೋ ಆಲಗೂರು ಗೆಲ್ಲುವುದೂ ಅಷ್ಟೇ ಸತ್ಯ.

ಸಿಂಧಗಿ



ಇಲ್ಲಿ ಜೆಡಿಎಸ್‌ನಿಂದ ಎಂ.ಸಿ.ಮನಗುಳಿ, ಕಾಂಗ್ರೆಸ್‌ನಿಂದ ಜಿಲ್ಲಾಧ್ಯಕ್ಷ ಶರಣಪ್ಪ ಸುಣಗಾರ್ ಹಾಗೂ ಬಿಜೆಪಿಯಿಂದ ರಮೇಶ್ ಭುಸನೂರ್ ಕಣದಲ್ಲಿದ್ದಾರೆ.


ಕಳೆದ ಬಾರಿ ಶರಣಪ್ಪ ಸುಣಗಾರ್ ವಿರುದ್ಧ ಗೆದ್ದಿದ್ದ ಮನಗುಳಿ ಜನಕಲ್ಯಾಣಕ್ಕೆ ಕಿಂಚಿತ್ತೂ ಪ್ರಯತ್ನಿಸದ ಕಾರಣ ಮುನಿಸಿಕೊಂಡಿರುವ ಮತದಾರ ಈ ಬಾರಿ ಸುಣಗಾರ್ ಕಡೆ ವಾಲುವ ನಿರೀಕ್ಷೆಯಿದೆ. ಸುಣಗಾರ್ ಕೂಡ ಕಳೆದ ಬಾರಿಯ ಸೋಲಿನಿಂದ ಒಂದಿಷ್ಟು ಪಾಠ ಕಲಿತು ಕಾರ್ಯತಂತ್ರವನ್ನು ಬದಲಿಸಿಕೊಂಡು ಹೋರಾಡುತ್ತಿದ್ದಾರೆ.

ಇಲ್ಲಿ ಬಿಜೆಪಿಯ ರಮೇಶ್ ಭುಸನೂರ್ ಠೇವಣಿ ಉಳಿಸಿಕೊಂಡರೆ ಅದೇ ದೊಡ್ಡ ಸಾಧನೆಯಾಗಲಿದೆ. ಬಿಎಸ್‌ಪಿಯಿಂದ ಎಸ್.ಎಮ್.ಪಾಟೀಲ್ ಸ್ಪರ್ಧಿಸಿದ್ದು ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಒಂದಿಷ್ಟು ಹಾನಿಮಾಡಬಹುದಷ್ಟೇ ಹೊರತು ಗೆಲ್ಲಲು ಸಾಧ್ಯವಿಲ್ಲ.

ಬಸವನಬಾಗೇವಾಡಿ

ಎಂ.ಸಿ.ಮನಗುಳಿಯ ಮಗ ಈ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿ. ಬಿಜೆಪಿಯಿಂದ ಎಸ್.ಕೆ ಬೆಳ್ಳುಬ್ಬಿ, ಕಾಂಗ್ರೆಸ್‌ನಿಂದ ಶಿವಾನಂದ ಪಾಟೀಲ್ ಹಾಗೂ ಬಿಎಸ್‌ಪಿಯಿಂದ ರಾಜಶೇಖರ್ ಚಂ ಯರನಾಳ್ ಹಾಗೂ ಲೋಕಶಕ್ತಿಯಿಂದ ನಜೀರ್ ಮಹ್ಮದ್ ಹನೀಫ್ ದುಂಡಸಿ ಕಣದಲ್ಲಿದ್ದಾರೆ.

ಪಂಚಮಸಾಲಿ ಸಮುದಾಯಕ್ಕೆ ಸೇರಿದ ಶಿವಾನಂದ ಪಾಟೀಲ್ ಶಾಸಕನಾಗಿದ್ದರೂ ಶಾಸಕತ್ವದ ದರ್ಬಾರ್ ನಡೆಸಿದವನು ಅವನ ತಮ್ಮ ವಿಜುಗೌಡ. ಹೀಗಾಗಿ ಕ್ಷೇತ್ರದ ಜನಕ್ಕೆ ಇವರ ಬಗ್ಗೆ ಒಂದಿಷ್ಟು ತಾತ್ಸಾರವಂತೂ ಇದ್ದೇ ಇದೆ. ಇನ್ನು ಜೆಡಿಎಸ್‌ನ ಸೋಮನಗೌಡ ಪಾಟೀಲ್ ಇದೇ



ಜನಾಂಗಕ್ಕೆ ಸೇರಿರುವುದರಿಂದ ಪಂಚಮಸಾಲಿ ಮತಗಳು ಒಡೆಯುತ್ತವೆ. ಬಿಜೆಪಿಯ ಬೆಳ್ಳುಬ್ಬಿ ಗಾಣಿಗ ಸಮುದಾಯಕ್ಕೆ ಸೇರಿರುವುದರಿಂದ ಆ ಸಮುದಾಯದ 12 ಸಾವಿರ ಮತಗಳು ಅವನಿಗೆ ಗ್ಯಾರಂಟಿ. ಅದೂ ಅಲ್ಲದೇ ಕುರುಬರೊಂದಿಗೆ ಒಳ್ಳೆಯ ಒಡನಾಟವಿಟ್ಟುಕೊಂಡಿರುವ ಈತ ಅರ್ಧದಷ್ಟು ಕುರುಬ ಮತಗಳನ್ನೂ ಕಿತ್ತುಕೊಳ್ಳುವ ಸಾಧ್ಯತೆಯಿದೆ. ಕುರುಬ ಮತಗಳನ್ನು ಕಾಂಗ್ರೆಸ್ ಗೆದ್ದುಕೊಳ್ಳುವಲ್ಲಿ ಸಫಲವಾದರೆ ಮಾತ್ರ ಶಿವಾನಂದಗೆ ಗೆಲುವು.

ಬಬಲೇಶ್ವರ



ಇಲ್ಲಿ ಕಾಂಗ್ರೆಸ್‌ನ ಎಂ.ಬಿ.ಪಾಟೀಲ್, ಬಿಜೆಪಿಯ ವಿ.ಎನ್.ಬಿರಾದಾರ ಜೆಡಿಎಸ್‌ನ ವಿಜುಗೌಡ ಪಾಟೀಲ ಕಣದಲ್ಲಿದ್ದಾರೆ.

ಎಂ.ಬಿ.ಪಾಟೀಲ್ ತನ್ನ ಹೆಸರಿಗಿಂತ ಹೆಚ್ಚಾಗಿ ತನ್ನ ತಂದೆಯ ಹೆಸರಿನಲ್ಲಿಯೇ ಚುನಾವಣೆ ಎದುರಿಸುತ್ತಿದ್ದಾರೆ. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಶಿವಾನಂದ ಪಾಟೀಲನ ತಮ್ಮ ವಿಜುಗೌಡ ಪಾಟೀಲ್‌ನ ಬಲ ದಿನೇದಿನೇ ಹೆಚ್ಚಾಗುತ್ತಿರುವುದು ಎಂ.ಬಿ.ಪಾಟೀಲಗೆ ಯೋಚನೆ ತರಿಸಿದೆ.

ಇನ್ನೊಂದು ಕಡೆ, ಬಿಎಸ್ಪಿಯಿಂದ ಸ್ಪರ್ಧಿಸಿರುವ ಸರಸ್ವತಿ ಚಿಮ್ಮಲ ಎಂಬ ಉಪ್ಪಾರ ಜನಾಂಗದ ಮಹಿಳೆ ಕಾಂಗ್ರೆಸ್ ಮತಬ್ಯಾಂಕಿನೊಳಗೆ ಆನೆಯನ್ನು ನುಗ್ಗಿಸಿರುವುದರಿಂದ ಎಂ.ಬಿ.ಪಾಟೀಲ್‌ಗೆ ಮತ್ತಷ್ಟು ಬಿಕ್ಕಟ್ಟು. ಇದೆಲ್ಲದರ ಲಾಭ ಸಿಗುವುದು ನೇರವಾಗಿ ಜೆಡಿಎಸ್‌ನ ವಿಜುಗೌಡ ಪಾಟೀಲ್‌ಗೆ.

ಬಿಜೆಪಿಯ ವಿ.ಎನ್.ಬಿರಾದಾರ್‌ಗೆ ಮೂರನೇ ಸ್ಥಾನ ಸಿಕ್ಕರೆ ಅದೇ ದೊಡ್ಡದು.

ಮೇಘರಾಜ್

...ನ್ನು ಕಾಂಗ್ರೆಸ್ ಪಾಳೆಯದಲ್ಲಿ ಟಿಕೆಟ್ ವಂಚಿತ ಮಾಜಿ ಸಚಿವ ಮೋರೆ ಮುನಿಸಿಕೊಂಡಿದ್ದಾರಾದರೂ ಅವರ ...ವಿರುವುದು ವಿನಯ ಕುಲಕರ್ಣಿಯ ಮೇಲೆಯೇ ಹೊರತು ಹೊನ್ನಳ್ಳಿಯ ಮೇಲಲ್ಲ. ಹೀಗಾಗಿ ಮರಾಠಿಗರ ...ತೇಕ ಮತಗಳು ಒಡೆಯುವುದಿಲ್ಲ. ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಮುಸ್ಲಿಮರು ಹೆಚ್ಚಾಗಿರುವ ಹುಬ್ಬಳ್ಳಿಯ ... ಭಾಗಗಳು ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರಕ್ಕೆ ಸೇರ್ಪಡೆಗೊಂಡಿರುವುದು ಹೊನ್ನಳ್ಳಿ ಪಾಲಿಗೆ ವರದಾನವಾಗಿದೆ.

...ಸ್ಮಾಯಿಲ್ ಒಂದಿಷ್ಟು ಸ್ಪರ್ಧೆ ನೀಡಬಹುದಾದರೂ ಗೆಲ್ಲುವುದು ಕಷ್ಟ. ನೇರ ಹಣಾಹಣಿಯಲ್ಲಿರುವ ...ಳ್ಳಿ ಮತ್ತು ಬೆಲ್ಲದ್ ನಡುವೆ ಹೊನ್ನಳ್ಳಿಯೇ ತುಸು ಮುಂದಿದ್ದಂತೆ ಕಾಣುತ್ತದೆ.




ಧಾರವಾಡ ಗ್ರಾಮೀಣ: ಸೀಮಾ ಮಸೂತಿಗೆ ಅನುಕೂಲಕರ ಸ್ಥಿತಿ




ಕಾಂಗ್ರೆಸ್‌ನಿಂದ ವಿನಯ್. ಆರ್. ಕುಲಕರ್ಣಿ, ಬಿಜೆಪಿಯಿಂದ ಸೀಮಾ. ಎ. ಮಸೂತಿ ಹಾಗೂ ಜೆಡಿಎಸ್‌ನಿಂದ ಅಮೃತ ಎ. ...ಯಿ ಕಣದಲ್ಲಿದ್ದಾರೆ. ಲಿಂಗಾಯತ ಮತ್ತು ಮರಾಠ ಮತಗಳೇ ಈ ಕ್ಷೇತ್ರದಲ್ಲಿ ನಿರ್ಣಾಯಕ. ಲಿಂಗಾಯತ ...ಂಗದ ಪಂಚಮಸಾಲಿಗೆ ಸೇರಿದ ವಿನಯ ಕುಲಕರ್ಣಿ ಹಾಗೂ ಸೀಮಾ ಮಸೂತಿಯ ನಡುವೆ ಲಿಂಗಾಯತ ...ಗಳು ಒಡೆಯಲಿವೆ. ಹೀಗಾಗಿ ವಿನಯ ಕುಲಕರ್ಣಿ ಲಿಂಗಾಯತ ಮತಗಳ ಜೊತೆಗೆ ಮರಾಠಿ ಮತಗಳ ... ಕಣ್ಣಿಟ್ಟು ಕೆಲಸ ಮಾಡುತ್ತಿದ್ದಾನೆ. ಆದರೆ, ಮೋರೆಯ ವಿರೋಧ ಕಟ್ಟಿಕೊಂಡಿರುವ ವಿನಯ್‌ಗೆ ...ಠಿಗರು ಒಲಿಯುವುದು ತುಸು ಕಷ್ಟವಾಗಿದೆ.

...ದೂಅಲ್ಲದೇ ಕಾಂಗ್ರೆಸ್‌ನ ಪಾರಂಪರಿಕ ಮತ ಬ್ಯಾಂಕ್ ಆದ ಮುಸ್ಲಿಮರ ಮತಬುಟ್ಟಿಗೆ ಜೆಡಿಎಸ್‌ನ ... ದೇಸಾಯಿ ಕೂಡ ಕೈ ಹಾಕಿರುವುದು ವಿನಯ ಕುಲಕರ್ಣಿಯ ಬಿಪಿ ರೈಸ್ ಮಾಡಿದೆ. ದಲಿತರ ...ಗಳೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹಂಚಿಕೆಯಾಗಲಿವೆ.

...ದೆಲ್ಲದರ ಲಾಭವನ್ನು ಬಿಜೆಪಿ ಪಡೆಯುತ್ತಾ ಹೋದರೆ ಸೀಮಾ ಮಸೂತಿಯ ದಾರಿ ಸುಗಮವಾಗುತ್ತದೆ.



ನವಲಗುಂದ: ಮುನೇಕೊಪ್ಪನಿಗೆ ಒಲಿಯಬೇಕಾದರೆ....




ನರಗುಂದ-ನವಲಗುಂದ ರೈತ ಬಂಡಾಯದ ನಾಡಿನಲ್ಲಿ ಅಭಿವೃದ್ಧಿಗಿಂತ ಜಾತಿ ರಾಜಕಾರಣದ ಲೆಕ್ಕಾಚಾರವೇ ತಾಂಡವವಾಡುತ್ತಿದೆ.

ಕಾಂಗ್ರೆಸ್‌ನಿಂದ ಕಲ್ಲಪ್ಪ ನಾಗಪ್ಪ ಗದ್ದಿ, ಬಿಜೆಪಿಯಿಂದ ಶಂಕರ್ ...ಲ್ ಮುನೇಕೊಪ್ಪ ಹಾಗೂ ಜೆಡಿಎಸ್‌ನಿಂದ ನಿಂಗರೆಡ್ಡಿ ಎಚ್. ಕೋನರೆಡ್ಡಿ ಹಾಗೂ ಬಿಎಸ್ಪಿಯಿಂದ ...ಪ್ಪ ರುದ್ರಪ್ಪ ಅಂಬಲಿ ಕಣದಲ್ಲಿದ್ದಾರೆ.

...ಕ ಸಾವಿರದಷ್ಟಿರುವ ಲಿಂಗಾಯತರ, ಅದರಲ್ಲೂ ಪ್ರಧಾನವಾಗಿರುವ ಪಂಚಮಸಾಲಿಗರೇ ಇಲ್ಲಿ ನಿರ್ಣಾಯಕ.

26 ಸಾವಿರ ಇರುವ ಕುರುಬರ, 14 ಸಾವಿರ ಮುಸ್ಲಿಮರ, 12 ಸಾವಿರ ರೆಡ್ಡಿ ಹಾಗೂ 14 ಸಾವಿರ ದಲಿತ ಮತಗಳಿವೆ. ಈ ಜಾತಿವಾರು ಲೆಕ್ಕಾಚಾರ ಹಾಕಿ ಬಿಜೆಪಿಯಿಂದ ಪಂಚಮಸಾಲಿ ಸಮುದಾಯದ ಶಂಕರಪಾಟೀಲನ್ನು ಕಣಕ್ಕಿಳಿಸಿದರೆ ಕಾಂಗ್ರೆಸ್ ಕುರುಬರ ಕೆ. ಎನ್. ಗಡ್ಡಿಯನ್ನು ನಿಲ್ಲಿಸಿದೆ. ಇನ್ನು ಜೆಡಿಎಸ್ ಇಳಿಸಿರುವ ಕೋನರೆಡ್ಡಿ ರೆಡ್ಡಿ ಸಮುದಾಯಕ್ಕೆ ಸೇರಿದವರು. ಈ ಕ್ಷೇತ್ರದಲ್ಲಿ ಕೆ.ಎನ್. ಗಡ್ಡಿಯನ್ನು ಹೊರತುಪಡಿಸಿ ಇಲ್ಲಿಯತನಕ ಆಯ್ಕೆಗೊಂಡವರೆಲ್ಲರೂ ಪಂಚಮಸಾಲಿ ಸಮುದಾಯಕ್ಕೆ ಸೇರಿದವರೆ.

ಕ್ಷೇತ್ರದಲ್ಲಿ ಪ್ರಧಾನವಾಗಿರುವ ಪಂಚಮಸಾಲಿಗಳ ಓಟ್‌ಬ್ಯಾಂಕನ್ನು ಗಮನದಲ್ಲಿಟ್ಟುಕೊಂಡು ಶಂಕರ ಪಾಟೀಲನನ್ನು ಕಣಕ್ಕಿಳಿಸಿರುವ ಬಿಜೆಪಿ ಈ ಬಾರಿ ಗೆಲುವಿನ ನಗೆ ಬೀರುವ ಸಾಧ್ಯತೆಯಿದೆ. ಕೊನೆ ಗಳಿಗೆಯಲ್ಲೇನಾದರೂ ಉಳಿದ ಸಮುದಾಯಗಳು ಕಾಂಗ್ರೆಸ್ ಪರ ನಿಂತರೆ ಗಡ್ಡಿ ಮುನ್ನಡೆ ಸಾಧಿಸಬಹುದು.



ಕುಂದಗೋಳ: ಶಿವಳ್ಳಿಗೆ ಮುನ್ನಡೆ



ಕಾಂಗ್ರೆಸ್‌ನಿಂದ ಚನ್ನಬಸಪ್ಪ ಎಸ್ ಶಿವಳ್ಳಿ, ಬಿಜೆಪಿಯಿಂದ ಸಿದ್ದನಗೌಡ್ರ ಇ. ಚಿಕ್ಕನಗೌಡ್ರ ಹಾಗೂ ಜೆಡಿಎಸ್‌ನಿಂದ ಪಿ. ಸಿ ಸಿದ್ದನಗೌಡ್ರ ಕಣದಲ್ಲಿದ್ದಾರೆ.

ಕಲಘಟಗಿ ಕ್ಷೇತ್ರದಿಂದ ಮೂರು ಬಾರಿ ಆಯ್ಕೆಯಾದ ಜೆಡಿಎಸ್‌ನ ಪಿ.ಸಿ. ಸಿದ್ದನಗೌಡ್ರ ಹಾಗೂ ಎರಡು ಬಾರಿ ಆಯ್ಕೆಯಾಗಿದ್ದ ಬಿಜೆಪಿಯ ಎಸ್.ಐ. ಸಿದ್ದನಗೌಡ್ರ ಎಂಬ ಈ ಅಳಿಯ ಮಾವರ ವಿರುದ್ಧವಾಗಿ ಕಾಂಗ್ರೆಸ್ ಕುರುಬ ಸಮುದಾಯದ ಶಿವಳ್ಳಿಯನ್ನು ಕಣಕ್ಕಿಳಿಸಿದೆ.

ಕ್ಷೇತ್ರದಲ್ಲಿ 40 ಸಾವಿರ ಪಂಚಮಸಾಲಿ ಮತಗಳನ್ನೂ ಒಳಗೊಂಡಂತೆ ಒಟ್ಟು 65 ಸಾವಿರ ಲಿಂಗಾಯತ ಮತಗಳಿವೆ. ಇವು ಪಿ.ಸಿ. ಸಿದ್ದನಗೌಡ್ರ ಮತ್ತು ಎಸ್.ಐ.ಚಿಕ್ಕನಗೌಡ್ರ ಮಧ್ಯದಲ್ಲಿ ಹಂಚಿಹೋಗಲಿವೆ. ಇನ್ನು 17 ಸಾವಿರ ಕುರುಬ ಮತಗಳು ಹಾಗೂ 12 ಸಾವಿರ ಮುಸ್ಲಿಮ್ ಮತಗಳ ಜೊತೆಗೆ ಕಾಂಗ್ರೆಸ್ ಲಿಂಗಾಯತರಲ್ಲಿರುವ ತನ್ನ ಪಾರಂಪರಿಕ ಮತಗಳನ್ನೂ ಲೆಕ್ಕ ಹಾಕಿದರೆ ಕಾಂಗ್ರೆಸ್‌ನ ಶಿವಳ್ಳಿಗೆ ಅನುಕೂಲಕರ ಪರಿಸ್ಥಿತಿ ಏರ್ಪಟ್ಟಿದೆ.

ಸ್ತ್ರೀ ಸಗತಿಯೋರತ್ರ ದುಡ್ಡಾಡ್ತ ಅದೆ ಕಂದ್ಯ!

ಅವರೆಲ್ಲಾ ಮೊಟ್ಟೆಗೆ ಕಾವು ಕೊಡುವವರಂತೆ ಕುಳಿತಿದ್ದರು. ಬಿಸಿಲ ಝಳಕ್ಕೆ ಹೈರಾಣ್ಣಾಗಿದ್ದ ಕಾಳಮಾವ,

"ಯಾರ್‍ಯಾರು ಬತ್ತರೆ, ಯಾರ್‍ಯಾರು ಹೋಯ್ತರ್ಲ ಉಗ್ರಿ?" ಎಂದ.

"ಯಾರೇನಾರ ಆಗ್ಲಿ ಅಂಬುರೀಸ್ ಗೆದ್ರು ಸಾಕು" ಎಂದಳು ಜುಮ್ಮಿ.

"ಅದ್ಯಾಕೆ ಅಂಗುಂತಿ? ಅವುನು ಗೆಲ್ಲದ್ರ ಬಗ್ಗೆ ಡವುಟೆ?" ಎಂದ ಉಗ್ರಿ.

"ಯಾರ್‍ಯಾರೊ ಅಂಗಂತರೆ ಕಂದ್ಯ, ಈ ಸತಿ ಕಷ್ಟ ಅಂತವ, ಅದ್ಕೆ ಅಂಗಂದೆ."

ಬಯಲುಸೀಮೆಯ ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಹೆಂಗುಸರೋಟು ಬತ್ತವಲ್ಲ ತಗೊ ಗೆಲ್ತನೆ. ಅಕಸ್ಮಾತ್ ಸೋತ್ರ ಅವುನು ಕಳಕಳದೇನೂ? ಲೋಕಸಭೆ ಮೆಂಬ್ರಾಗ್ಯವುನೆ."

"ಅವುನದುಬುಟ್ಟಾಕೆ ಇದಕ್ ಬಂದಾ?" ಎಂದ ಸೀರ.

"ಕುಮಾರಸ್ವಾಮಿ ಅಂಥೋನೆ ಮುಖ್ಯಮಂತ್ರಿಯಾಗ ಬೇಕಾದ್ರ ನನ್ನಂಥೋನ್ಯಾಕೆ ಆಗಬಾರ್ದು ಅನ್ನಕಂಡು ಬಂದ ಕಣಮಾವ."

"ಅಂಗರಿವುನು ಮುಖ್ಯಮಂತ್ರಿಯಾದನೆ?"

"ಕಾಂಗ್ರೆಸ್ನಲ್ಲಿ ಆಟು ಸುಲಭನೆ ಮುಖ್ಯಮಂತ್ರಿಯಾಗದು? ದಳ ಪಳದಲ್ಲಿದ್ದರೆ ಮಾನ ಮರಿಯಾದಿ ಬುಟ್ಟು ಮಾಡಬಾರದ್ದೆಲ್ಲ ಮಾಡಿ ಆಗಬವುದು."

"ಅದಕಿಂತ್ಲುವೆ ಹಿಟ್ಟು ಹಳಸಿರಬೇಕು ನಾಯಿ ಹಸದಿರಬೇಕು, ಅಂತ ಟೇಮು ಬಂದಾಗ ಒಂದು ಕೈ ನೋಡಬವುದು ಅನ್ನು."

"ಅಂಗೇನು ಇಲ್ಲ ಕಣ ಮಾವ. ಅದ್ಯಾವುದೊ ಗಾದಿ ಮಾತ ತಂದು ಇಲ್ಲಿಗೆ ಹೋಲಕೆ ಮಾಡಬ್ಯಾಡ. ಕುಮಾರ ಸ್ವಾಮಿ ಬಿಸಿ ಹಿಟ್ಟನಂಗಿದ್ದ ಬಜೆಪಿಗಳು ಬಾಡಿನ್ಸಸರಾಗಿದ್ರು. ಸೇರಿಕಂಡು ಬಾರಿಸಿದ್ರು. ಆ ರುಚಿ ಯಂಗಿತ್ತಪ್ಪಾ ಅಂದ್ರೆ, ಎಡೂರಪ್ಪಾಗ್ಲೆ ನಾನೇ ಮುಖ್ಯಮಂತ್ರಿ ಅಂತ ಕೂಗ್ಯಂಡು ತಿರುಗ್ತ ಅವುನೆ. ಅವುನೇನಾರ ಆಗದೆಯಿದ್ರೆ ಕತಿಯೇನೂ ಅಂತ?"

"ಬವುಳಿ ಬಂದುಬುಡತದೆ ಅಂತಿಯಾ?"

"ಅವುನಾಡದು ನೋಡಿದ್ರೆ ಬಂದ್ರೂ ಬರಬವುದು. ಅದರಲ್ಲೂ ಬಂಗಾರಪ್ಪನ ಎದ್ರಿಗೇನಾರ ಸೋತ್ರೆ, ಅವುನ್ನ ನಿಭಾಯಿಸಕ್ಕೆ ಭಾಳ ಕಷ್ಟಾಯ್ತದೆ. ಸೋಬಾ ಕರಂದ್ಲಾಜೆನೆ ಅವುನ್ನ ಸಂಬಾಳಸಬೇಕೇನೊ?" ಎಂದು ಉಗ್ರಿ ನಕ್ಕ.

"ಯೆಡೂರಪ್ಪ ಗೆಲ್ತನೆ ಬುಡ್ಯ" ಎಂದ ಸೀರ.

"ಅದ್ಯಂಗೇಳ್ತಿ ಮಾವ? ಈ ಸತಿ ಮಾತ್ರ ಯಾವನು ಗೆಲ್ತನೆ, ಯಾವನು ಸೋಲ್ತನೆ ಅನ್ನದ ಹೇಳಕ್ಯಾಗದಿಲ್ಲ, ಅಂಗಾಗ್ಯದೆ."

"ಅದ್ಯಾಕ್ಲ ಅಂಗಾಗ್ಯದೆ? ನೋಡಿದ್ರೆ ಹೇಳಕ್ಕೆ ಬರದಿಲವೆ?" ಎಂದಳು ಜುಮ್ಮಿ.

"ಆಗದಿಲ್ಲ ಕಣೆ. ಮೂರು ಪಾರ್ಟಿ ನಿಂತವೆ. ಇದರ ನಡುವೆ ಬಿಎಸ್‌ಪಿಯಂತೆ, ಸಮಾಜವಾದಿಯಂತೆ, ಸರುವೋದಯವಂತೆ, ಸುವರ್ಣ ಪಾರ್ಟಿಯಂತೆ ಅನ್ನಕಂಡು ಸುಮಾರು ಜನ ನಿಂತುಬುಟ್ಟವುರೆ. ಅವುರಲ್ಲಿ ಯಾವನಾರ ನಾಕು ಐದು ಸವುರ ತಗಂಡ್ರು ಸಾಕು, ಗೆಲ್ಲಬೇಕಾದೋನು ಗ್ವಾತ ಯಾಗ್ತಾನೇ, ಗ್ವಾತೆ ಮಸ್ತ ಅನ್ನೋನು ಎದ್ದು ಕೂತಗತನೆ."

"ನೀನೇಳದು ನಿಜಕಂದ್ಯ ಉಗ್ರಿ. ಯಾವನ ಮ್ಯಾಲೂ ನಂಬುಕೆ ಇಟ್ಟು ಮಾತಾಡಕ್ಕಾಯ್ತಯಿಲ್ಲ, ಅಂತಾ ಪರುಸ್ಥಿತಿನೆ ಬಂದದೆ."

"ಅದೂ ಅಲ್ದೆ ಮಾವ ದುಡ್ಡಂಚಬುಟ್ಟು ನಾನು ಗೆದ್ದೆ ಅನ್ನಕ್ಯಾಗದಿಲ್ಲ"

"ಈ ಸತಿ ದುಡ್ಡ ಹಂಚಿದ್ದು ಅಂದ್ರೇನ್ಲ? ನಾವು ಹುಟ್ಟಿದ್ಮ್ಯ ಈ ತರ ದುಡ್ಡ ಬಿಚ್ಚಿದ್ದ ನೋಡಲಿಲ್ಲ. ಒಂದೋಟಿಗ್ಯೆನೂರುಪಾಯಿ ಕೊಟ್ರು ಹೋಗತ್ರಗೆ."

"ಅಂಗರೆ ನಿಮ್ಮನಿಗೆ ಎಷ್ಟು ಸಿಕ್ಕಿದಂಗಾಯ್ತೋ ಸೀರ ಮಾವ?"

"ಹೆಚ್ಚುಕಮ್ಮಿ ಯರಡು ಮೂರು ಸಾವುರ ಸೇರಿದಂಗಾಯ್ತು ಕಣೆ ಜುಮ್ಮಿ."

"ಈಸಗಳುವಾಗ ನಾಚಿಗಾಗಲಿಲ್ವೆ?"

"ಇಸಿಸಿ, ನಮ್ಮ ದುಡ್ಡ ನಾವೀಸಗಳಕ್ಕೆ ನಾಚಿಕೆ ಯಂತದ್ದೆ? ಇವುನು ಬಸ್ಸಿನಲ್ಲಿ ದುಡ್ಡ ಪಡದಿದ್ದ. ಅದೂ ನಮ್ಮ ದುಡ್ಡು ಅಲವೆ. ಅವುನು ಬೆಂಗಳೂರತ್ರ ರೈತರ ಜಮೀನ್ನಲ್ಲ ಅಗ್ಗವಾಗಿ ತಗಂಡು ಮಾರಿ ದುಡ್ಡು ತಂದಿದ್ದಂತೆ. ಅದೂ ನಮ್ಮ ರೈತರ ದುಡ್ಡೆಯಾ. ಇವುರೇನು ಬೆವರು ಸುರಿಸಿ ದುಡದಿದ್ರೆ?"



"ಇಲ್ಲ ಬುಡು, ಖರ್ಚು ಮಾಡಕ್ಕೆ ಬೆವುರು ಸುರಿಸಿದ್ರು."

"ಅದ್ಯಲ್ಲಾತಕಿಂತ್ಲುವೆ ಇವುರು ದುಡ್ಡ ಖರ್ಚು ಮಾಡಕ್ಕೆ ಜನ ಸಿಕ್ಕಿದ್ರು. ಸ್ತ್ರೀ ಸಗತಿ ಜನ ಸಿಗದಿದ್ರೆ ಇವುರು ಕಾಸಂಚಕ್ಕೆ ಕಷ್ಟಾಗದು" ಎಂದ ಉಗ್ರಿ.

"ಊ ಕಂದ್ಯ ಉಗ್ರಿ, ಸ್ತ್ರೀಸಗತಿ ಜನ ದುಡ್ಡು ಮಾಡಿಬುಟ್ರು" ಎಂದಳು ಜುಮ್ಮಿ.

"ನೀನೇನಾರ ಮಾಡಿದೇನೆ?"

"ಮಕ್ಳುಗಿತಿನಿ ನೋಡು. ನಾನೆ ಮೂರು ಸ್ತ್ರೀ ಸ...
ಸಂಘದೋರಿಗೆ ಐದೈದು ಸವುರದಂಗೆ ಮೂರು ಸಂ...
ಕೊಡಿಸಿದ್ದಿನಿ ಕಂದ್ಯ."

"ಅಂಗರಕ್ಕ ಎಷ್ಟು ಈಸಗಂದಿರತರೆ ಅವುರು."

"ಬುಟ್ಟರೇ? ಯಾರು ಕೊಟ್ರು ಈಸಗತ...
ಮಾಡೋರಿಗೆ ಮಾಡ್ತರೆ. ಆದ್ರು ಹಂಚಕ್ಕೆ ಅಂತ ಕೊ...
ದುಡ್ಡ ಮಡಿಕಳದಂಗೆ ಹಂಚವುರೆ."

"ಅಂಗಂತಿಯಾ?"

"ಊ ಕಂದ್ಯ. ಆ ರೇಣಕಮ್ಮನಿಗೆ ಯಪ್ಪತ್ತೈದು ಸ...
ಕೊಟ್ಟಿದ್ರಂತೆ. ಯಲ್ಲಾನು ಹಂಚಿ ಅವುಳು ಯರ...
ಸವುರ ಮಡಿಕಂಡ್ವಂತೆ. ಅದೇ ಪಾರ್ಟಿ ಲೀಡ್ರುಗ...
ಕೊಟದ್ರೆ ಅಷ್ಟುನೂ ಮಾಡಿಕಳರು."

"ಅಂತೂ ಸ್ತ್ರೀ ಸಗತಿಯೋರು ಇಲ್ಲಿಗೆ ಬಂದ್ರು...
ಕಣ ಮಾವ, ಆ ಕಾಂಗ್ರೆಸಿನವು ಸ್ತ್ರೀ ಸಗತಿ ಮಾ...
ಯಂಗಾರ ಉದ್ದಾರಾಗಿ, ನಿಮ್ಮ ನಿಮ್ಮ ಮನೆ ಮಾ...
ನಿಲ್ಲಿಸಿಗಳಿ ಅಂತ ಸಂಘ ಮಾಡಿದ್ರೆ ಈ ಹೆಂಗು...
ಪಾರ್ಟಿ ದುಡ್ಡಂಚೊ ಜನಾದ್ರಲ್ಲ ಹೇಳು?"

"ಅದಂಗೆ ಅಲವೇನ್ಲ ಆಗದು. ನೀನೊಂದು ಮಾಡಿ...
ಅದೊಂದಾಯ್ತದೆ, ಅಂಗೆ ಸ್ತ್ರೀಸಗತಿಯೋರುವೆ" ಎ...
ಕಾಳಮಾವ.

"ಸ್ತ್ರೀಸಗತಿಯೋರ ಹಾವಳಿ ಜಾಸ್ತಿಯಾಯ್ತು ದ್ವ...
ಎಂದುಕೊಂಡು ವಾಟಿಸ್ಸೆ ಬಂದ.

"ಏನಾವುಳಿ ಮಾಡಿಸುರ್ಲ ನಿನಿಗೆ?"

"ಗಂಡುಸ್ರು ಮನಿಗೋದಾಗ ಬಾಗಲಾಯ್ಕಂ...
ಹೋಗಿರತರೆ. ಕೇಳಿದ್ರೆ ಮೀಟಿಂಗಿಗೆ ಹೋಗ್ಯವುರೆ ಅಂ...
ಏನಿವುರ ಮೀಟಿಂಗು? ಏನು ವಿಧಾನಸಭೆ ಮೀಟಿಂಗ...
ಅಥವ ಲೋಕಸಭೆ ಮೀಟಿಂಗಾ? ದಿಸೀಸ್ ಟ...
ಮಚ್."


"ಮಚ್ಚುವಿಲ್ಲ, ಕುಡ್ಲುವಿಲ್ಲ, ನಿಮ್ಮಂಥ ಮುಂಡೆಮ...
ಹದ್ದುಬಸ್ತಲ್ಲಿಡಕ್ಕೆ ಸ್ತ್ರೀ ಸಗತಿನೆ ಸರಿ ಕಂದ್ಯ."

"ನೋಡಕ್ಕ, ಸ್ತ್ರೀಸಗತಿ ಸಂಘಾನ ನಾನು ಒಪ್ತಿ...
ಆದ್ರೆ ಜೆಂಟ್ಸಿಗೆ ತೊಂದ್ರೆ ಆಗಬಾರ್ದು. ನೋಡು ವ...
ದಿನ ಏನಾಗ್ಯದೆ ಗೊತ್ತೆ?"

ಭಾಜಪ 'ಚುನಾವಣಾ ರಾಮ' ಪಕ್ಷ!

ಪರೀಕ್ಷೆ-ಫಲಿತಾಂಶಗಳ ನಡುವಿನ ಅವಧಿ ವಿದ್ಯಾರ್ಥಿಗಳಿಗೆ ಒಂದು ರೀತೀಲಿ ಸಂತೋಷ-ಜಯದ ಮಿಶ್ರಣ ಇದ್ದ ಹಾಗೆ. ಹಗಲೆಲ್ಲ ಸ್ನೇಹಿತರೊಂದಿಗೆ ಹಾಡಿ ಕುಣಿದು ಆನಂದೋತ್ಸಾಹದಿಂದ ಇದ್ದವರಿಗೆ ರಾತ್ರಿ ಮಲಗಿದ್ದಾಗ ಯಾವುದೋ ಹೊತ್ತಿನಲ್ಲಿ 'ರಿಸಲ್ಟ್' ಅನ್ನುವ ಭೂತ ಕಾಡುತ್ತೆ. ಬೆಚ್ಚಿ ಬೀಳಿಸುವ ಕನಸು ಕಾಡುತ್ತೆ. ಶೇಕಡ ನೂರು ಅಥವಾ ಅದರ ಹತ್ತಿರ ಹತ್ತಿರ ನಂಬರ್ ಬರುವುದು ಖಾತರಿ ಅಂತ ಇದ್ದವನನ್ನೂ ಕನಸು ಗೋತಾ ಬೀಳಿಸಿ ಜಯದಿಂದ ಬೆವರು ಕಿತ್ತು ಬರುವ ಹಾಗೆ ಮಾಡುತ್ತೆ. ಕನಸಿನಲ್ಲಿ ಫೇಲಾದರೆ ನಿಜದಲ್ಲಿ ಪಾಸಾಗಿರುತ್ತೆ ಅಂತ ಸಮಾಧಾನ ಹೇಳಿದರೂ ಏನೋ ಅಳುಕು ಇದ್ದೇ ಇರುತ್ತೆ. ಪ್ರತಿಭಾವಂತರ ಪರದಾಟ ಈ ರೀತಿಯದ್ದಾದರೆ ಫೇಲು ಗ್ಯಾರಂಟಿ ಅಂತಿರುವ ಮಹಾಶಯರಿಗೂ ತಾನು ಪಾಸಾಗಿರುವಂತೆ ಕನಸುಬಿದ್ದು 'ಯಾಹೂ' ಅಂತ ಹಾರಾಡಿ ಹಾಸಿಗೆ ಮೇಲೆ ಎದ್ದು ಕೂರುವಂತೆ ಮಾಡುತ್ತೆ. ಅಕ್ಕಪಕ್ಕದಲ್ಲಿದ್ದವರು 'ಸುಮ್ಮನೆ ಬಿದ್ಕೊಳೊ ಮೂದೇವಿ' ಅಂತ ಉಗಿದಾಗ ನೈಜ ಪರಿಸ್ಥಿತಿ ಅರ್ಥ ಆಗುತ್ತೆ. ಪಾಸೆಂಬ ಗಗನ ಕುಸುಮ ಕೈಗೆ ಎಟಕುವುದಿಲ್ಲ ಅಂತ ಯೋಚಿಸುತ್ತಾ ಇದ್ದವನ ನಿದ್ದೆಯೆಲ್ಲ ಹಾರಿಹೋಗುತ್ತೆ. ಇನ್ನು ಪಾಸಾದರೂ ಆಗಬಹುದು ಫೇಲಾದರೂ ಆಗಬಹುದು ಅನ್ನುವವರ ಸ್ಥಿತಿ ಇನ್ನೂ ಚಿಂತಾಜನಕ. ಒಮ್ಮೊಮ್ಮೆ ಪಾಸಾದಂತೆ ಕನಸು ಬೀಳುತ್ತೆ. ಖುಷಿಯಿಂದ ಎದ್ದಾಗ ಫೇಲಾಗಬಹುದು ಅನ್ನುವ ಸಂಶಯ ಎದುರಾಗುತ್ತೆ. ಫೇಲಾದಂತೆ ಕನಸು ಬಿತ್ತು ಅನ್ನಿ, ಆ ಪ್ರಶ್ನೆಗೆ ಒಂದು ನಾಲ್ಕು, ಈ ಪ್ರಶ್ನೆಗೆ ಒಂದು ಐದು ಹೆಚ್ಚಿಗೆ ಮಾರ್ಕ್ಸ್ ಕೊಟ್ಟಿದ್ದರೆ ಪಾಸಾಗುತ್ತೀನಲ್ಲ ಅನ್ನುವ ಸಮಸ್ಯೆ ಕಾಡುತ್ತೆ. ಲೈಟ್ ಹಾಕಿ, ಪ್ರಶ್ನೆಪತ್ರಿಕೆ ತೆಗೆದು ಇದಕ್ಕೆ ಇಷ್ಟು ಮಾರ್ಕ್ಸ್ ಕೊಡಬಹುದು, ಅದಕ್ಕೆ ಇಷ್ಟು ಕೊಟ್ರೇ ಕೊಡಬೇಕು ಅಂತ ಹೇಳಿ ಮೌಲ್ಯಮಾಪನ ಮಾಡ್ತಾನೆ. ಪಾಸು ಅಂಕಕ್ಕಿಂತ ಕಡಿಮೆ ಬಂದರೆ ಉದಾರವಾಗಿ ಒಂದೊಂದು ಪ್ರಶ್ನೆಗೂ ಹೆಚ್ಚು ನಂಬರು ಕೊಟ್ಟು ನೋಡ್ತಾನೆ. ಪಾಸು ಖಾತರಿ ಮಾಡಿ ಕೊಳ್ತಾನೆ. ಸ್ವಮೌಲ್ಯ ಮಾಪನದಲ್ಲಿ ಪಾಸಂಕಗಳಿಗಿಂತ ಹೆಚ್ಚು ಬಂದರೆ ಒಂದೊಂದು ಪ್ರಶ್ನೆಗೂ ಕಡಿಮೆ ಅಂಕ ಕೊಡ್ತಾ ನೋಡ್ತಾನೆ. ಅಂತೂ ಅವನ ಸ್ಥಿತಿಯಂತೂ ಡೋಲಾಯಮಾನವೇ ಸರಿ.

ನನ್ನ ಶಿಷ್ಯರು ಕೆಲವರಿದ್ದಾರೆ. ಒಳ್ಳೆಯ ಕೆಲಸದಲ್ಲೂ ಇದ್ದಾರೆ. ಅಪರೂಪಕ್ಕೆ ಸಿಕ್ಕಿದಾಗ ಆತ್ಮೀಯತೆಯನ್ನೂ ತೋರ್‍ತಾರೆ. ತಮ್ಮ ವಿದ್ಯಾರ್ಥಿ ಜೀವನದ ಸಿಹಿಕಹಿಗಳನ್ನು ಹಂಚಿಕೊಂಡು ಆನಂದಿಸುತ್ತಾರೆ. ಪರೀಕ್ಷೆ ವಿಷಯ ಬಂದರೆ ಅದೊಂದು ಮಾತ್ರ ನೆನಪಿಸಬೇಡಿ ಸಾರ್. ಅದನ್ನು ನೆನೆದರೆ ಈಗಲೂ ನಿದ್ದೆ ಬರಲ್ಲ' ಅಂತ ಬೆಚ್ಚಿ ಬೀಳ್ತಾರೆ! ನಿಜಕ್ಕೂ ಅವರಿಗೆ ಭಯ ಇರುವುದು ಪರೀಕ್ಷೆ ಮೇಲಲ್ಲ, ರಿಸಲ್ಟ್ ಮೇಲೆ!



ಇದನ್ನೆಲ್ಲ ಇಲ್ಲಿ ಈಗ ಯಾಕೆ ಪ್ರಸ್ತಾಪಿಸಬೇಕಾಯಿತು ಅಂದರೆ...... ಮೊದಲನೆ, ಎರಡನೆ ಹಂತದ ಚುನಾವಣೆ ಮುಗಿದಿದೆ. ಅವರ ಹಣೆಬರಹಾನ ಮತದಾರ ಮಹಾಪ್ರಭು ಬರೆದು ಮತಪೆಟ್ಟಿಗೆ ಒಳಗೆ ಇಟ್ಟಿದ್ದಾನೆ. ಫಲಿತಾಂಶಕ್ಕಾಗಿ ಕಾಯಬೇಕು. ಅಭ್ಯರ್ಥಿಗಳ ಫಜೀತಿ ನೋಡೋಕಾಗಲ್ಲ. ಗೆಲುವು ಖಾತರಿ ಅನ್ನುವ ಆಸಾಮಿಗೆ ಒಳೊಳಗೆ ಕೈಕೊಟ್ಟಿದ್ದರೆ ಅನ್ನುವ ಭಯ. ಸೋಲು ಖಚಿತ ಎಂಬ ಅಭ್ಯರ್ಥಿಗೆ ಅಕಸ್ಮಾತ್ ಮತದಾರ ಮಹಾಪ್ರಭು ಗೆಲ್ಲಿಸಿದ್ದರೆ ಎಂಬ ಆಶಾಭಾವನೆ. ಸೋಲುಗೆಲುವಿನ ಮಧ್ಯೆ ಡೋಲಾಯಮಾನವಿರುವ ಅಭ್ಯರ್ಥಿಗೆ ಬೂತುವಾರು ತನಗೆ ಬರಬಹುದಾದ ಮತಗಳ ಲೆಕ್ಕಾಚಾರ. ಈ ನಡುವೆ ಚುನಾವಣಾ ಸಮೀಕ್ಷೆ; ಮತಗಟ್ಟೆ ಸಮೀಕ್ಷೆಗಳ ಹೆಸರಿನಲ್ಲಿ ಮಾಧ್ಯಮಗಳ ಕಾಟ. ಆ ಪಕ್ಷಕ್ಕೆ ಶೇಕಡ ಇಂತಿಷ್ಟು ಮತಗಳು, ಈ ಪಕ್ಷಕ್ಕೆ ಶೇಕಡ ಇಂತಿಷ್ಟು ಮತಗಳು ಬಿದ್ದಿದಾವೆ ಅನ್ನುವ ತರಲೆ ಲೆಕ್ಕಾಚಾರ. ಸಮೀಕ್ಷೆಗಳ ಬಗ್ಗೆ ನಂಬಿಕೆ ಇಲ್ಲದಿದ್ದರೂ ಅದೇ ಸತ್ಯ ಆಗಿಬಿಟ್ಟರೆ ಅನ್ನುವ ಚಿಂತೆ. ಫಲಿತಾಂಶ ಬರುವ ವರೆವಿಗೂ ಈ ತಾಕಲಾಟ ತಪ್ಪಿದ್ದಲ್ಲ. ಮೂರನೆ ಹಂತದ ಚುನಾವಣಾ ಅಭ್ಯರ್ಥಿಗಳಿಗೆ ಈ ಕಾಟ ಇಲ್ಲ, ಸದ್ಯ ಮುಗೀತಲ್ಲ ಈ ಹಾಳು ಚುನಾವಣಾ ಕಸರತ್ತು ಅಂತ ಸಮಾಧಾನವಾಗಿ ಉಸಿರು ಆಡುವ ಹೊತ್ತಿಗೆ ಫಲಿತಾಂಶ ಹೊರಬಂದಿರುತ್ತೆ, ಗೆಲುವೋ ಸೋಲೋ ಒಂದು ರೀತಿಯ ನಿರಾಳ!

ಈ ವಿದ್ಯಮಾನ ನೋಡಿದರೆ ಪರೀಕ್ಷೆ ಮುಗಿಸಿ ಫಲಿತಾಂಶಕ್ಕಾಗಿ ಕಾಯುತ್ತಿರುವ ವಿದ್ಯಾರ್ಥಿ ನೆನಪಿಗೆ ಬರುತ್ತೆ ಅಲ್ವಾ....

* * * * * *

ಈಗ ರಾಮ-ರಾವಣರ ಯುದ್ಧ!

ಅವರು ಈಗ ಇಲ್ಲ, ಅವರ ಪ್ರತಿನಿಧಿಗಳು ಇದ್ದಾರೆ. ಅವರ ನಡುವಿನ ಕಾಳಗ ನಡೆಯುತ್ತಿದೆ.

ರಾಮ ಯಾರ ಪಕ್ಷ? ರಾವಣ ಯಾರ ಪಕ್ಷ?

ನಿರ್ಧರಿಸಬೇಕಾದವರು ಮತದಾರರು ತಾನೆ?

ಅಲ್ಲವಂತೆ, ಮತದಾರರ ಸರ್ಟಿಫಿಕೇಟ್ ಬೇಕಿಲ್ಲವಂತೆ. **Self certificate** ಕೊಟ್ಟುಕೊಂಡಿದಾರೆ ಯಡಿಯೂರಪ್ಪ ಅವರು. ಅವರದ್ದು 'ರಾಮನ ಪ...
ಅಂತ!

ಇರಬೇಕು. ಭಾಜಪ 'ಚುನಾವಣಾ ರಾಮ'ನ ಪ...

ಏನಿದು 'ಚುನಾವಣಾ ರಾಮ'? ಬೇರೆ ರಾಮನ...
ಇದ್ದಾನಾ?

ಬೇರೆ ರಾಮನ ವಿಷಯ ಬಿಡಿ. 'ಚುನಾವ...
ರಾಮ'ನ ವಿಷಯಕ್ಕೆ ಬನ್ನಿ.

ಸಂಕಟ ಬಂದಾಗ ವೆಂಕಟರಮಣ. ಚುನಾವ...
ಬಂದಾಗ ಭಾಜಪ ರಾಮನಾಮಸ್ಮರಣೆ! ಈ...
ಚುನಾವಣೆ ಬಂದಿದೆ. ಅದಕ್ಕೇ ಅವನ ಸ್ಮರಣೆ! ಚುನಾವ...
ಮುಗಿದ ನಂತರ? ಮತ್ತೆ ಬರುವ ಚುನಾವಣೆವ...
ರಾಮನಿಗೆ ರೆಸ್ಟು!

ಲಿಂಗಾಯತರು ಶೈವರು. ವೈಷ್ಣವ ವಿರೋಧಿಗ...
ಶೈವ ಯಡಿಯೂರಪ್ಪ ಹೇಗೆ ರಾಮನ ಪಕ್ಷ ಸೇರಿದರ...

ಅನಾವ...
ಎಚ್.ಎಲ್. ಕೇಶವಮೂ...

ಅಧಿಕ ಪ್ರಸಂಗತನ ಬೇಡ. ಚುನಾವಣೆ ಮುಗಿಯ...
ವವರೆಗೂ ಅವರು ಶೈವ-ವೈಷ್ಣವರು! ಆನಂತರ ಅವ...
ಶೈವರು!

ಅಂದಹಾಗೆ ಅವರ ಮನೆಯಲ್ಲಿ ಆರಾಧಿಸುವು...
ಯಾರನ್ನು? ಲಿಂಗವನ್ನೊ? ಶ್ರೀರಾಮನನ್ನೊ?

ಅವರು ಯಾರನ್ನು ಏನನ್ನು ಪೂಜಿಸುತ್ತಾರೆ...
ಗೊತ್ತಿಲ್ಲ. ಆದರೆ ಆ ರಾಮನ ಹೆಸರಿನವರನ್ನು ಕಂ...
ಅದೇನೋ ಒಂದು ರೀತಿಯ ಸೆಳೆತ- 'ಶ್ರೀರಾಮು...
ಸೆಳೆತ!

ಶ್ರೀರಾಮುಲು ನೋಡಿ. ಅವರು ಮಂ...
ಆಗಿದ್ದರಂತೆ. ಯಾವ ಖಾತೆಯ ಮಂತ್ರಿ? ಯಾವ...
ಆಗಿದ್ದರು? ಇದು ಮಹಾ ಜನತೆಗೆ ತಿಳಿಯ...
ಇರಬಹುದು. ಮಾಧ್ಯಮಗಳನ್ನು ನೋಡಿದರೆ ತಿಳಿಯು...
ಒಂದಂತೂ ಸ್ಪಷ್ಟ ಅಂತ.

ಯಾವುದು ಅದು?

ಶ್ರೀರಾಮುಲು ಗೂಂಡಾ!

...ರ ಉಗ್ರಿ, ಸ್ತ್ರೀಸಗತಿ ಕೇಳಿದ್ರೆ ನೀನು ಕಾಲ
...ಮ ಕಷ್ಟ."
...ಗ್ಗೆ ಗೊತ್ತಾಯ್ತಾ ಆದೆ. ನೋಡಕ್ಕ ಆ
...ದ್ದಿ ಗುಂಡನ ಜೇಬಿಗೆ ಹತ್ತು ರೂಪಾಯಿ ಮಡಗಿ,
...ಹೋಗಿ ನಾಷ್ಟ ಮಾಡು. ನನಿಗೆ ಮೀಟಿಂಗದೆ
...ಯ್ತಳಂತೆ. ಹೆಂಡತಿ ಗಂಡನಿಗೆ ತಿಂದಿ ಮಾಡಕ್ಕೆ
...ಟ್ಟು ಹೋಯ್ತಳೆ ಅಂದ್ರೆ ಕಾಲ ಎಲ್ಲಿಗೆ ಬಂತು,
...ಪು."
... ನಿನಿಗಿನ್ನು ಗೊತ್ತಿಲ್ಲಾ ಅನ್ನು. ಸ್ತ್ರೀ ಸಗತಿ
...ದೊ ಕೆಲುವರ ಮನೆಲಿ ಗಂಡುಸ್ರು ಅಡುಗೆ
...ಕಲಿತಯಿದ್ದರಂತೆ" ಎಂದ ಉಗ್ರಿ.
...ಲಿ ಬಾ ಡಾ, ಈ ಟಾ ದಿನ ನಾವು
...ಕಲಿಲ್ವೆ" ಎಂದಳು ಜುಮ್ಮಿ.
... ಮನುಸು ಮಾಡಿದ್ರೆ ನಾವು ಅಡುಗೆ ಮಾಡ್ತಿವಿ.
...ಲಿಸಿ ಎರಡು ರೊಟ್ಟಿ ಹಾಕದು ಕಷ್ಟ ಅಲ್ಲ.
...ವು ಹೊಲ ಹುಳಕ್ಕಾಯ್ತದಾ ಕಮನ್ ಟೆಲ್

...ಕುಳದಿಲ್ಲ? ಆ ರಂಗೇಗೌಡನೆದ್ದಿ ವಲನು
... ಕುಂಟೆನು ವಡಿತಿದ್ನು."
...ಗೇನು ಟ್ಯಾಗುಟ್ರ ಬಂದವೆ, ಕೂಲಿಕೊಟ್ಟು
... ಬುಡು. ಯಂಗಿದ್ರೂ ಸ್ತ್ರೀ ಸಗತಿಯೋರ ಕೈಲಿ
... ಆದೆ."
... ಕಣೊ ಉಗ್ರಿ. ಬೆಲೆಗಳೆಲ್ಲ ಏರಿರೊ ಈ
... ಯುಲಕ್ಷನ್ ಬಂದು ಒಂದಿಷ್ಟು ಖರ್ಚು
...ನಾಯ್ತು, ಈಗ ಬಟಾವಡೆ ಆದ ದುಡ್ಡು ನೋಡಿದ್ರೆ
... ಇನ್ನು ವಸಿದಿನ ಮೇಂಟೇನಾಯ್ತದೆ."
...ಸಗತಿ ಅಂದೇಟಿಗೆ ಗ್ಯಾಪುಕ್ಕೆ ಬತ್ತು ಕಂಡ್ರೆ"
...ಸೀರ ವಿಷಯ ಹೇಳುವುದಕ್ಕೆ ಮೊದಲೇ ನಕ್ಕು
... ಮಂಜನೆದ್ದಿ ಸ್ತ್ರೀ ಸಂಗ ಸೇರತಿನಿ ಅಂದಲಂತೆ.
...ಜ ಅವ್ವಾ ತಾಯಿ ನಿನಗಿರೊ ಸ್ತ್ರೀಸಗತಿನೆ ಸಾಕು
...ನು ನಿಭಾಯಿಸಕ್ಕಾಯ್ತಯಿಲ್ಲ, ತಿರಗ ನೀನು
...ತಗಂಡ್ರೆ ನನ್ನ ಕತೆ ಮುಗಿದಂಗೆ ಅಂತ ಅಂದನಂತೆ.
...ಗೆ ಸುಮ್ಮನಾದಳಂತೆ" ಎಂದ.
...ನು ಅದೇತರ ಹೇಳಿ ನಮ್ಮನಿಯೋಳ್ಗ
...ಸಬೇಕಾಗ್ತದೆ ಚಿಗಪ್ಪ" ಎಂದ ವಾಟಿಸ್ಸೆ. ■

...ಂಸ್ಕೃತ(!) ಭಾಜಪದಲ್ಲಿ ಇಂತಹ ಅಭ್ಯರ್ಥಿಗಳೆ?
...ಕಿ ಎಂಬ ಕಾಂಗ್ರೆಸ್ ಕಾರ್ಯಕರ್ತನ ಮೇಲೆ
...ಂತಿಕ ಹಲ್ಲೆ ನಡೆಸಿದರೆ? ಬಂಧನದ ಭಯದಿಂದ
...ಯಾಗಿಯೂ, ಚುನಾವಣೆಗೆ ಒಂದೇ ದಿನ ಇದೆ
..., ತಲೆಮರೆಸಿಕೊಂಡರೆ? ಏನಂತ ಕರೆಯಬೇಕು?
...ಗುಣ ಸಂಪನ್ನನೆಂದೆ?
...ನ್ನುತ್ತಾರೆ 'ಸುಸಂಸ್ಕೃತ' ಪಕ್ಷದ ನಾಯಕರು?
...ಏ ಕಾಂಗ್ರೆಸ್ ಪಿತೂರಿ! ಮೊಯ್ಲಿ, ಕೃಷ್ಣ ಸಂಚು!
...ನಾಯಕರು ಆದರ್ಶ ನಾಯಕರು ಅಲ್ಲ, ನಿಜ.
...ಇಂತಹ ಕೀಳುಮಟ್ಟಕ್ಕೆ ಇಳಿಯುವವರೂ ಅಲ್ಲ.

...ರಾಮುಲು ನಿರೀಕ್ಷಣಾ ಜಾಮೀನು ಪಡೆದಿದ್ದಾರೆ.
...ದಿಂದ ಮುಕ್ತವೂ ಆಗುತ್ತಾರೆ!
... ಹೇಳಬೇಕಾಗಿಲ್ಲ, ಹಣ ಹೇಳುತ್ತೆ!
...ಕ್ಕೆ, ಇಂತಹವರು ಯದ್ದಿಗೆ ಆಪ್ಯಾಯಮಾನ!
... ಶ್ರೀರಾಮುಲು!

* * * * * *


...ದಲ ಹಂತದ ಚುನಾವಣೆ.
...ನಾವಣೆ ಆಯುಕ್ತರ ಕಟ್ಟೆಚ್ಚರ. ಲೌಡ್ ಸ್ಪೀಕರ್
... ಇಲ್ಲ, ರೌಡಿಗಳ ಹಾವಳಿ ಇಲ್ಲ, ಕಟೌಟ್‌ಗಳ
...ಲ್ಲ, ಹಣ, ಹೆಂಡ ಹಂಚದಂತೆ ಸರ್ಪ ಕಾವಲು.
...ಚ್ಚಿ ಹಂಚಿದ್ದರೂ ಅದು ನಗಣ್ಯ. ಭೇಷ್
...ನಾ ಆಯುಕ್ತ ಅಂತ ಎಲ್ಲರ ತಾರೀಫು.
...ಡನೆ ಹಂತದ ಚುನಾವಣೆ.
...ಧ್ಯಮಗಳ ವರದಿ ಸತ್ಯವೇ ಆದರೆ....
...ಡು, ಹಣದ ಚೆಲ್ಲಾಟ! ರೌಡಿಗಳ ಅರ್ಭಟ!
... ಗುಂಡುಗಳ ಮೆರೆದಾಟ!
...ರನೆ ಹಂತದ ಚುನಾವಣೆ?
...ಗುವುದೋ ಗೊತ್ತಿಲ್ಲ.
...ಸಂಹಿತೆ ಅನ್ನೋದು ದಕ್ಷಿಣ ಕರ್ನಾಟಕಕ್ಕೇ
...ಮಧ್ಯ ಕರ್ನಾಟಕಕ್ಕೇ ಬೇರೆ; ಕರಾವಳಿ ಕರ್ನಾಟಕಕ್ಕೇ
...ಉತ್ತರ ಕರ್ನಾಟಕಕ್ಕೇ ಬೇರೆ ಅಂತ ಏನಾದರೂ
... ಅಂತ!
...ರನೆ ಹಂತದ ಚುನಾವಣೆಯಲ್ಲಾದರೂ ಎರಡನೆ
... ಚುನಾವಣೆ 'ನೀತಿಸಂಹಿತೆ'ಯೇ ಜಾರಿಗೆ
...ಲಿ ಎಂಬುದು ಆಶಯ ಅಷ್ಟೆ! ■

ಇವರು ವೀರಶೈವರೆಂದರೆ ನಗುವ ನಮ್ಮ ಕೂಡಲಸಂಗಮದೇವ

ಅವನ್ಯಾರೋ.... ಮಗ 'ಲಿಂಗಾಯತರು ಮೂರ್ಖರು' ಅಂದರೆ ಅದನ್ನು ನೀವು ಯಾಕೆ ಪ್ರಕಟಿಸಬೇಕು? ಹಾಗೆ ಪ್ರಕಟಿಸುವ ಮೂಲಕ ಲಿಂಗಾಯತರಿಗೆ ಯಾಕೆ ಅವಮಾನ ಮಾಡಬೇಕು? ಅವರ ಮನಸ್ಸನ್ನು ಯಾಕೆ ನೋಯಿಸಬೇಕು?

ಹೌದು, ಆತ ಹೇಳಿದಂತೆ ಲಿಂಗಾಯತರು ಐದಕ್ಷರ ಮಾತ್ರ ಗೊತ್ತಿರುವ ಪಂಚಾಕ್ಷರಿಗಳು ಅಥವಾ ಆರಕ್ಷರ ಮಾತ್ರ ಗೊತ್ತಿರುವ ಷಡಾಕ್ಷರಿಗಳು. ಲಿಂಗಾಯತರು ಮೂರ್ಖರಾಗಿರುವುದರಿಂದಲೇ ಇವತ್ತು ಬಿಜೆಪಿಯಂತಹ ಪಕ್ಷವನ್ನು ಬೆಂಬಲಿಸುತ್ತಿರುವುದು. ಇದು ಸತ್ಯ.

ಆದರೆ ಆ ಸತ್ಯವನ್ನು ಮುಖಪುಟದಲ್ಲಿ ನೀವು ಪ್ರಕಟಿಸಿ ನಮ್ಮ ಪೆದ್ದುತನ ಜಗಜ್ಜಾಹೀರಾಗುವಂತೆ ಮಾಡಬಾರದಿತ್ತು, ಇನ್ನು ಮುಂದೆ ಬೇರೆ ಜಾತಿಯವರ ಮುಂದೆ ನಾವು ತಲೆ ಎತ್ತಿ ನಡೆಯಲಿಕ್ಕೂ ಆಗದಂತೆ ಮಾಡಿದ್ದೀರಿ.



ನಿಮ್ಮ ಈ ದುಷ್ಟತನಕ್ಕೆ ನಮ್ಮ ಧಿಕ್ಕಾರ.

-ಅನಾಮಿಕರು, ಫೋನ್ ಮೂಲಕ

'ಲಿಂಗಾಯತರು ಮೂರ್ಖರು-ಅನಂತಕುಮಾರ್' ಲೇಖನ ತುಂಬಾ ಚೆನ್ನಾಗಿತ್ತು, ಅದರಲ್ಲೂ ನೀವು 'ಯಾರು ಬೇಕಾದರೂ ಇದರ ಜೆರಾಕ್ಸ್ ಕಾಪಿಗಳನ್ನು ಮಾಡಿ ಹಂಚಬಹುದು' ಎಂಬ ವಿಶೇಷ ಸೂಚನೆ ನೀಡಿದ್ದು ಬಹಳಷ್ಟು ಕೆಲಸ ಮಾಡಿದೆ. ಗುಲ್ಬರ್ಗಾ ಸೇರಿದಂತೆ ಹಲವಾರು ಕಡೆ ಕಾಂಗ್ರೆಸ್ ಪಕ್ಷದವರು ತಮ್ಮ ಪಕ್ಷದ ಪ್ರಣಾಳಿಕೆ ಮತ್ತು ಕರಪತ್ರಗಳನ್ನು ಬದಿಗಿಟ್ಟು ಆ ವರದಿಯ ಸಾವಿರಾರು ಪ್ರತಿಗಳನ್ನು ಹಂಚಿದರು.



ಬಿಜೆಪಿಯವರ ಪುರೋಹಿತಶಾಹಿ ಮನಸ್ಸನ್ನು ಮತ್ತು ಯಡಿಯೂರಪ್ಪನಂತಹ ಲಿಂಗಾಯತನ ನಾಲಾಯಕ್‌ತನವನ್ನು ಬಹಿರಂಗಪಡಿಸಿದ್ದಕ್ಕೆ ಧನ್ಯವಾದಗಳು.

-ಅಜಯ್‌ಕುಮಾರ್, ಗುಲ್ಬರ್ಗಾ

'ಲಿಂಗಾಯತ ಧರ್ಮ ಮತ್ತು ಬಿಜೆಪಿ ಸಿದ್ಧಾಂತ ತದ್ವಿರುದ್ಧ' ಎಂಬ ಸಂಪಾದಕೀಯವನ್ನು ಓದಿ ತುಂಬಾ ಸಂತೋಷವಾಯಿತು.


ಯಾವ ರೀತಿಯಿಂದಲೂ ಯಡಿಯೂರಪ್ಪ ಲಿಂಗಾಯತ ಧರ್ಮಕ್ಕೆ ಸೇರಿದವನಲ್ಲ ಎಂದು ಸ್ಪಷ್ಟವಾಯಿತು.

ಈ ಚುನಾವಣೆಯಲ್ಲಿ ಬಿಜೆಪಿ ಸೋಲಲಿ ಎಂಬ ಆಶಯದಿಂದ,

-ಜ್ಯೋತಿ ಗುರುಪ್ರಸಾದ್, ಕಾರ್ಕಳ

ತಾನೇ ಈ ರಾಜ್ಯದ ಭಾವಿ ಮುಖ್ಯಮಂತ್ರಿ ಎಂಬಂತೆ ಮೆರೆದಾಡುತ್ತಿರುವ ಯಡಿಯೂರಪ್ಪನ ದುಷ್ಟ ಹಾಗು ಕರಾಳ ಚರಿತ್ರೆಯನ್ನು ಏಪ್ರಿಲ್ 30 ರ ಸಂಚಿಕೆಯಲ್ಲಿ ದಿಟ್ಟ ಹಾಗು ನೇರವಾಗಿ ಪ್ರಕಟಿಸುವ ಮೂಲಕ ಈ 'ನಾಯಕ'ನ ನಿಜ ಸ್ವರೂಪವನ್ನು ಜನರಿಗೆ ತಿಳಿಸಿದ್ದೀರಿ. ಅದಕ್ಕೆ ತಮಗೆ ಅನನ್ಯ ಅಭಿನಂದನೆಗಳು.

ಯಾರಿಗೇ ಆದರೂ ಯಡಿಯೂರಪ್ಪನ ಧರ್ಮಪತ್ನಿ ಮೈತ್ರಾದೇವಿಯವರು ಆ ಚಿಕ್ಕ ಸಂಪ್‌ನಲ್ಲಿ ಬಿದ್ದು ಸಾಯುವುದು ಸಾಧ್ಯವೇ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೂ ಈ ರಾಜ್ಯ ಕಂಡ ಅತಿ ಸೋಮಾರಿ ಮತ್ತು ಅಸಮರ್ಥ ಮುಖ್ಯಮಂತ್ರಿ ಧರ್ಮಸಿಂಗ್ ಮೇಲೆ ಪ್ರಭಾವ ಹೇರಿ, ತನ್ನ ಅಧಿಕಾರದ ಸ್ಥಾನದಿಂದಾಗಿಯೇ ಪೊಲೀಸರ ದಿಕ್ಕುತಪ್ಪಿಸಿ ಮೈತ್ರಾದೇವಿಯವರ ಸಾವು ಸಹಜ ಸಾವು ಎಂದು ಬಿಂಬಿಸುವಲ್ಲಿ ಯಶಸ್ವಿಯಾದ ಯಡಿಯೂರಪ್ಪ ನಿಜವಾಗಲೂ ಗೋಮುಖ ವ್ಯಾಘ್ರನೇ. ಇಂತಹ ಕರಾಳ ಚರಿತ್ರೆಯನ್ನು ಹೊಂದಿರುವ ವ್ಯಕ್ತಿಯೊಬ್ಬ ಈ ರಾಜ್ಯದ ಮುಖ್ಯಮಂತ್ರಿಯಾದರೆ ನಮ್ಮ ದೇವತೆ ಚಾಮುಂಡೇಶ್ವರಿ ಕೂಡ ನಮ್ಮನ್ನು ರಕ್ಷಿಸಲಾರಳು.



-ಆರ್.ಎನ್. ಸತ್ಯನಾರಾಯಣ ಮೊಕ್ತಾರ್, ಬೆಂಗಳೂರು

ನಾನು ಒಬ್ಬ ಕನ್ನಡ ಪತ್ರಿಕೆಗಳ ಓದುಗಾರನಾಗಿದ್ದು ಇತ್ತೀಚಿಗೆ ನಿಮ್ಮ ಪತ್ರಿಕೆಯಲ್ಲಿ ಬರೀ ಸ್ವಾರ್ಥದಿಂದ, ದ್ವೇಷದಿಂದ, ಅಸೂಯೆಯಿಂದ ಬಿಜೆಪಿ ಬಗ್ಗೆ ಕೆಟ್ಟದಾಗಿ ಬರೆದು, ಜನರಲ್ಲಿ ವಿರೋಧ ಭಾವನೆ ಬಿಂಬಿಸುತ್ತಿರುವುದನ್ನು ಗಮನಿಸಿದ್ದೇನೆ. ಇದು ಸರಿ ಎಂದು ನನಗೆ ತೋರುತ್ತಿಲ್ಲ.

ಬರೀ ಬಿಜೆಪಿ ಅದರಲ್ಲೂ ಯಡಿಯೂರಪ್ಪ ಅವರ ಬಗ್ಗೆ ಬರೆದು ಜನರಲ್ಲಿ ದ್ವೇಷ ಹುಟ್ಟಿಸುತ್ತಿದ್ದೀರಿ. ಹಾಗೆಯೇ ಕಾಂಗ್ರೆಸ್ ಬಗ್ಗೆ ಜೆಡಿಎಸ್ ಬಗ್ಗೆ ಬರೆಯಿರಿ. ಕಾಂಗ್ರೆಸ್‌ರ ಬಗ್ಗೆ ನಿಮಗೆ ಒಲವು ಇರುವಂತಿದೆ. ಅದಕ್ಕಾಗಿ ಬಿಜೆಪಿ ಬಗ್ಗೆ ಬರೆಯುತ್ತಿರುವಿರಿ.

ನಿಮ್ಮ ಪ್ರಕಾರ ಬಿಜೆಪಿ ಅಷ್ಟು ಕೆಟ್ಟ ಪಕ್ಷವಾಗಿದ್ದರೆ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಲಾಗುತ್ತಿತ್ತೇ? ಹಾಗೂ ಯಡಿಯೂರಪ್ಪ ಸತತ 5 ನೇ ಬಾರಿ ಗೆಲ್ಲಲು ಸಾಧ್ಯವಾಗುತ್ತಿತ್ತೇ?

-ಬಿ.ಕೆ. ತೋಟಸ್ವಾಮಿ, ಬೆಂಗಳೂರು



ಸುಭಾಷ್ ಭರಣಿಯಂಥ ವ್ಯಕ್ತಿಯನ್ನು ಕಂಡರೆ 'ಕೊಡಲಿಯು ಕಾವು ಮರಕ್ಕೆ ಮೃತ್ಯು' ಎಂಬ ನಾಣ್ಣುಡಿ ನೆನಪಾಗುತ್ತದೆ. ದಲಿತ ಯುವ ಜನರು ಈತನನ್ನು ಸಂತನೆಂದು ಭಾವಿಸಿದ್ದರು. ಸಾಹಿತ್ಯ ಸಮಾರಂಭಗಳಿಗೆ ಇವರು ಬಂದಾಗ ಕೆಲವು ದಲಿತ ಯುವಕರು ಇವರ ಬೂಟುಕಾಲು ಮುಟ್ಟಿ ನಮಸ್ಕರಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಇಂತಹ ವ್ಯಕ್ತಿ ಈಗ ಬಿಜೆಪಿಗೆ ಹಾರಿಕೊಂಡನೆಂದರೆ ಅದು ದಲಿತ ಸಮುದಾಯಕ್ಕೆ ಮಾಡಿದ ಅವಮಾನ. ದಲಿತರಲ್ಲಿ ಬಲಿತ ಕುಬ್ಬ ವ್ಯಕ್ತಿಯಾಗಿರುವ ಈತ ಹೆಚ್ಚುವರಿ ಪೊಲೀಸ್ ಕಮಿಷನರ್ ಆಗಿದ್ದಾಗ, 2003 ರ ಡಿಸೆಂಬರ್‌ನಲ್ಲಿ ಸಾಹಿತಿ ಕಲಾವಿದರನ್ನು ಚಿಕ್ಕಮಗಳೂರು ಜೈಲಿಗೆ ದೂಡಿ, ಸಂಘ ಪರಿವಾರದವರು ಶೋಭಾಯಾತ್ರೆ, ದತ್ತ ಜಯಂತಿ ನೆರವೇರಿಸಲು ಅನುವು ಮಾಡಿಕೊಟ್ಟದ್ದು ಈಗ ಇತಿಹಾಸ. "ನಿಮ್ಮ ಒಳಿತಿಗಾಗಿಯೇ ಜೈಲಿಗೆ ಕರೆ ತಂದಿದ್ದೇವೆ, ಸಂಜೆಗೆ ಬಿಟ್ಟು ಬಿಡುತ್ತೇವೆ" ಎಂದ ಭರಣಿ ಎರಡು ದಿನ ಆ ಚಳಿಯಲ್ಲಿ ಶೌಚ ಸೌಲಭ್ಯಗಳಿಲ್ಲದ ಆ ಜೈಲಿನಲ್ಲಿ ಮಹಿಳೆಯರೂ ಸೇರಿದಂತೆ ಸುಮಾರು ಒಂದು ಸಾವಿರ ಜನರನ್ನು ಕೂಳೆ ಹಾಕಿದರು.

ಹೀಗೆ ಪುರೋಹಿತಶಾಹಿಗಳ ಪಾದ ನೆಕ್ಕುವ ಗುಲಾಮತನ ಅವರ ಮನೆತನದಲ್ಲಿಯೇ ಬಂದಿರಬಹುದು. ಯಾಕೆಂದರೆ ಹಿಂದೆ ಆ ಮನೆತನ ಮೈಸೂರು ಅರಸರ ಸನ್ನಿಧಿಯಲ್ಲಿ ಕಿಂಕರರಾಗಿ ಸೇವೆ ಸಲ್ಲಿಸಿದ್ದಾರಲ್ಲವೆ? ಈಗ ದಲಿತರ ಹೆಸರಲ್ಲಿ ಬಿಜೆಪಿ ಮುಖವಾಡ ಹೊತ್ತು ಈತ ರಾಜಕಾರಣಕ್ಕಿಳಿದಿರುವುದನ್ನು ನಮ್ಮ ಟಿ. ನರಸೀಪುರದ ಮತದಾರರು ಅರಿಯದಷ್ಟು ದಡ್ಡರಲ್ಲ. ಅವರಿಗೆ ಸೂಕ್ತ ಜಾಗ ತೋರಿಸುತ್ತಾರೆಂಬುದು ನನ್ನ ನಂಬಿಕೆ. ಈ ನಿಟ್ಟಿನಲ್ಲಿ ಬಿಳಿದಾಳೆ ಈಶರ 'ದಲಿತ ದ್ರೋಹಿ ಭರಣಿ'ಲೇಖನ ಪ್ರಸ್ತುತವಾಗಿದೆ.

ಹಾಗೆಯೇ ಅದೇ ಸಂಚಿಕೆಯಲ್ಲಿ ಇನ್ನೊಂದು ಲೇಖನ 'ಗುಜರಾತನ್ನು ಯಾಕೆ ಮರೆತಿರಿ ರೇವಣಸಿದ್ದಯ್ಯ?' ಎಂಬುದೂ ಸಹ ಮೈಸೂರಿನ ಮತದಾರನಿಗೆ ಬಿಜೆಪಿ ಬಗ್ಗೆ ಎಚ್ಚರಿಕೆಯ ಗಂಟೆಯಾಗಿದೆ. ಜಿ. ರಾಜಶೇಖರ ಅವರು ಈ ಲೇಖನವನ್ನು ಸಕಾಲಿಕವಾಗಿಯೇ ಕಳುಹಿಸಿದ್ದಾರೆ. ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ರೇವಣಸಿದ್ಧಯ್ಯನವರು ಸಂಘ ಪರಿವಾರ ಗುಜರಾತಿನಲ್ಲಿ (2002) ನಡೆಸಿದ ಹತ್ಯಾಕಾಂಡವನ್ನು ಚೆನ್ನಾಗಿ ಬಲ್ಲವರು. ನರಹಂತಕ ನರೇಂದ್ರ ಮೋದಿ ಹಾಗೂ ಆತನ ಬೆಂಬಲಿಗ ಮಾಜಿ ಗೃಹ ಮಂತ್ರಿ ಎಲ್.ಕೆ. ಅಡ್ವಾಣಿಯವರು ಆತನಿಗೆ ಕೊಟ್ಟ ಕುಮ್ಮಕ್ಕು ನಾಗರಿಕ ಜಗತ್ತು ನಾಚಿಕೊಳ್ಳುವಂಥದ್ದು. ಅದನ್ನೆಲ್ಲಾ ಅಲ್ಲಿಗೆ ಹೋಗಿ ಕಂಡುಬಂದು, 'ಗುಜರಾತಿನಲ್ಲಿ ಸರ್ಕಾರ, ಅಧಿಕಾರಿ ವರ್ಗ ಎಲ್ಲರಿಗೂ ತಿಳಿದಂತೆಯೇ, ಅವರ ಬೆಂಬಲದಿಂದಲೇ ಅಲ್ಪಸಂಖ್ಯಾತರ ಮೇಲೆ ಹತ್ಯಾಕಾಂಡ ಜರುಗಿದೆ' ಎಂದು ಉಡುಪಿಯಲ್ಲಿ ಹೇಳಿದ ರೇವಣಸಿದ್ಧಯ್ಯನವರು ಯಾವ ಮೌಲ್ಯಾಧಾರಿತ ರಾಜಕಾರಣಿಯಾಗಿ ಬಿಜೆಪಿಗೆ ಹೋಗಿದ್ದಾರೆ? ಮುಂದೆ ಬಿಜೆಪಿ ಅಧಿಕಾರಕ್ಕೆ ಒಂದು ವೇಳೆ ಬಂದರೆ ಇವರು ಕರ್ನಾಟಕವನ್ನು ಗುಜರಾತ್‌ನಂತೇ ಮಾಡುತ್ತಾರೆಯೋ ಹೇಗೆ? ಎಂಬುದನ್ನು ಸದ್ಯ ಮತದಾರರೇ ನಿರ್ಧರಿಸಬೇಕಾಗಿದೆ.

ಜೊತೆಗೆ 'ದಯವೇ ಧರ್ಮದ ಮೂಲವಯ್ಯ' ಎಂದ ಬಸವಾದಿ ಶರಣರಿಗೂ, ಹೀಗೆ ನರಹಂತಕ (ಗಾಂಧಿ ಕೊಲೆ) ಪರಂಪರೆಯ ಸಂಘಿಗಳಿಗೂ ಸಮೀಕರಣ ಹೇಗೆ ಸಾಧ್ಯ? ಇಂಥ ಅವಕಾಶವಾದಿ ವೀರಶೈವ (ಕೆಲವರು) ವ್ಯಕ್ತಿಗಳು ಹೀಗೆ ಅಧಿಕಾರಕ್ಕಾಗಿ ಬಿಜೆಪಿಗೆ ಗುಲಾಮರಾಗುತ್ತಿರುವುದು ಬಸವತತ್ವಕ್ಕೆ ಇವರು ಮಾಡುವ ಅವಮಾನ ಹಾಗೂ 'ಇವರು ವೀರಶೈವರೆಂದರೆ ನಗುವ ನಮ್ಮ ಕೂಡಲ ಸಂಗಮದೇವ'!


-ಶಿವರಾಮಯ್ಯ, ಬೆಂಗಳೂರು

ಹಾವೇರಿ: ಬಿಜೆಪಿ ಮುಂದೆ!

ಹಾವೇರಿ ಜಿಲ್ಲೆಯಲ್ಲಿರುವ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ನಾಲ್ವರು ಮಾಜಿ ಸಚಿವರನ್ನೂ ಒಳಗೊಂಡು ಹದಿಮೂರು ಮಾಜಿ ಶಾಸಕರು ಸ್ಪರ್ಧೆಯಲ್ಲಿದ್ದಾರೆ. ಇವರಲ್ಲಿ ಹನ್ನೊಂದು ಜನ ವಿವಿಧ ಪಕ್ಷಗಳಿಂದ ಕಣಕ್ಕಿಳಿದಿದ್ದರೆ ಉಳಿದ ಇಬ್ಬರು ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ.

ಚುನಾವಣೆ 2008

ರಾಣೇಬೆನ್ನೂರು: ತಿಳವಳ್ಳಿಗೆ ಮುನ್ನಡೆ!



ಕಾಂಗ್ರೆಸ್‌ನಿಂದ ಮಾಜಿ ಸಚಿವ ಕೆ.ಬಿ.ಕೋಳಿವಾಡ, ಬಿಜೆಪಿಯಿಂದ ಮಾಜಿ ಶಾಸಕ ಜಿ.ಶಿವಣ್ಣ ತಿಳವಳ್ಳಿ ಹಾಗೂ ಜೆಡಿಎಸ್‌ನಿಂದ ರಾಮಲಿಂಗಣ್ಣನವರ್ ಎಸ್.ಎಸ್. ಕಣದಲ್ಲಿದ್ದಾರೆ. ಆದರೆ ಹಣಾಹಣಿ ಇರುವುದು ಕೋಳಿವಾಡ ಮತ್ತು ಶಿವಣ್ಣನ ನಡುವೆಯೇ. ಜೆಡಿಎಸ್‌ಗೇನಿದ್ದರೂ ಇಲ್ಲಿ ಮೂರನೇ ಸ್ಥಾನ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ರಾಮಚಂದ್ರಪ್ಪ ಬಿಲ್ಲಾಳ ಕೇವಲ ಕಾಂಗ್ರೆಸ್‌ಗೆ ಮಾತ್ರವಲ್ಲ; ಬಿಜೆಪಿಗೂ ಅಡ್ಡಗಾಲಾಗಿದ್ದಾರೆ.

ಬಿಜೆಪಿಯ ಜಿ.ಶಿವಣ್ಣ ಹಾಗೂ ಜೆಡಿಎಸ್‌ನ ರಾಮಲಿಂಗಣ್ಣನವರ್ ಇಬ್ಬರೂ ಲಿಂಗಾಯತ ಸಮುದಾಯಕ್ಕೆ ಸೇರಿರುವುದರಿಂದ ಆ ಸಮುದಾಯದ ಮತಗಳು ಇವರಿಬ್ಬರ ನಡುವೆ ಒಡೆದುಹೋಗುವ ಛಾನ್ಸು ಜಾಸ್ತಿಯಿದೆ. ಬಿಜೆಪಿಯ ಶಿವಣ್ಣ ತಿಳವಳ್ಳಿ ಹಿಂದಿನ ಅವಧಿಯ ಶಾಸಕನಾಗಿ ಮೆತ್ತಗೆ ಇಡೀ ತಾಲ್ಲೂಕನ್ನು ಕೊಳ್ಳೆ ಹೊಡೆದಾತ. ಬಿಜೆಪಿಯ ಜಿಲ್ಲಾಧ್ಯಕ್ಷ ಕೆ.ಶಿವಲಿಂಗಪ್ಪ ಶಿವಣ್ಣನನ್ನು ಹೇಗಾದರೂ ಮಾಡಿ ಸೋಲಿಸಿಯೇ ತೀರುತ್ತೇನೆಂದು ಪಣ ತೊಟ್ಟಿದ್ದಾನೆ. ಶಿವಲಿಂಗಪ್ಪ ಕಳೆದ ಬಾರಿ ತನಗೆ ಸಿಕ್ಕಿದ್ದ ಬಿ ಫಾರ್ಮ್ ಅನ್ನು ಕಡೆ ಗಳಿಗೆಯಲ್ಲಿ ಶಿವಣ್ಣನಿಗೆ ಬಿಟ್ಟು ಕೊಟ್ಟಿದ್ದ. ಆದರೆ, ಶಿವಣ್ಣ ಶಾಸಕನಾದ ಮೇಲೆ ತನ್ನ ಗುಳ್ಳೆ ನರಿ ಬುದ್ಧಿ ಪ್ರದರ್ಶಿಸಿದ್ದರಿಂದ ಈತ ಈಗ ಸೆಟಗೊಂಡಿದ್ದಾನೆ. ಈ ಒಳಜಗಳವೇ ಬಿಜೆಪಿಯನ್ನು ರಾಣೇಬೆನ್ನೂರಿನಲ್ಲಿ ಈ ಬಾರಿ ಹಣ್ಣು ಮಾಡಲಿದೆ.

ಹಿಂದಿನ ಕೃಷ್ಣ ಸರ್ಕಾರದಲ್ಲಿ ಸಣ್ಣದೊಂದು ಖಾತೆಗೆ ಮಂತ್ರಿಯಾಗಿದ್ದ ಕೆ.ಬಿ.ಕೋಳಿವಾಡ ರಾಜ್ಯ ರಾಜಕಾರಣದಲ್ಲಿ ಎಚ್.ಕೆ. ಪಾಟೀಲರ ವಿರೋಧಿ. ಈತ ರೆಡ್ಡಿ ಜನಾಂಗಕ್ಕೆ ಸೇರಿದವರಾಗಿದ್ದು ಆ ಸಮುದಾಯದ ಮತಗಳು ಕೇವಲ ನಾಲ್ಕೈದು ಸಾವಿರವಿದ್ದರೂ ವರ್ಚಸ್ಸು ಬೆಳೆಸಿಕೊಂಡಾತ. ಈತನ ಶಿಷ್ಯ ರಾಮಲಿಂಗಣ್ಣನವರ್‌ಗೆ ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಜೆಡಿಎಸ್‌ನಿಂದ ಗುರುವಿನ ವಿರುದ್ಧವೇ ಸೆಡ್ಡು ಹೊಡೆದಿದ್ದಾನೆ. ರಾಮಲಿಂಗಣ್ಣನವರ್ ರಾಣೇಬೆನ್ನೂರಿನಲ್ಲಿ ನಿರ್ಣಾಯಕವಾಗಿರುವ ಪಂಚಮಸಾಲಿ ಸಮುದಾಯಕ್ಕೆ ಸೇರಿದವರಾಗಿದ್ದು ಆ ಸಮುದಾಯದ ಸಂಘಟನೆಯಲ್ಲಿ ಮುಂಚೂಣಿಯಲ್ಲಿರುವ ವ್ಯಕ್ತಿ. ಇಡೀ ಸಮುದಾಯ ಅವರ ಬೆನ್ನ ಹಿಂದೆ ನಿಂತರೆ ಕೋಳಿವಾಡಗೆ ಕಷ್ಟ.

ಸದ್ಯದ ಪರಿಸ್ಥಿತಿಯಲ್ಲಿ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯೇ ಸ್ಪರ್ಧೆಯಿದ್ದು ಯಾರು ಗೆಲ್ಲುತ್ತಾರೆಂಬುದನ್ನು ಹೇಳಲು ಕಷ್ಟ.

ಹಾವೇರಿ ಮೀಸಲು: ಗೆಲ್ಲಲಿರುವ ನೆಹರೂ ಓಲೇಕಾರ್


ಮೊದಲು ಸಾಮಾನ್ಯ ಕ್ಷೇತ್ರವಾಗಿದ್ದ ಹಾವೇರಿ ಕ್ಷೇತ್ರ ಪುನರ್ವಿಂಗಡಣೆಯ ಕಾರಣದಿಂದಾಗಿ ಮೀಸಲು ಕ್ಷೇತ್ರವಾಗಿ ಪರಿವರ್ತನೆಗೊಂಡಿದೆ. ಹೀಗಾಗಿ, ಇಲ್ಲಿಂದ ಆಯ್ಕೆಗೊಂಡಿದ್ದ ಮಾಜಿ ಸಚಿವ ಸಿ.ಎಂ. ಉದಾಸಿ ಎಂಬ ಮುದಿ ರಾಜಕಾರಣಿ ಕ್ಷೇತ್ರ ಕಳೆದುಕೊಂಡು ಪಕ್ಕದ ಕ್ಷೇತ್ರಕ್ಕೆ ವಲಸೆ ಹೋಗಿದ್ದಾನೆ. ಕಾಂಗ್ರೆಸ್‌ನಿಂದ ಶಾರದಾ ಬೆಟಗೇರಿ, ಬಿಜೆಪಿಯಿಂದ ನೆಹರೂ ಓಲೇಕಾರ, ಜೆಡಿಎಸ್‌ನಿಂದ ಕಮಲಾ ನಾಯಕ ಹಾಗೂ ಬಿಎಸ್ಪಿಯಿಂದ ಬಸವಂತಪ್ಪ ಗೋಣೆಮ್ಮನವರ್ ಕಣದಲ್ಲಿದ್ದಾರೆ.

ಬ್ಯಾಡಗಿಯಿಂದ ಆಯ್ಕೆಗೊಂಡಿದ್ದ ಬಿಜೆಪಿಯ ನೆಹರೂ ಓಲೇಕಾರ ಹಾಗೂ ಕಾಂಗ್ರೆಸ್ಸಿನ ಶಾರದಾ ಬೆಟಗೇರಿಯ ವಿರುದ್ಧವೇ ಬಂಡಾಯ ಅಭ್ಯರ್ಥಿಯಾಗಿ ಮಾಜಿ ಶಾಸಕ ರುದ್ರಪ್ಪ ಲಮಾಣಿ ಸೆಡ್ಡು ಹೊಡೆದಿದ್ದಾನೆ. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಕಮಲಾ ನಾಯಕಗೆ ಕ್ಷೇತ್ರದ ಲಂಬಾಣಿ ಮತಗಳು ಗ್ಯಾರಂಟಿಯಾಗಿವೆ.

ಕಾಂಗ್ರೆಸ್‌ನ ಶಾರದಾ ಬೆಟಗೇರಿ ರಾಜಕಾರಣಕ್ಕೆ ಹೊಸಬರು. ಬಿಜೆಪಿಯ ಓಲೇಕಾರ್‌ಗೆ ಕಾಂಗ್ರೆಸ್ಸಿನೊಳಗಡೆಯೇ ಒಂದು ಗುಂಪು ಸಹಾಯ ಮಾಡುತ್ತಿದೆ. ಅದೂ ಅಲ್ಲದೇ, ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಬ್ಯಾಡಗಿ ಕ್ಷೇತ್ರದ ಹಲವು ಗ್ರಾಮಗಳು ಹಾವೇರಿಗೆ ಸೇರ್ಪಡೆಗೊಂಡಿರುವುದರಿಂದ ಅದು ಓಲೇಕಾರ್‌ಗೆ ಸಹಾಯ ಮಾಡಲಿದೆ. ಇದೆಲ್ಲವನ್ನು ಇಟ್ಟುಕೊಂಡು ನೋಡಿದರೆ ನೆಹರೂ ಓಲೇಕಾರ್ ಮೇಲುಗೈ ಸಾಧಿಸುವ ಸಾಧ್ಯತೆ ಕಾಣುತ್ತಿದೆ.

ಹಾನಗಲ್: ಉದಾಸಿ V/s ತಹಶೀಲ್ದಾರ್

ಕಾಂಗ್ರೆಸ್‌ನಿಂದ ಮನೋಹರ್ ತಹಶೀಲ್ದಾರ್, ಬಿಜೆಪಿಯಿಂದ ಸಿ.ಎಂ.ಉದಾಸಿ, ಜೆಡಿಎಸ್‌ನಿಂದ ಎ.ಎಂ.ಪಠಾಣ ಹಾಗೂ ಸಮಾಜವಾದಿ ಪಕ್ಷದಿಂದ ಗುಡ್ಡಪ್ಪ ಗಂಟೇರ್ ಕಣದಲ್ಲಿದ್ದಾರೆ. ಮೇಲುನೋಟಕ್ಕೆ ಇಲ್ಲಿ ಉದಾಸಿ ಮತ್ತು ಅವನ ಪಾರಂಪರಿಕ ರಾಜಕೀಯ ವೈರಿ ತಹಶೀಲ್ದಾರ್ ನಡುವೆಯೇ ನೇರ ಹಣಾಹಣಿ ನಡೆಯಲಿದೆ.



ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಮುಸ್ಲಿಮ್ ಸಮುದಾಯದ ಎ.ಎಂ.ಪಠಾಣ ಕಾಂಗ್ರೆಸ್‌ನ ಪಾರಂಪರಿಕ ಓಟ್‌ಬ್ಯಾಂಕ್ ಆದ ಮುಸ್ಲಿಮ್ ಮತಗಳನ್ನು ಕೀಳುವುದರಿಂದ ತಹಶೀಲ್ದಾರರಿಗೆ ಮೈನಸ್ ಪಾಯಿಂಟ್ ಆಗಲಿದೆ. ಹೀಗಿದ್ದರೂ ಮನೋಹರ್ ತಹಶೀಲ್ದಾರ್ ಕ್ಷೇತ್ರದಾದ್ಯಂತ ಓಡಾಡಿ ಕೆಲಸ ಮಾಡುತ್ತಿರುವುದರಿಂದ ಅವರ ಗೆಲುವನ್ನು ತಳ್ಳಿ ಹಾಕುವಂತಿಲ್ಲ.



ಶಿಗ್ಗಾಂವಿ: ಬೊಮ್ಮಾಯಿ ಮನೆಗೆ ಖಾದ್ರಿ ವಿಧಾನಸೌಧಕ್ಕೆ


ಇದು ನಾಡಿಗೆ ಭಾವೈಕ್ಯತೆಯನ್ನು ಸಾರಿದ ಸಂತ ಶಿಶುನಾಳ ಷರೀಫ್ ಮತ್ತು ಗುರುಗೋವಿಂದಭಟ್ಟರ ಕ್ಷೇತ್ರ. ಇಲ್ಲಿ ಕೋಮುವಾದಿ ಬಿಜೆಪಿಯಿಂದ ಬಸವರಾಜ್ ಬೊಮ್ಮಾಯಿ ಸ್ಪರ್ಧಿಸಿದ್ದರೆ ಕಾಂಗ್ರೆಸ್‌ನಿಂದ ಅಜ್ಜಂಪುರ್ ಖಾದ್ರಿ ಕಣದಲ್ಲಿದ್ದಾರೆ. ಜೆಡಿಎಸ್‌ನಿಂದ ಪ್ರೇಮಾ ಪಾಟೀಲ್ ನಿಂತಿದ್ದಾರೆ.

ಇಲ್ಲಿ ಪಂಚಮಸಾಲಿ ಮತಗಳೇ ನಿರ್ಣಾಯಕವಾಗಿದ್ದು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಪ್ರೇಮಾ ಪಾಟೀಲ್ ಅದೇ ಸಮುದಾಯಕ್ಕೆ ಸೇರಿರುವುದರಿಂದ ಹೆಚ್ಚೂ ಕಡಿಮೆ ಪ್ರೇಮಾ ಪಾಲಾಗಲಿವೆ. ಇನ್ನು ಸಾದರ ಒಳಪಂಗಡಕ್ಕೆ ಸೇರಿದ ಬೊಮ್ಮಾಯಿಗೆ ಪಂಚಮಸಾಲಿ ಮತಗಳಲ್ಲಿ ಪಾಲು ಸಿಗುವುದು ಕಷ್ಟ. ಪ್ರೇಮ ಕಳೆದ ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ 60 ಸಾವಿರ ಮತಗಳನ್ನು ಪಡೆದಿದ್ದರು.



ಇವರಿಬ್ಬರ ತಿಕ್ಕಾಟದ ನಡುವೆ ಅಜ್ಜಂಪುರ ಖಾದ್ರಿ ಗೆಲ್ಲುವ ಸಾಧ್ಯತೆ ಹೆಚ್ಚಾಗಿದೆ. ಏಕೆಂದರೆ ಲಿಂಗಾಯತರನ್ನು ಬಿಟ್ಟರೆ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಮುಸ್ಲಿಮರು

ಗದಗ: ಎಚ್ಕೆ ಗೆದ್ದಾಗಿದೆ!







ಇದು ಒಟ್ಟು 1,68,000 ಮತದಾರರನ್ನು ಹೊಂದಿರುವ ಕ್ಷೇತ್ರ. ಕಾಂಗ್ರೆಸ್‌ನಿಂದ ಎಚ್.ಕೆ.ಪಾಟೀಲ್, ಬಿಜೆಪಿಯಿಂದ ಶ್ರೀಶೈಲಪ್ಪ ಬಿದರೂರ ಹಾಗೂ ಜೆಡಿಎಸ್‌ನಿಂದ ಶಮಸುದ್ದೀನ್ ಕಳಸದ ಕಣದಲ್ಲಿದ್ದಾರೆ.

ವಾಸ್ತವದಲ್ಲಿ ಇದು ಎಚ್ಕೆ ಪಾಟೀಲರ ಭದ್ರಕೋಟೆ. ಇವರ ತಂದೆ ಹುಲಕೋಟಿಯ ಹುಲಿ ಎಂದೇ ಪ್ರಸಿದ್ಧವಾಗಿದ್ದ ದಿ.ಕೆ.ಎಚ್.ಪಾಟೀಲರ ಪ್ರಭಾವ ಇಂದಿಗೂ ಕ್ಷೇತ್ರದಲ್ಲಿದ್ದು ಅವರಿಗೆ ಇನ್ನೂ ನಿಷ್ಠರಾಗಿರುವ ಅದೆಷ್ಟೋ ಕುಟುಂಬಗಳಿವೆ. ಎಚ್ಕೆ ಪಾಟೀಲ ಅಣ್ಣ (ದೊಡ್ಡಪ್ಪನ ಮಗ) ಡಿ.ಆರ್.ಪಾಟೀಲ್ ಇದೇ ಕ್ಷೇತ್ರದಿಂದ ಸತತವಾಗಿ ನಾಲ್ಕು ಬಾರಿ ಆಯ್ಕೆಯಾಗಿದ್ದರು. ಎಲೆಕ್ಷನ್‌ಗೆ ನಿಂತಿದ್ದರೆ ಐದನೇ ಬಾರಿಯೂ ಖಂಡಿತವಾಗಿಯೂ ಆಯ್ಕೆಯಾಗುತ್ತಿದ್ದರು. ಆದರೆ, "ಚುನಾವಣೆ ಎದುರಿಸಲಾಗದೆ ಹಿಂಬಾಗಿಲಿನಿಂದ ಬರುವವರು" ಎಂಬ ಟೀಕೆ ತಮ್ಮ ಎಚ್ಕೆ ಮೇಲಿದ್ದುದರಿಂದ ಖುದ್ದಾಗಿ ಅವರೇ ತಾವು ನಿಲ್ಲದೇ ಎಚ್ಕೆಯನ್ನು ನಿಲ್ಲಿಸಿದ್ದಾರೆ.


ಇಲ್ಲಿ 60 ಸಾವಿರದಷ್ಟಿರುವ ಲಿಂಗಾಯತರ ಮತಗಳು ನಿರ್ಣಾಯಕ. ನಂತರದಲ್ಲಿ 40 ಸಾವಿರ ಇರುವ ಮುಸ್ಲಿಮರು, 30 ಸಾವಿರ ಇರುವ ದಲಿತರು, 15 ಸಾವಿರ ಇರುವ ಪಟ್ಟೇಗಾರರು ಬರುತ್ತಾರೆ.

ಶಮಸುದ್ದೀನ್ ಜೆಡಿಎಸ್‌ನಿಂದ ನಿಂತಿದ್ದರೂ ಮುಸ್ಲಿಮರೆಲ್ಲರೂ ಬಿಜೆಪಿಯನ್ನು ಸದೆಬಡಿಯುವುದಕ್ಕಾಗಿ ಸಾಲಿಡ್ಡಾಗಿ ಎಚ್ಕೆ ಬೆನ್ನಿಗಿದ್ದಂತಿದೆ. ಇನ್ನು ಬಿಜೆಪಿಯಿಂದ ನಿಂತಿರುವ ಶ್ರೀಶೈಲಪ್ಪ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಸೇರಿದವರಾಗಿದ್ದು ಆ ಸಮುದಾಯದ ಒಂದಿಷ್ಟು ಮತಗಳು ಗ್ಯಾರಂಟಿ. ಆದರೆ ಎಚ್ಕೆ ಕೂಡ ಲಿಂಗಾಯತರಾಗಿರುವುದರಿಂದ ಇದರಿಂದ ದೊಡ್ಡ ಹಾನಿಯೇನೂ ಸಂಭವಿಸುವುದಿಲ್ಲ.

ಸಾರಾಂಶ ಹೇಳಬೇಕೆಂದರೆ, ಲಿಂಗಾಯತರ ಒಂದು ಭಾಗ, ಮುಸ್ಲಿಮರು, ದಲಿತರು ಹಾಗೂ ಪಟ್ಟೇಗಾರರು ಮೊದಲಿನಿಂದಲೂ ಕಾಂಗ್ರೆಸ್‌ಗೆ ಬೆಂಬಲಿಸುತ್ತಾ ಬಂದಿರುವುದರಿಂದ ಹಾಗೂ ಎಚ್ಕೆ ಕೂಡ ಕ್ಷೇತ್ರದಾದ್ಯಂತ ಪ್ರಭಾವಶಾಲಿ ರಾಜಕಾರಣಿಯಾಗಿರುವುದರಿಂದ ಅವರು ಗೆಲ್ಲುವುದು ಗ್ಯಾರಂಟಿ.

ಗದಗ: ಬಿಜೆಪಿ ಧೂಳೀಪಟ!

ಜಿಲ್ಲೆಯಲ್ಲಿರುವ ಒಟ್ಟು ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಒಂದನ್ನು ಗೆಲ್ಲುವುದೂ ಕಷ್ಟವಾಗಿದೆ. ಜಿಲ್ಲೆಯಾದ್ಯಂತ ಕಾಂಗ್ರೆಸ್ ಪರ ಹವಾ ಜೋರಾಗಿ ಬೀಸುತ್ತಿದ್ದು ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್, ಒಂದು ಕ್ಷೇತ್ರದಲ್ಲಿ ಜೆಡಿಎಸ್ ಗೆಲ್ಲುವ ಸಾಧ್ಯತೆಯಿದೆ. ಉಳಿದ ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಆರಿಸಿಬರುವ ಲಕ್ಷಣವಿದೆ. ಒಟ್ಟಿನಲ್ಲಿ ಬಿಜೆಪಿ ಈ ಜಿಲ್ಲೆಯಲ್ಲಿ ತನ್ನ ಖಾತೆ ತೆರೆಯುವುದು ಕನಸಿನ ಮಾತಾಗಿದೆ.



ರೋಣ: ಬಂಡಿ ಮೇಲಿನ ಕೋಪ ಕಾಂಗ್ರೆಸ್‌ಗೆ ಲಾಭ!

1,76,000 ಮತದಾರರನ್ನು ಹೊಂದಿರುವ ಕ್ಷೇತ್ರ. ಇಲ್ಲಿ ಕುರುಬರು ಮತ್ತು ಲಿಂಗಾಯತರು ತಲಾ ಐವತ್ತು ಸಾವಿರ ಮತಗಳನ್ನು ಹೊಂದಿದ್ದಾರೆ. ನಂತರ ದಲಿತರು ಮತ್ತು ಮುಸ್ಲಿಮರು ಸೇರಿ 50 ಸಾವಿರ ಮತಗಳನ್ನು ಹೊಂದಿದ್ದಾರೆ.

ಕಾಂಗ್ರೆಸ್‌ನಿಂದ ಜಿ.ಎಸ್.ಪಾಟೀಲ್, ಬಿಜೆಪಿಯಿಂದ ಕಳಕಪ್ಪ ಬಂಡಿ ಹಾಗೂ ಜೆಡಿಎಸ್‌ನಿಂದ ರವಿ ದಂಡಿನ್ ಕಣದಲ್ಲಿದ್ದಾರೆ. ಪಕ್ಷೇತರವಾಗಿ ಸ್ಪರ್ಧಿಸಿರುವ ಪಂಚಯ್ಯ ಹಿರೇಮಠ್ ಮತಗಳ ಮೇಲೆ ಯಾರು ಗೆಲ್ಲುತ್ತಾರೆ ಎಂಬುದು ನಿರ್ಧಾರವಾಗುತ್ತದೆ.


ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಸೇರಿರುವ ಕಳಕಪ್ಪ ಬಂಡಿ ಕ್ಷೇತ್ರಕ್ಕೆ ಏನು ಅಭಿವೃದ್ಧಿ ಕೆಲಸ ಮಾಡಿಸಿದನೋ ಬಿಟ್ಟನೋ ಅಂತೂ ತನ್ನ ಮನೆ ಮಠ ಮಾತ್ರ ಚೆನ್ನಾಗಿ ನೋಡಿಕೊಂಡಿದ್ದಾನೆ. ಹೀಗಾಗಿ ಜನರಿಗೆ ಅವನ ಬಗ್ಗೆ ತೀವ್ರ ಕೋಪವಿದೆ. ಈ ಬಾರಿ ಲಿಂಗಾಯತರೂ ಅವನ ವಿರುದ್ಧ ತಿರುಗಿ ಬೀಳುವ ಸಾಧ್ಯತೆ ಕಾಣುತ್ತಿದೆ.

'ಕೂಲಿಗಾಗಿ ಕಾಳು' ಯೋಜನೆಯ ಅಕ್ಕಿಯನ್ನೆಲ್ಲಾ ಖುದ್ದು ಕಳಕಪ್ಪ ಬಂಡಿ ತನ್ನ ಛೇಲಾಗಳಾದ ಅರುಣ ಕುಲಕರ್ಣಿ, ಮಲ್ಲಯ್ಯ ನಂದಿಕೋಲಮಠನಂತಹವರ ಮೂಲಕ ಮೇಯ್ದು ಹಾಕಿರುವುದನ್ನು ಜನ ಮರೆತಿಲ್ಲ. ಶ್ರೀರಾಮ ಸೇನೆಯಂತಹ ರಕ್ತಪಿಪಾಸು ಸಂಘಟನೆಯೊಂದಿಗೆ ಕೈಜೋಡಿಸಿ ರೋಣದಲ್ಲಿ ಕೋಮು ಗಲಭೆ ಹಚ್ಚಿ ರಕ್ತದೋಕುಳಿ ಆಡಲು ಹೊರಟಿದ್ದ ಬಂಡಿಗೆ ಈ ಬಾರಿ ಕ್ಷೇತ್ರದ ಜನ ಗೇಟ್‌ಪಾಸ್ ಕೊಡುವ ಲಕ್ಷಣಗಳಿವೆ.

ಕುರುಬ ಜನಾಂಗಕ್ಕೆ ಸೇರಿದ ರವಿ ದಂಡಿನ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದಾನಾದರೂ ರಾಜಕೀಯಕ್ಕೆ ಹೊಸಬ. ತಮ್ಮ ಕುಲಬಾಂಧವ ಅಂತ ಜನ ಒಂದಿಷ್ಟು ಓಟು ಕೊಡಬಹುದಷ್ಟೇ. ಗೆಲುವು ಕಷ್ಟ.

ಹೀಗಾಗಿ, ಇವರಿಬ್ಬರ ನಡುವೆ ಕಾಂಗ್ರೆಸ್‌ನ ಜಿ.ಎಸ್.ಪಾಟೀಲ್ ಗೆದ್ದು ಬರುವ ಸಾಧ್ಯತೆ ಜಾಸ್ತಿಯಿದೆ.

ಶಿರಹಟ್ಟಿ: ಕಾಂಗ್ರೆಸ್‌ನ ಎಚ್.ಆರ್.ನಾಯಕ್‌ಗೆ ಗೆಲುವು



ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಮೀಸಲು ಕ್ಷೇತ್ರವಾಗಿ ಮೈದಳೆದ ಕ್ಷೇತ್ರವಿದು. ಕ್ಷೇತ್ರದಲ್ಲಿ 1,63,000 ಮತದಾರರಿದ್ದಾರೆ. ಇಲ್ಲಿ ಲಂಬಾಣಿ ಸಮುದಾಯವೇ ನಿರ್ಣಾಯಕ. ನಂತರದ ಸ್ಥಾನ ಮುಸ್ಲಿಮರದು. ಪ್ರಧಾನವಾಗಿ ಲಂಬಾಣಿಗಳ ಮತಗಳ ಮೇಲೆಯೇ ಕಣ್ಣಿಟ್ಟಿರುವ ಕಾಂಗ್ರೆಸ್, ಬಿಜೆಪಿ, ಬಿಎಸ್ಪಿಗಳು ಲಂಬಾಣಿ ಕ್ಯಾಂಡಿಡೇಟ್‌ಗಳನ್ನೇ ಕಣಕ್ಕಿಳಿಸಿವೆ.

...ರುಬರ ನಡುವೆ ಖಾದ್ರಿಗೆ ಒಳ್ಳೆಯ ಅಭಿಪ್ರಾಯವಿದೆ. ಅದೂ ಅಲ್ಲದೇ ಕಾಂಗ್ರೆಸ್ಸಿನ ...ೀ ಮತಗಳು, ದಲಿತ ಮತಗಳನ್ನು ಒಟ್ಟು ಸೇರಿಸಿದರೆ ಖಾದ್ರಿ ಶಾಸಕನಾಗಿ ವಿಧಾನಸೌಧದ ... ಹತ್ತುವುದು ಗ್ಯಾರಂಟಿ ಎಂದು ಹೇಳಬಹುದು.

ಬ್ಯಾಡಗಿ: ಶಿವಣ್ಣನವರ 'ಕೈ'ಮೇಲೆ!



...ಾಸಿನಕಾಯಿಗೆ ದೇಶದಲ್ಲಿಯೇ ಹೆಸರು ಮಾಡಿದ ಕ್ಷೇತ್ರವಿದು. ...ು ಮೀಸಲು ಕ್ಷೇತ್ರವಾಗಿದ್ದು ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಸಾಮಾನ್ಯ ...ಿ ಪರಿವರ್ತನೆಗೊಂಡಿದೆ. ಕಾಂಗ್ರೆಸ್‌ನಿಂದ ಬಸವರಾಜ್ ಶಿವಣ್ಣನವರ್, ...ಯಿಂದ ಸುರೇಶ್‌ಗೌಡ ಪಾಟೀಲ್ ಹಾಗೂ ಜೆಡಿಎಸ್‌ನಿಂದ ವೀರಣ್ಣ ... ಕಣದಲ್ಲಿದ್ದಾರೆ.

...ಲ್ಲಿ ನೇರ ಹಣಾಹಣಿ ಇರುವುದು ಕಾಂಗ್ರೆಸ್ ಮತ್ತು ಬಿಜೆಪಿ ...ನೇ. ಆದರೆ ಬಿಜೆಪಿಯಿಂದ ಕಣಕ್ಕಿಳಿದಿರುವ ಸುರೇಶ್‌ಗೌಡ ಪಾಟೀಲ್ ...ರಣಕ್ಕೆ ಹೊಸಬ. ಕಾಂಗ್ರೆಸ್ಸಿನಿಂದ ಸ್ಪರ್ಧಿಸಿರುವ ಬಸವರಾಜ್ ಶಿವಣ್ಣನವರ್ ರಾಜಕೀಯದಲ್ಲಿ ...ವರು. ಅದೂ ಅಲ್ಲದೇ ಶಿವಣ್ಣನವರ್ ಪರ ಊರಿನವರಾದರೂ ಕುರುಬ ಸಮುದಾಯಕ್ಕೆ ...ರಾಗಿರುವುದರಿಂದ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಆ ಸಮುದಾಯದ ಮತಗಳು ...ಕೈ ಹಿಡಿಯಲಿವೆ. ಜೊತೆಗೆ ಗಣನೀಯ ಪ್ರಮಾಣದಲ್ಲಿರುವ ಮುಸ್ಲಿಮ್ ಮತಗಳು ಸಿಗುವುದರಿಂದ ಅವರ ಗೆಲುವಿನ ದಾರಿ ಸುಗಮವಾಗಲಿದೆ.

ಹಿರೇಕೇರೂರು:

ಪಾಟೀಲ್‌ಗೆ ಬಣಕಾರ್ ಅಡ್ಡಗಾಲು!



ಇದು ಕಳೆದ ಬಾರಿ ನಟಭಯಂಕರ ಬಿ.ಸಿ.ಪಾಟೀಲ್‌ನನ್ನು ಗೆಲ್ಲಿಸಿ ಕಳಿಸಿದ ಕ್ಷೇತ್ರ. ಬಿಜೆಪಿಯಿಂದ ಎ.ಕೆ.ಪಾಟೀಲ್, ಕಾಂಗ್ರೆಸ್‌ನಿಂದ ಬಿ.ಸಿ.ಪಾಟೀಲ್, ಜೆಡಿಎಸ್‌ನಿಂದ ಬನ್ನಿಕೋಡ ಹಾಗೂ ಪಕ್ಷೇತರನಾಗಿ ಯು.ಬಿ.ಬಣಕಾರ್ ಕಣದಲ್ಲಿದ್ದಾರೆ.

ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಪಕ್ಷಗಳು ಟಿಕೆಟ್ ನೀಡುವಲ್ಲಿ ಒಂದಿಷ್ಟು ಅವಾಂತರಗಳನ್ನು ಸೃಷ್ಟಿಸಿಕೊಂಡಿವೆ. ಕಾಂಗ್ರೆಸ್‌ನಿಂದ ಬನ್ನಿಕೋಡ್‌ಗೆ ಟಿಕೆಟ್ ಗ್ಯಾರಂಟಿ ಎಂದು ನಂಬಲಾಗಿತ್ತಾದರೂ ...ಳಿಗೆಯಲ್ಲಿ ಅದು ಎಂ.ಪಿ.ಪ್ರಕಾಶ್ ಜೊತೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ...ಯಂಕರ ಬಿ.ಸಿ.ಪಾಟೀಲನ ಪಾಲಾಯಿತು. ಇದರಿಂದ ಮುನಿಸಿಕೊಂಡ ಬನ್ನಿಕೋಡ್ ಜೆಡಿಎಸ್ ...ಟ್ಟು ಕಣಕ್ಕಿಳಿದಿದ್ದಾನೆ. ಇನ್ನು ಯು.ಬಿ.ಬಣಕಾರ್‌ಗೆ ಬಿಜೆಪಿ ಟಿಕೆಟ್ ಗ್ಯಾರಂಟಿ ...ಕೊಳ್ಳಲಾಗಿತ್ತಾದರೂ ಕಡೆ ಗಳಿಗೆಯಲ್ಲಿ ಅದು ಎ.ಕೆ.ಪಾಟೀಲ್‌ನ ಮಡಿಲಿಗೆ ಬಿತ್ತು. ಇದರಿಂದ ...ಕೊಂಡ ಯು.ಬಿ.ಬಣಕಾರ್ ಪಕ್ಷೇತರನಾಗಿ ಕಣಕಿಳಿದಿದ್ದಾನೆ.

...ಂಗ್ರೆಸ್‌ನ ಮತಗಳನ್ನು ಬನ್ನಿಕೋಡ್ ಹಾಗೂ ಬಿಜೆಪಿಯ ಮತಗಳನ್ನು ಬಣಕಾರ್ ...ಯ ಪ್ರಮಾಣದಲ್ಲಿ ಕೀಳುವುದಂತೂ ಗ್ಯಾರಂಟಿ. ಆರಂಭದಲ್ಲಿ ಬಿ.ಸಿ.ಪಾಟೀಲನೇ ಮೇಲುಗೈ ...ವ ಸ್ಥಿತಿಯಿತ್ತು. ಆದರೆ ಕ್ರಮೇಣ ಅದು ಬದಲಾಗಿ ಆತ ಮೂರನೇ ಸ್ಥಾನಕ್ಕಿಳಿದಿದ್ದಾನೆ. ...ಕ್ಕೆ ನೇರ ಹಣಾಹಣಿಯಿರುವುದು ಬಿಜೆಪಿಯ ಎ.ಕೆ.ಪಾಟೀಲ್ ಮತ್ತು ಪಕ್ಷೇತರ ಅಭ್ಯರ್ಥಿ ... ಬಣಕಾರ್ ನಡುವೆ. ಅದರಲ್ಲಿ ಬಣಕಾರ್‌ದ್ದೇ ಒಂದು ಕೈ ಮೇಲು ಎಂದು ಹೇಳಿದರೂ ...ತೆ.

- ಕಡೇನಂದಿಹಳ್ಳಿ ಕುಮಾರ್

...ಂಗ್ರೆಸ್‌ನಿಂದ ಎಚ್.ಆರ್.ನಾಯಕ್, ಬಿಜೆಪಿಯಿಂದ ರಾಮಣ್ಣ ಲಮಾಣಿ, ಜೆಡಿಎಸ್‌ನಿಂದ ...ಂತಪ್ಪ ಆಲ್ಕೋಡ್ ಹಾಗೂ ಬಿಎಸ್ಪಿಯಿಂದ ಅಂಬನಿಕಾ ನಾಯ್ಕ ಕಣದಲ್ಲಿದ್ದಾರೆ.

...ಂಗ್ರೆಸ್‌ನ ಎಚ್.ಆರ್.ನಾಯಕ್‌ಗೆ ಜಾತಿ ಬಲವಿದೆಯಾದರೂ ಹಣದ ವಿಚಾರದಲ್ಲಿ ...ಲರು. ಹೀಗಾಗಿ ತಮ್ಮ ಜನಾಂಗ ಮಾತ್ರವಲ್ಲದೇ ದಲಿತ ಮತ್ತು ಮುಸ್ಲಿಮ್ ...ಾಯದವರು ಹಿಂದಿನಿಂದಲೂ ಕಾಂಗ್ರೆಸ್ ಬೆನ್ನಿಗೆ ನಿಂತಿರುವುದರಿಂದ ಆ ಸಮುದಾಯಗಳ ...ೇ ಇವರನ್ನು ಕೈ ಹಿಡಿಯಲಿವೆ.

...ಜೆಪಿಯ ರಾಮಣ್ಣ ಲಮಾಣಿ ತನ್ನ ಜಾತಿಯಲ್ಲಿಯೇ ಬೆಂಬಲವಿಲ್ಲ. ಇನ್ನು ಜೆಡಿಎಸ್‌ನಿಂದ ...ರುವ ಆಲ್ಕೋಡ್‌ಗೆ ಜಾತಿಯ ಬಲವಂತೂ ಇಲ್ಲ. ಹಣ ಬಲದಿಂದಲೇ ಚುನಾವಣೆ ...ಸಬೇಕಷ್ಟೆ. ಇವರು ಇಲ್ಲಿಗೆ ಸ್ಥಳೀಯರಲ್ಲ. ಬೇರೆ ಊರಿನಿಂದ ವಲಸೆ ಬಂದಿರುವ ...ನ್ನ ಕ್ಷೇತ್ರದ ಜನ ಸ್ವೀಕರಿಸುವುದು ಕಷ್ಟ.

...ಗಿರುವ ಪರಿಸ್ಥಿತಿಯನ್ನು ಇಟ್ಟುಕೊಂಡು ಹೇಳುವುದಾದರೆ, ಕಾಂಗ್ರೆಸ್‌ನ ...ಆರ್.ನಾಯಕ್ ಗೆಲ್ಲುವ ಸೂಚನೆಗಳೇ ಕಾಣುತ್ತಿವೆ.

...ಗುಂದ



...ತ ಬಂಡಾಯಕ್ಕೆ ...ವಾಸಿಯಾದ ಈ ... ಈಗ ಪಕ್ಷ ...ಯಕ್ಕೆ ಹೆಸರು ...ುತ್ತಿದೆ. ಈ ...ುವೇ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಹಣೆಬರಹ ಬರೆಯಲಿದೆ. ಕ್ಷೇತ್ರದಲ್ಲಿ 1,49,000 ...ದಾರರಿದ್ದಾರೆ.

...ಲ್ಲಿ ಲಿಂಗಾಯತರ ಒಳಪಂಗಡವಾದ ಪಂಚಮಸಾಲಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ...ದ ಸ್ಥಾನ ಮುಸ್ಲಿಮ್ ಮತ್ತು ಕುರುಬರಿಗೆ ಸಲ್ಲುತ್ತದೆ.

...ಂಗ್ರೆಸ್‌ನಿಂದ ಎಸ್.ಎಸ್. ಪಾಟೀಲ್, ಬಿಜೆಪಿಯಿಂದ ಚಂದ್ರಗೌಡ ಪಾಟೀಲ್ ಹಾಗೂ ...ನಿಂದ ಮಹಾಬಲೇಶ್ವರಗೌಡ ಪಾಟೀಲ್ ಸ್ಪರ್ಧೆಯಲ್ಲಿದ್ದಾರೆ. ಜೊತೆಗೆ ಕಾಂಗ್ರೆಸ್‌ನ ...ಆಕಾಂಕ್ಷಿ ಸ್ಥಳೀಯ ಬಿ.ಆರ್. ಯಾವಗಲ್ ಬಂಡುಕೋರ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ... ಪ್ರಮೋದ್ ಮುತಾಲಿಕನ ಸಪೋರ್ಟ್ ಪಡೆದಿರುವ ಶ್ರೀಮತಿ ಹಸಬ ರಾಷ್ಟ್ರೀಯ ...ಗೆ ತಲೆನೋವಾಗಿ ಪರಿಣಮಿಸಿದ್ದಾರೆ.

...ಾ ಮುಂಡರಗಿಯಿಂದ ಸ್ಪರ್ಧಿಸುತ್ತಿದ್ದ ಎಸ್.ಎಸ್. ಪಾಟೀಲ್ ಕ್ಷೇತ್ರ ಪುನರ್ವಿಂಗಡಣೆಯಲ್ಲಿ ...ತ್ರದ 22 ಹಳ್ಳಿಗಳು ನರಗುಂದಕ್ಕೆ ಸೇರ್ಪಡೆಗೊಂಡಿರುವುದರಿಂದ ಇಲ್ಲಿ ಬಂದು ...ುತ್ತಿದ್ದಾರೆ.

...ಕ್ಷೇತರನಾಗಿ ಸ್ಪರ್ಧಿಸಿರುವ ಬಿ.ಆರ್. ಯಾವಗಲ್ ರೆಡ್ಡಿ ಸಮುದಾಯಕ್ಕೆ ಸೇರಿದ್ದು ... ಆ ಸಮುದಾಯದ ಮತಗಳ ಮೇಲೆ ಸಂಪೂರ್ಣ ಹಿಡಿತವಿದೆ. ಜೊತೆಗೆ ...ನಲ್ಲಿ ಪಳಗಿದ ಕುಳ ಆಗಿದ್ದರಿಂದ ಕಾಂಗ್ರೆಸ್‌ನ ಓಟಿನ ಬುಟ್ಟಿಗೂ ಕೈ ಹಾಕಲಿದ್ದಾರೆ. ... ಯಾವಗಲ್ ಗೆಲ್ಲುವ ಸಾಧ್ಯತೆಗಳೇ ಜಾಸ್ತಿಯಾಗಿವೆ.

ದೇವಾನಂದ ಜಗಾಪೂರ್

ಬಾಗಲಕೋಟೆ: ಬಿಜೆಪಿಯ ಕೋಟೆಯನ್ನು ಬೇಧಿಸಲಿರುವ ಕಾಂಗ್ರೆಸ್!

ಹಿಂದಿನ ಚುನಾವಣೆಯಲ್ಲಿ ಜಿಲ್ಲೆಯಲ್ಲಿರುವ ಅಷ್ಟೂ ಸ್ಥಾನಗಳನ್ನು ಬಿಜೆಪಿ ಗಳಿಸಿ ತನ್ನ ಭದ್ರ ಕೋಟೆಯನ್ನಾಗಿ ಮಾಡಿಕೊಂಡಿತ್ತು. ಆದರೆ ಈ ಬಾರಿ ಈ ಕೋಟೆಯನ್ನು ಒಡೆಯುವಲ್ಲಿ ಕಾಂಗ್ರೆಸ್ ಸಫಲವಾಗಲಿದೆ. ಒಟ್ಟು ಏಳು ಸ್ಥಾನಗಳಲ್ಲಿ ಕನಿಷ್ಟ ಮೂರನ್ನು ಕಾಂಗ್ರೆಸ್ ಈ ಬಾರಿ ಕಿತ್ತುಕೊಳ್ಳಲಿದೆ. ಇನ್ನು ಬಿಎಸ್ಪಿಕೂಡ ಹಲವೆಡೆ ಕಾಂಗ್ರೆಸ್‌ಗೆ ಎಷ್ಟು ನಷ್ಟ ಮಾಡಲಿದೆಯೋ ಅಷ್ಟೇ ನಷ್ಟವನ್ನು ಅದು ಬಿಜೆಪಿಗೂ ಮಾಡಲಿದೆ.

ಬಾದಾಮಿ: ವಿಧಾನಸೌಧಕ್ಕೆ ಆನೆ

ಕಾಂಗ್ರೆಸ್‌ನಿಂದ ಬಿ.ಬಿ.ಚಿಮ್ಮನಕಟ್ಟಿ, ಬಿಜೆಪಿಯಿಂದ ಎಂ.ಕೆ.ಪಟ್ಟಣಶೆಟ್ಟಿ, ಜೆಡಿಎಸ್‌ನಿಂದ ಬನ್ನೂರ ಹಾಗೂ ಬಿಎಸ್‌ಪಿಯಿಂದ ಅಶೋಕ ಕಟ್ಟಿಮನಿ ಕಣದಲ್ಲಿದ್ದಾರೆ.

ಹಿಂದಿನ ಬಾರಿ ಶಾಸಕನಾಗಿದ್ದ ಪಟ್ಟಣಶೆಟ್ಟಿ ಕ್ಷೇತ್ರಕ್ಕೆ ಒಂದಿಷ್ಟೂ ಅಭಿವೃದ್ಧಿ ಕಾರ್ಯ ಮಾಡಿಸಲಿಲ್ಲ. ಬದಲಾಗಿ ತನ್ನದೇ ಸಂಸ್ಥೆಯಾದ ಬಸವೇಶ್ವರ ವಿದ್ಯಾವರ್ಧಕ ಸಂಘಕ್ಕೆ ಸರ್ಕಾರಿ ಫಂಡಿನಿಂದ ಕಂಪ್ಯೂಟರ್ ತಂದಿದ್ದು ಹಾಗೂ ದ್ವಿತೀಯ ಪಿಯುಸಿ ಸೈನ್ಸ್ ವಿಭಾಗ ತೆರೆಯಲು ಪರವಾನಿಗೆ ಪಡೆದದ್ದು - ಇವೇ ಆತ ಮಾಡಿದ ಘನಂಧಾರಿ ಕೆಲಸಗಳು. ಈ ಬಾರಿ ತನ್ನದೇ ಜಾತಿಯ ವಿರೋಧ ಬೇರೆ ಕಟ್ಟಿಕೊಂಡಿರುವ ಪಟ್ಟಣಶೆಟ್ಟಿ ಗೆಲ್ಲಲು ಹರಸಾಹಸ ಮಾಡಬೇಕಿದೆ.

ಇನ್ನು ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಬಿ.ಬಿ.ಚಿಮ್ಮನಕಟ್ಟಿಯೇನೂ ಕಮ್ಮಿಯಿಲ್ಲ. ಎಸ್.ಎಂ.ಕೃಷ್ಣ ಆಡಳಿತದಲ್ಲಿ ಮಂತ್ರಿಯಾಗಿದ್ದುಕೊಂಡು ಈತ ಮಾಡಿದ ಕೆಲಸಗಳನ್ನು ಜನ ಕ್ಷಮಿಸುವಂತಿಲ್ಲ.

ಜೆಡಿಎಸ್‌ನಿಂದ ನಿಂತಿರುವ ಬನ್ನೂರ್ ಲಿಂಗಾಯತ ಸಮುದಾಯಕ್ಕೆ ಸೇರಿದವನು. ಇವನು ಲಿಂಗಾಯತ ಮತಗಳನ್ನು ಕಿತ್ತಷ್ಟು ಬಿಜೆಪಿಯ ಎಂ.ಕೆ.ಪಟ್ಟಣಶೆಟ್ಟಿಗೆ ನಷ್ಟವಾಗೋದು ಗ್ಯಾರಂಟಿ.

ಕಾಂಗ್ರೆಸ್ಸಿನ ದೌರ್ಬಲ್ಯ, ಬಿಜೆಪಿ-ಜೆಡಿಎಸ್‌ಗಳ ನಡುವಿನ ಮತಗಳ ಒಡಕು ಎಲ್ಲಾ ಲೆಕ್ಕ ಹಾಕಿದರೆ ಬಿಎಸ್ಪಿಯ ಆನೆಯೇ ವಿಧಾನಸೌಧ ಪ್ರವೇಶಿಸಿದರೂ ಆಶ್ಚರ್ಯವಿಲ್ಲ.

ಹುನಗುಂದ: ಗ್ರಾನೈಟ್ ಕಲ್ಲೇ ಇಲ್ಲಿ ನಿರ್ಣಾಯಕ!

ಕಾಂಗ್ರೆಸ್‌ನಿಂದ ವಿಜಯಾನಂದ ಕಾಶಪ್ಪನವರ್, ಬಿಜೆಪಿಯಿಂದ ದೊಡ್ಡನಗೌಡ ಪಾಟೀಲ್ ಹಾಗೂ ಜೆಡಿಎಸ್‌ನಿಂದ ಬಿ.ವಿ.ಪಾಟೀಲ್ ಕಣದಲ್ಲಿದ್ದಾರೆ.

ದೊಡ್ಡನಗೌಡ ಪಾಟೀಲನ ಬೆನ್ನಿಗಿರುವುದು ಗ್ರಾನೈಟ್ ಉದ್ಯಮಿಗಳ ಹಿಂಡು. ಈ ಧಣಿಗಳು ಸಿಕ್ಕಾಪಟ್ಟೆ ಸಾರ್ವಜನಿಕ ಸಂಪತ್ತನ್ನು ತಿಂದು ಕೊಬ್ಬುವುದಕ್ಕೆ ದೊಡ್ಡನಗೌಡ ಪಾಟೀಲ್ ಬೆಂಗಾವಲಾಗಿ ನಿಂತಿದ್ದರಿಂದ ಚುನಾವಣೆಯಲ್ಲಿ ಅವನ ಋಣ ತೀರಿಸುವ ಕರ್ತವ್ಯವನ್ನು ಅವರು ಮಾಡುತ್ತಿದ್ದಾರೆ.

ಕಾಂಗ್ರೆಸ್ಸಿನ ವಿಜಯಾನಂದ ಕಾಶಪ್ಪನವರ್ ತಾನು ಪಂಚಮಸಾಲಿಯಾಗಿರುವುದರಿಂದ ಆ ಸಮುದಾಯದ ಎಲ್ಲ ಓಟುಗಳೂ ತನಗೇ ಬರುತ್ತವೆಂದು ನಂಬಿಕೊಂಡಿದ್ದಾರೆ. ಚುನಾವಣೆಯಲ್ಲಿ ಖರ್ಚು ಮಾಡುವುದಕ್ಕೆ ಕೈಯಲ್ಲಿ ಕಾಸಿಲ್ಲದ ಮನುಷ್ಯ. ಹೀಗಾಗಿ ಗ್ರಾನೈಟ್ ಚಪ್ಪಡಿ ಕಲ್ಲುಗಳ ಕೆಳಗೆ ಇವರ "ಕೈ" ಸಿಕ್ಕಿಹಾಕಿಕೊಳ್ಳುವ ಲಕ್ಷಣಗಳೂ ಕಾಣುತ್ತಿವೆ.

ಮುಧೋಳ: ಈ ಬಾರಿ ತಿಮ್ಮಾಪೂರ್!

ಇದು ಮೀಸಲು ಕ್ಷೇತ್ರ. ಕಾಂಗ್ರೆಸ್‌ನಿಂದ ಆರ್.ಬಿ.ತಿಮ್ಮಾಪೂರ, ಬಿಜೆಪಿಯಿಂದ ಗೋವಿಂದ ಕಾರಜೋಳ, ಹಾಗೂ ಜೆಡಿಎಸ್‌ನಿಂದ ಶಂಕರ ನಾಯಕ ಕಣದಲ್ಲಿದ್ದಾರೆ.

'ಕೋ-ಜಾ' ಸರ್ಕಾರದಲ್ಲಿ ಮಂತ್ರಿಯಾಗಿದ್ದ ಗೋವಿಂದ ಕಾರಜೋಳನ ಚಡ್ಡಿ ಈ ಬಾರಿ ಹರಿದುಹೋಗುವ ಛಾನ್ಸು ಜಾಸ್ತಿಯಿದೆ. ರೇಶನ್ ಕಾರ್ಡ್ ಹಗರಣ ಬೇರೆ ಇವನ ತಲೆಗಂಟಿದೆ. ಮುಧೋಳಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇನೆಂದು ವಾಗ್ದಾನ ಮಾಡಿದ್ದ. ಆದರೆ ಕುಡಿಯುವ ನೀರಿನ ಯೋಜನೆಗಾಗಿ ಬಂದ ಹದಿಮೂರು ಕೋಟಿ ಎಲ್ಲಿ ಹರಿದು ಹೋಯಿತೋ ಗೊತ್ತಿಲ್ಲ. ನೀರಂತೂ ಬಂದಿಲ್ಲ. ಇಲ್ಲಿ ನೀರು ಸಿಗದಿದ್ದರೂ ಪರವಾಗಿಲ್ಲ, ಸಾರಾಯಿ ಮಾತ್ರ ಸುಲಭವಾಗಿ ಬೇಕಾದಾಗ ಸಿಗುವಂತೆ ವ್ಯವಸ್ಥೆ ಮಾಡಿಟ್ಟಿದ್ದಾನೆ. ರೈತರಿಗೆ ಘಟಪ್ರಭಾ ನೀರಿನಿಂದ ನೀರಾವರಿ ಸೌಲಭ್ಯ ಒದಗಿಸುತ್ತೇನೆಂದಿದ್ದ ಅದೂ ಆಶ್ವಾಸನೆಯಾಗಿಯೇ ಉಳಿದಿದೆ. ಹೀಗಾಗಿ ಕ್ಷೇತ್ರದಾದ್ಯಂತ ಕಾರಜೋಳನ ವಿರೋಧದ ಅಲೆಯಿದೆ.

ಕಾಂಗ್ರೆಸ್ಸಿನಿಂದ ಸ್ಪರ್ಧಿಸಿರುವ ತಿಮ್ಮಾಪೂರ್ ಕಳೆದ ಬಾರಿಯ ಸೋಲಿನಿಂದ ಪಾಠ ಕಲಿತಂತಿದೆ. ಮಾದಿಗ ಸಮುದಾಯದವರೂ ತಿಮ್ಮಾಪೂರ್‌ನ ಹಿಂದಿರುವುದು ಅವರ ದಾರಿಯನ್ನು ಸುಗಮಗೊಳಿಸಿದೆ.

ಬೀಳಗಿ: ಕಾಂಗ್ರೆಸ್‌ನ ಒಳಜಗಳ ನಿರಾಣಿಗೆ ಲಾಭ!

ಕಾಂಗ್ರೆಸ್‌ನಿಂದ ಎ.ಕೆ.ಸರನಾಯಕ, ಬಿಜೆಪಿಯಿಂದ ಮುರುಗೇಶ್ ನಿರಾಣಿ, ಹಾಗೂ ಜೆಡಿಎಸ್‌ನಿಂದ ಬಸವಪ್ರಭು ಸರನಾಡಗೌಡ ಸ್ಪರ್ಧೆಯಲ್ಲಿದ್ದಾರೆ. ಹಾಗೆ ನೋಡಿದರೆ ಇಲ್ಲಿ ಮೂವರು ಸಮಬಲದ ಅಭ್ಯರ್ಥಿಗಳ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡಲಿದೆ.

ಜೆಡಿಎಸ್‌ನ ಸರನಾಡಗೌಡ ಜಾತಿಯಲ್ಲಿ ಗಾಣಿಗ ಸಮುದಾಯದವನು. ರಾಜಕೀಯಕ್ಕೆ ಪಕ್ಕಾ ಹೊಸಬ. ಆದರೆ ಆಗರ್ಭ ಶ್ರೀಮಂತ ಮನೆತನದಿಂದ ಬಂದಿರುವ ಈತ ದುಡ್ಡಿನ ಬಲ ಮತ್ತು ತನ್ನ ತಂದೆಯ ವರ್ಚಸ್ಸಿನಿಂದ ಚುನಾವಣೆಯಲ್ಲಿ ಹೋರಾಡುತ್ತಿದ್ದಾನೆ. ಆದರೆ ಇವನಿಗಿರುವ ಮೈನಸ್ ಪಾಯಿಂಟ್ ಎಂದರೆ ಜೆಡಿಎಸ್‌ಗೆ ಇಲ್ಲಿ ಪಾರಂಪರಿಕ ನೆಲೆಯಿಲ್ಲದಿರುವುದು.

ಹಾಗೆ ನೋಡಿದರೆ ಕಾಂಗ್ರೆಸ್‌ನ ಅಜಯ್ ಸರನಾಯಕ ಸಭ್ಯ ರಾಜಕಾರಣಿ. ಇವರಿಗೆ ತೊಡರಾಗುವುದು ಇವನದೇ ರೆಡ್ಡಿ ಜನಾಂಗದ ಮಾಜಿ ಶಾಸಕ ಜೆ.ಟಿ.ಪಾಟೀಲ್. ತನಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲವೆಂದು ಮುನಿಸಿಕೊಂಡಿರುವ ಈತ ಒಳಗೊಳಗೇ ಸರನಾಯಕ ವಿರುದ್ಧ ಕತ್ತಿ ಮಸೆಯುತ್ತಿದ್ದಾನೆ.

ಹಾಗಾಗಿ, ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಮುಳುವಾಗಿರುವುದರ ಲಾಭವನ್ನು ಮುರುಗೇಶ್ ನಿರಾಣಿ ಪಡೆಯಲಿದ್ದಾನೆ. ಅದೂ ಅಲ್ಲದೇ ಕಳೆದ ಬಾರಿ ಈತ ಶಾಸಕನಾಗಿ ಗೆಬರಿದ ಹಡಬೆ ದುಡ್ಡಿನ ಬಲವಿದೆ. ಜನ ದುಡ್ಡಿಗೆ ತಮ್ಮನ್ನು ಮಾರಿಕೊಳ್ಳದಿದ್ದರೆ ಮಾತ್ರ ಕಾಂಗ್ರೆಸ್ ಕೈ ಎತ್ತಬಹುದು.

ತೇರದಾಳ: ದುರ್ಗಮ ಹಾದಿಯಲ್ಲಿ ಸಿದ್ದು ಸವದಿ!

ಇದು ಕ್ಷೇತ್ರ ಪುನರ್ವಿಂಗಡಣೆಯಿಂದ ಆವಿರ್ಭವಿಸಿದ ಕ್ಷೇತ್ರ. ಕಾಂಗ್ರೆಸ್‌ನಿಂದ ಉಮಾಶ್ರೀ, ಬಿಜೆಪಿಯಿಂದ ಸಿದ್ದು ಸವದಿ ಹಾಗೂ ಜೆಡಿಎಸ್‌ನಿಂದ ಕಲ್ಲಪ್ಪ ಗಿರಿಸಾಗರ ಕಣದಲ್ಲಿದ್ದಾರೆ.

ಉಮಾಶ್ರೀ ತನ್ನ ನೇಕಾರರ ಮತ ನಂಬಿ ಬೆಂಗಳೂರಿನಿಂದ ಮಾಯವಾಗಿ ಇಲ್ಲಿ ಪ್ರತ್ಯಕ್ಷವಾಗಿದ್ದಾರೆ. ಸ್ಥಳೀಕರಲ್ಲಿ ಈಕೆಯ ಬಗ್ಗೆ ತೀವ್ರವಾದ ವಿರೋಧ ಇದ್ದಂತಿದೆ.

ಬಿಜೆಪಿಯಿಂದ ಸ್ಪರ್ಧಿಸಿರುವ ಸಿದ್ದು ಸವದಿಯ ಬಗ್ಗೆಯೂ ಜನರಲ್ಲಿ ಅಸಮಧಾನ ಮಡುಗಟ್ಟಿದೆ. ತನ್ನ ತೀಟೆ ತೀರಿಸಿಕೊಳ್ಳಲು ಕ್ಷೇತ್ರವನ್ನೇ ಹರಾಜು ಹಾಕಬಲ್ಲ ಆಸಾಮಿ ಎಂದು ಈತನ ಬಗ್ಗೆ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇಲ್ಲಿ ವಾಸ್ತವದಲ್ಲಿ ನೇಕಾರರ ಧುರೀಣ ಮಾಜಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಮಹಾದೇವಪ್ಪ ಹಟ್ಟಿ ಬಿಜೆಪಿಯ ಅಭ್ಯರ್ಥಿಯಾಗಬೇಕಿತ್ತು. ಆದರೆ, ಅದು ಕೈ ತಪ್ಪಿ ಸಿದ್ದು ಸವದಿಯ ಪಾಲಾಗಿದೆ. ಮಹಾದೇವಪ್ಪನೇನಾದರೂ ತನ್ನ ನೇಕಾರರ ಸಮುದಾಯವನ್ನು ಲೆಕ್ಕಕ್ಕಿಟ್ಟುಕೊಂಡು ಸ್ವಜಾತಿಯ ಉಮಾಶ್ರೀಗೆ ಬೆಂಬಲಿಸಿದ್ದೇ ಆದರೆ ಸವದಿಯ ಬೆನ್ನುಮೂಳೆ ಮುರಿಯುವುದು ಗ್ಯಾರಂಟಿ.

ಜೆಡಿಎಸ್‌ನ ಗಿರಿಸಾಗರ ಠೇವಣಿ ಉಳಿಸಿಕೊಳ್ಳಲು ಹೆಣಗಾಡಬೇಕಷ್ಟೆ.

ಬಾಗಲಕೋಟೆ: ಚರಂತಿಮಠನಿಗೆ ಭಯ!

ಇದು ಚಡ್ಡಿಗಳ ಕಾರಸ್ಥಾನ. ಕಾಂಗ್ರೆಸ್‌ನಿಂದ ಎಚ್.ವೈ.ಮೇಟಿ, ಬಿಜೆಪಿಯಿಂದ ವೀರಣ್ಣ ಚರಂತಿಮಠ ಹಾಗೂ ಜೆಡಿಎಸ್‌ನಿಂದ ಪಿ.ಎಚ್.ಪೂಜಾರ್ ಕಣದಲ್ಲಿದ್ದಾರೆ.

ಕಳೆದ ಬಾರಿ ಶಾಸಕನಾಗಿದ್ದ ಚರಂತಿಮಠ ಹಾಡುಹಗಲೇ ಬಾಗಲಕೋಟೆಯನ್ನು ಕೊಳ್ಳೆಹೊಡೆದವನು. ಉದರ ನಿಮಿತ್ತ ಬಾಗಲಕೋಟೆಗೆ ಬಂದಿದ್ದ ಈತ ಅಡ್ಡ ದಾರಿಗಳ ಮೂಲಕ ವರ್ಚಸ್ಸು ಹೆಚ್ಚಿಸಿಕೊಂಡು ಶಾಸಕನಾಗಿ ಅರ್ಧ ಬಾಗಲಕೋಟೆಯನ್ನು ಮುಕ್ಕಿ ಮುಗಿಸಿದ್ದಾನೆ. ಬಸವೇಶ್ವರ ವಿದ್ಯಾವರ್ಧಕ ಸಂಘಕ್ಕೆ ಹೆಗಲೇರಿದ ಈ ಶನಿ ಆ ಸಂಘಕ್ಕಿರುವ ಆಸ್ತಿಯ ದುಪ್ಪಟ್ಟು ಸಾಲ ಮಾಡಿಟ್ಟಿದ್ದಾನೆ.

ಚರಂತಿಮಠ ಅವಲಂಭಿಸಿರುವುದು ಪ್ರಧಾನವಾಗಿ ಲಿಂಗಾಯತ ಮತಗಳನ್ನು. ಇದಕ್ಕೆ ಅಡ್ಡಗಾಲು ಹಾಕುತ್ತಿರುವುದು ಲಿಂಗಾಯತರ ಪ್ರಮುಖ ನಾಯಕ ಪ್ರಕಾಶ್ ತಪಶೆಟ್ಟಿ. ಹತ್ತಾರು ಬ್ರಾಂಚ್‌ಗಳನ್ನು ಹೊಂದಿರುವ ಬಸವೇಶ್ವರ ಬ್ಯಾಂಕ್ ಈತನ ಒಡೆತನದಲ್ಲಿದೆ. ಕಳೆದ ಬಾರಿ ಚರಂತಿಮಠ ಗೆಲ್ಲಲು ಇವನ ಸಹಾಯವೇ ಪ್ರಮುಖವಾಗಿತ್ತು. ಈತ ಈ ಬಾರಿ ತಿರುಗಿಬಿದ್ದಿರುವುದರಿಂದ ಚರಂತಿಮಠನಿಗೆ ಹಾನಿಯಾಗುವುದಂತೂ ಸತ್ಯ.

ಕಾಂಗ್ರೆಸ್‌ನ ಮೇಟಿ ಕುರುಬರ ಮತಗಳ ಮೇಲೆ ಕಣ್ಣಿಟ್ಟು ಗುಳೇದಗುಡ್ಡದಿಂದ ಇಲ್ಲಿಗೆ ಬಂದಿದ್ದಾರೆ. ಇಬ್ಬರು ಲಿಂಗಾಯತರ ಜಗಳದ ನಡುವೆ ತಾನೇ ಗೆಲ್ಲೋದು ಅಂತ ಲೆಕ್ಕಾಚಾರ ಮೇಟಿಯದ್ದು.

ಜಮಖಂಡಿ: ಸಿದ್ದು ನ್ಯಾಮಗೌಡ ಗ್ಯಾರಂಟಿ!

ಈ ಕ್ಷೇತ್ರಕ್ಕೆ ಶಾಸಕನಾಗಿದ್ದ ಸಿದ್ದು ಸವದಿ ಈ ಚುನಾವಣೆಯಲ್ಲಿ ಜನರೇ ತನ್ನನ್ನು ಓಡಿಸುತ್ತಾರೆಂಬುದನ್ನು ಅರಿತು ಕ್ಷೇತ್ರಬಿಟ್ಟು ಓಡಿಹೋಗಿದ್ದಾನೆ. ಓಡಿ ಹೋಗುವ ಮೊದಲು ತನ್ನ ಪಾಲಿನ ಟಿಕೆಟನ್ನು ಶ್ರೀಕಂಠ ಕುಲಕರ್ಣಿ ಎಂಬ ಬ್ರಾಹ್ಮಣನಿಗೆ ಮಾರಿಕೊಂಡೇ ಜಾಗ ಖಾಲಿ ಮಾಡಿದ್ದಾನೆ.

ಶ್ರೀಕಾಂತ ಕುಲಕರ್ಣಿಗೆ ಯಾವುದೇ ಜಾತಿಯ ಬೆಂಬಲವಿಲ್ಲ. ಸಂಘಪರಿವಾರದಲ್ಲಿ ಲಾಠಿ ಚೆನ್ನಾಗಿ ತಿರುಗಿಸುತ್ತಿದ್ದನಾದ್ದರಿಂದ ಒಂದಿಷ್ಟು ಚಡ್ಡಿ ಪರಿವಾರದ ಓಟುಗಳು ಬೀಳಬಹುದು.

ಇವನ ವಿರುದ್ಧ ಕಾಂಗ್ರೆಸ್ಸಿನಿಂದ ಸಿದ್ದು ನ್ಯಾಮಗೌಡ ನಿಂತಿದ್ದಾರೆ. ಈ ಹಿಂದೆ ರಾಮಕೃಷ್ಣ ಹೆಗಡೆಯನ್ನೇ ಮಣ್ಣು ಮುಕ್ಕಿಸಿದ್ದರು ಸಿದ್ದು ನ್ಯಾಮಗೌಡ. ಗಾಣಿಗರ ನಾಯಕನೂ ಆಗಿರುವ ಸಿದ್ದು ನ್ಯಾಮಗೌಡ ತನ್ನ ಕುಲಬಾಂಧವರ ನಡುವೆ ಒಳ್ಳೆಯ ಸಂಬಂಧವನ್ನು ಕಾಪಾಡಿಕೊಂಡು ಬಂದಿದ್ದಾರೆ. ಜೊತೆಗೆ ಕುರುಬ ಮತ್ತು ಮುಸ್ಲಿಮರ ಮತಗಳೂ ಇವನ ಕೈ ಹಿಡಿಯಲಿವೆ.

ಕುರುಬರ ಶ್ರೀಶೈಲ ದಳವಾಯಿ ಈ ಬಾರಿ ಕಾಂಗ್ರೆಸ್ ಪರ ಪ್ರಚಾರದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವುದು ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್ ಆಗಲಿದೆ. ಈ ಎಲ್ಲಾ ಲೆಕ್ಕಾಚಾರಗಳನ್ನು ನೋಡಿದರೆ ಸಿದ್ದು ನ್ಯಾಮಗೌಡರ ಗೆಲುವು ಇಲ್ಲಿ ಗ್ಯಾರಂಟಿ.

ಜೆಡಿಎಸ್‌ನ ರಾಮಪ್ಪ ನಾಯಕ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಷ್ಟೆ.

■ ಮೇಘರಾಜ್

R B P LANKESH, Kannada Weekly Price Rs. 12/- 28-5-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B lore





ಆಮೀರನ ಕುತಂತ್ರ ಶಾರುಖ್‌ನ ಔದಾರ್ಯ

"ನಾನು ನದಿಯೊಂದರ ಪಕ್ಕ ಕೂತಿದ್ದೆ. ಶಾರುಖ್ ಖಾನ್ ನನ್ನ ಜಾಗದ ಬಳಿ ಕೂತು ನನ್ನ ಕಾಲುಗಳನ್ನು ನೆಕ್ಕುತ್ತಿದ್ದಾನೆ. ನಾನು ಆಗಾಗ ಅವನಿಗೆ ಹಲವು ಬಿಸ್ಕತ್‌ಗಳನ್ನು ಬಿಸಾಡುತ್ತಿದ್ದೇನೆ. ನನಗೆ ಇದಕ್ಕಿಂತ ಇನ್ನೇನು ಬೇಕು?" ಹೀಗಂತ ತನ್ನ ಬ್ಲಾಗ್‌ಸ್ಪಾಟಿನಲ್ಲಿ ಅಮೀರ್‌ಖಾನ್ ಬರೆದದ್ದು ಈಗ ಎಲ್ಲೆಡೆ ವಿವಾದಕ್ಕೆ ಕಾರಣವಾಗಿದೆ. ಅಂದಹಾಗೆ, ಅಮೀರ್ ತನ್ನ ಕಾಲ ಬಳಿ ಕೂತಿರುವುದು ಶಾರುಖ್‌ಖಾನ್ ಎಂಬ ಹೆಸರಿನ ನಾಯಿ ಎಂದು ಸ್ಪಷ್ಟಪಡಿಸುತ್ತಾನೆ. ಆದರೆ ಅದನ್ನು ಅಲ್ಲಿಗೇ ನಿಲ್ಲಿಸದೆ ಕೊನೆ ಸಾಲಿನಲ್ಲಿ "ಈ ಶಾರುಖ್ ಮತ್ತೆ ನನ್ನ ಗಮನವನ್ನು ಸೆಳೆಯುತ್ತಿದ್ದಾನೆ. ಆತ ಗಬ್ಬು ನಾರುತ್ತಿದ್ದಾನೆ. ಅವನಿಗೆ ಸ್ನಾನ ಮಾಡಿಸಬೇಕು. ಬೇರ್ಯ? ತೆಪ್ಪಗೆ ಇರು" ಎಂದು ದಾಖಲಿಸುತ್ತಾನೆ.

ಅಮೀರ್‌ಖಾನ್ ತನ್ನ ಸಹೋದ್ಯೋಗಿ ಶಾರುಖ್‌ಖಾನ್ ಬಗ್ಗೆ ತನ್ನ ಕುತಂತ್ರ ಬುದ್ಧಿಯನ್ನು ಹೀಗೆ ಪ್ರದರ್ಶಿಸಿರುವುದು ಇದೇ ಮೊದಲಲ್ಲ. ಹಿಂದೊಮ್ಮೆ ಪತ್ರಕರ್ತರೊಬ್ಬರು "ಶಾರುಖ್‌ಖಾನ್‌ಗೆ ನೀವು ಪ್ರಶ್ನೆಯೊಂದನ್ನು ಕೇಳಬೇಕಿದ್ದರೆ ಏನನ್ನು ಕೇಳುತ್ತೀರಿ?" ಎಂದದ್ದಕ್ಕೆ ಆತ "ಅಮೀರನ ನಂತರ ನಂಬರ್ ಟು ಸ್ಥಾನದಲ್ಲಿರುವ ಬಗ್ಗೆ ಹೇಗನ್ನಿಸುತ್ತದೆ ಎಂದು ಕೇಳುತ್ತೇನೆ" ಎಂದಿದ್ದ.

ಅಮೀರನ ಇಂತಹ ಕುತಂತ್ರ ಬುದ್ಧಿಯ ಎದುರು ಶಾರುಖ್ ಮಾತ್ರ ಮೊದಲಿನಿಂದಲೂ ತಾಳ್ಮೆ ಪ್ರದರ್ಶಿಸುತ್ತಲೇ ಬಂದಿದ್ದಾನೆ. ಅಂದಿನ ಆ ಪ್ರಶ್ನೆ ಬಗ್ಗೆ "ಹೌದು, ಅಮೀರ್ ನಂಬರ್ ಒನ್ ಸ್ಥಾನದಲ್ಲಿದ್ದು ನಾನು ನಂಬರ್ ಟು ಸ್ಥಾನದಲ್ಲಿದ್ದೇನೆ" ಎಂದಷ್ಟೇ ಹೇಳಿದ್ದ. ಈಗಲೂ ಅಷ್ಟೇ, ತನ್ನನ್ನು ನಾಯಿಯೊಂದಕ್ಕೆ ಹೋಲಿಸಿರುವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಶಾರುಖ್ ಖಾನ್ "ನಾವು ನಟರು. ಪತ್ರಕರ್ತರಲ್ಲ. ಹೀಗೆ ಬ್ಲಾಗ್‌ಸ್ಪಾಟಿನಲ್ಲಿ ಬರೆಯುತ್ತಾ ಕೂರುವ ಬದಲು ನಾವು ನಟನೆಯಲ್ಲಿ ತೊಡಗಬೇಕು" ಎಂದಷ್ಟೇ ಹೇಳಿದ್ದಾನೆ.

ಅಮೀರನ ಕುತಂತ್ರವೆಲ್ಲಿ, ಶಾರುಖ್‌ನ ಔದಾರ್ಯವೆಲ್ಲಿ?



ಬೋನಸ್ ಬೆರಳುಗಳ ಸ್ಟಾರ್‌ಗಳು

ಸಾಮಾನ್ಯವಾಗಿ ಎಲ್ಲರ ಕೈಗಳಲ್ಲಿ ಒಟ್ಟು ಹತ್ತು ಬೆರಳುಗಳಿರುತ್ತವೆ. ಆದರೆ ಅಪರೂಪಕ್ಕೊಮ್ಮೆ ಕೆಲವರು ಇನ್ನೊಂದು ಅಥವಾ ಎರಡು ಬೆರಳುಗಳೊಂದಿಗೆ ಹುಟ್ಟಿರುತ್ತಾರೆ. ಇತ್ತೀಚೆಗೆ ಅಂತಹ ಎಕ್ಸಟ್ರಾ ಬೆರಳುಗಳನ್ನು ಹೊಂದಿರುವ ಜನ ಚಿತ್ರರಂಗದಲ್ಲಿ ಯಶಸ್ಸು ಕಂಡಿರುವುದರಿಂದ ಅದಕ್ಕೆ ಕಾರಣ ಅವರ ಎಕ್ಸಟ್ರಾ ಬೆರಳುಗಳು ಎಂದೇ ಎಲ್ಲರೂ ಭಾವಿಸಿದ್ದಾರೆ. ಹೇಳಿಕೇಳಿ ಇವರು ಮೂಢನಂಬಿಕೆಯ ಆಗರವಾಗಿರುವ ಚಿತ್ರಲೋಕದವರಲ್ಲವೇ?!

ಬಾಲಿವುಡ್‌ನಲ್ಲಿ ತನ್ನದೇ ಆದ ಅಭಿಮಾನಿ ವರ್ಗವನ್ನು ಹೊಂದಿರುವ ಸುರದ್ರೂಪಿ ಹೃತಿಕ್ ರೋಶನ್‌ಗೆ ಆರು ಬೆರಳುಗಳಿದ್ದು ಅವುಗಳನ್ನು ಮರೆಮಾಚಲು ಆತ ವಿಶೇಷ ಪ್ರಯತ್ನಗಳನ್ನೇನು ಮಾಡುವುದಿಲ್ಲ. ಇನ್ನು ತಮಿಳುನಾಡಿನಲ್ಲಿ ಕಮಲ್‌ಹಾಸನ್ ಮತ್ತು ರಜನೀಕಾಂತ್ ನಂತರದ ಸ್ಥಾನದಲ್ಲಿರುವ ವಿಜಯನ್‌ನ ಬಲಗೈಯಲ್ಲೂ ಆರು ಬೆರಳುಗಳಿವೆ. ಇಷ್ಟೇ ಅಲ್ಲದೆ ರಜನೀಕಾಂತ್‌ರ 'ಚಂದ್ರಮುಖಿ' ಚಿತ್ರದ ಮುಖಾಂತರ ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುತ್ತಿರುವ ನಾಯಕಿಯಾಗಿ ಹೊಮ್ಮಿರುವ ನಯನ್ ತಾರಾಳಿಗೂ ಆರು ಬೆರಳುಗಳಿವೆ.



ಇನ್ನೊಂದು ವಿಚಿತ್ರ ಸಂಗತಿ ಯಾವುದೆಂದರೆ, ಈ ಮೂವರ ಯಶಸ್ಸಿಗೆ ಅವರ ಹನ್ನೊಂದು ಬೆರಳುಗಳೇ ಕಾರಣ ಎಂದು ಚಿತ್ರರಂಗದವರು ತರ್ಕಿಸುತ್ತಿದ್ದರೆ, ಈ ಮೂವರು ಕೂಡ ತಮ್ಮ ಲಕ್ಕಿಗೆ ತಮ್ಮ ಬೋನಸ್ ಬೆರಳೇ ಅದೃಷ್ಟ ತಂದಿದೆ ಎಂದಿದ್ದಾರೆ.



ಜನ ಮರುಳೋ, ಜಾತ್ರೆ ಮರುಳೋ, ಬಲ್ಲವರ್‍ಯಾರು?

ಬದಲಾದಳೇ ರಮ್ಯಾ?



ರಮ್ಯಾ ಬದಲಾಗಿದ್ದಾಳೆ, ಆಕೆಯ ಹಳೆಯ ಕೊಬ್ಬು ಕೂಡ ಈಗ ಮಾಯವಾಗಿದೆ ಎಂಬುದಕ್ಕೆ ಇಲ್ಲೊಂದು ಸಣ್ಣ ಸ್ಯಾಂಪಲ್ ಇದೆ.

ಮೊನ್ನೆ 'ಮುಸ್ಸಂಜೆಯ ಮಾತು' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ ಆ ಚಿತ್ರದ ಹೀರೋ ಸುದೀಪ್ "ರಮ್ಯಳ ಹಳೆಯ ಚಿತ್ರಗಳಿಗೆ ಹೋಲಿಸಿದರೆ ಈಕೆ ಈ ಚಿತ್ರದಲ್ಲಿ ತುಂಬಾ ಇಂಪ್ರೂವ್ ಆಗಿದ್ದಾಳೆ. ಈಕೆಗೆ ಉತ್ತಮ ಭವಿಷ್ಯವಿದೆ" ಎಂದು ಸರ್ಟಿಫಿಕೇಟ್ ನೀಡಿದರು.

ಇದೇ ಮಾತನ್ನು ಹಿಂದೆಂದಾದರೂ ಸುದೀಪ್ ಆಡಿದ್ದರೆ ರಮ್ಯ ಖಂಡಿತವಾಗಿಯೂ ಕೋಪಗೊಳ್ಳುತ್ತಿದ್ದಳು. "ನೀನೂ ಕೂಡ ನಿನ್ನ ಹಳೆಯ ಚಿತ್ರಗಳಿಗಿಂತ ಇದರಲ್ಲಿ ಇಂಪ್ರೂವ್ ಆಗಿದ್ದೀಯ" ಎಂದು ಪ್ರಾಯಶಃ ತಿರುಗೇಟು ನೀಡುತ್ತಿದ್ದಳು. ಯಾಕೆಂದರೆ ರಮ್ಯಾ ಯಾರಿಗೂ ಮುಲಾಜು ತೋರಿಸದ ಯುವತಿ.

ಆ ಕಾರಣಕ್ಕಾಗಿಯೇ ಮೊನ್ನಿನ ಪತ್ರಿಕಾಗೋಷ್ಠಿಯಲ್ಲಿ ಸುದೀಪ್ ನಂತರ ಮೈಕನ್ನು ಕೈಗೆತ್ತಿಕೊಂಡ ರಮ್ಯಾ ಆತನ ಮೇಲೆ ಏನಾದರೊಂದು ಬಾಂಬ್ ಸಿಡಿಸಬಹುದು ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಆಕೆ ಮಾತ್ರ "ಥ್ಯಾಂಕ್ಯೂ ಫಾರ್ ಯುವರ್ ಕಾಂಪ್ಲಿಮೆಂಟ್ಸ್" ಎಂದು ಸುದೀಪ್ ಕಡೆ ನಗುನಗುತ್ತಾ ಹೇಳಿ, ಆನಂತರ "ಹೊಸ ನಿರ್ದೇಶಕರಿಗೆ ಗ್ರೇಸ್ ಮಾರ್ಕ್ ಕೊಟ್ಟು ಅವರನ್ನು ಬೆಳೆಸಿ" ಎಂದು ಪತ್ರಕರ್ತರಲ್ಲಿ ಮನವಿ ಮಾಡಿಕೊಂಡಳು.

ರಮ್ಯ ನಿಜವಾಗಲೂ ಬದಲಾಗಿದ್ದಾಳೆ ಅಲ್ಲವೇ?



'ಬಾ ಬೇಗ ಚಂದಮಾಮಾ' ಸುಹಾಸಿನಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore